prajavani.net prajavani
ಶುಕ್ರವಾರ, ಜನವರಿ 16, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 16 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕರುಣ್ ಅರ್ಧಶತಕ
ಕರ್ನಾಟಕ ತಂಡದ ಕರುಣ್ ನಾಯರ್ (76;90ಎ) ಅವರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಅರ್ಧಶತಕ ದಾಖಲಿಸಿದರು. ಈ ಪಂದ್ಯವನ್ನು ವಿದರ್ಭ 6 ವಿಕೆಟ್‌ಗಳಿಂದ ಗೆದ್ದಿತು



ಆನೆ ಕಾರ್ಯಪಡೆ: 15 ಹುದ್ದೆ, 11 ಖಾಲಿ 7
ರಾಜೀವ್ ಗೌಡ ವಿರುದ್ಧ ಕ್ರಮಕ್ಕೆ ಒತ್ತಾಯ 4

ಬೊಕ್ಕಸ: ₹13 ಸಾವಿರ ಕೋಟಿ ನಷ್ಟ

ರಾಜ್ಯದ ಸ್ವಂತ ತೆರಿಗೆ ಆದಾಯ • ಡಿಸೆಂಬರ್ ಅಂತ್ಯಕ್ಕೆ ಶೇ 68ರಷ್ಟೇ ಗುರಿ ಸಾಧನೆ • 3 ತಿಂಗಳಲ್ಲಿ ₹65,000 ಕೋಟಿ ಸಂಗ್ರಹ ಸವಾಲು

• ಜಯಸಿಂಹ ಆರ್.

ಆದಾಯ ಲೆಕ್ಕಾಚಾರ: ಏನು, ಎತ್ತ
- **₹2.03** ಲಕ್ಷ ಕೋಟಿ — ತೆರಿಗೆ ರೂಪದ ಆದಾಯ ಸಂಗ್ರಹ ಗುರಿ
- **₹1.38** ಲಕ್ಷ ಕೋಟಿ — 2025ರ ಏಪ್ರಿಲ್‌ನಿಂದ ಡಿಸೆಂಬರ್ ಅಂತ್ಯದವರೆಗೆ ಸಂಗ್ರಹವಾದ ಆದಾಯ
- **₹65,000** ಕೋಟಿ — 2026ರ ಜನವರಿಯಿಂದ ಮಾರ್ಚ್ ಅಂತ್ಯದವರೆಗೆ ಸಂಗ್ರಹಿಸಬೇಕಿರುವ ಆದಾಯ

ಬೆಂಗಳೂರು: ರಾಜ್ಯ ಸರ್ಕಾರವು ಈ ಆರ್ಥಿಕ ವರ್ಷದಲ್ಲಿ ₹2.03 ಲಕ್ಷ ಕೋಟಿ ಆದಾಯ ಸಂಗ್ರಹಿಸುವ ಗುರಿ ಹಾಕಿಕೊಂಡಿದ್ದು, ಒಂಬತ್ತು ತಿಂಗಳಲ್ಲಿ ₹1.38 ಲಕ್ಷ ಕೋಟಿಯಷ್ಟೇ ಸಂಗ್ರಹವಾಗಿದೆ. ವರ್ಷದ ಅಂತ್ಯಕ್ಕೆ ಒಟ್ಟು ತೆರಿಗೆ ಸಂಗ್ರಹದಲ್ಲಿ ₹9,000 ಕೋಟಿಯಿಂದ ₹13,000 ಕೋಟಿ ಖೋತಾ ಆಗುವ ಅಂದಾಜಿದೆ.

2025ರ ಮಾರ್ಚ್‌ನಲ್ಲಿ ಮಂಡಿಸಲಾಗಿದ್ದ ಬಜೆಟ್‌ನಲ್ಲಿ ಸ್ವಂತ ತೆರಿಗೆ ಮೂಲಗಳಿಂದ ಇಷ್ಟು ಮೊತ್ತದ ಆದಾಯ ಕ್ರೋಡೀಕರಣ ಆಗಬಹುದು ಎಂದು ಅಂದಾಜಿಸಲಾಗಿತ್ತು. ಅದರ ಆಧಾರದಲ್ಲಿ, ಖರ್ಚನ್ನು ಲೆಕ್ಕ ಹಾಕಲಾಗಿತ್ತು.

ಆಸ್ತಿ ಮತ್ತು ದಸ್ತಾವೇಜುಗಳ ನೋಂದಣಿಯಲ್ಲಿನ ಸಮಸ್ಯೆ ಮತ್ತು ಕೇಂದ್ರ ಸರ್ಕಾರವು ಜಿಎಸ್‌ಟಿಯಲ್ಲಿ ಮಾಡಿದ ಬದಲಾವಣೆಯಿಂದಾಗಿ ಗಣನೀಯ ಪ್ರಮಾಣದಲ್ಲಿ ಆದಾಯ ಖೋತಾ ಆಗಿದೆ. ಇವುಗಳ ಮಧ್ಯೆಯೇ ರಾಜ್ಯ ಸರ್ಕಾರವು ಆದಾಯ ಗಳಿಕೆಯಲ್ಲಿ ಶೇ 68ರಷ್ಟು ಗುರಿ ಸಾಧಿಸಿದೆ. ಉಳಿದ ಮೂರು ತಿಂಗಳಲ್ಲಿ ಇನ್ನೂ ₹65,000 ಕೋಟಿ ಸಂಗ್ರಹಿಸುವ ಸವಾಲು ಸರ್ಕಾರದ ಮುಂದಿದ್ದು, ಗರಿಷ್ಠ ₹56,000 ಕೋಟಿಯಷ್ಟೇ ಸಂಗ್ರಹ ಆಗಬಹುದು ಎಂದು ಅಂದಾಜಿಸಲಾಗಿದೆ.



ಈ ಆರ್ಥಿಕ ವರ್ಷದ ಮೊದಲ ಐದು ತಿಂಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಆದಾಯ ಗಳಿಕೆಯಲ್ಲಿ ಸರಾಸರಿ ಶೇ 16–17ರಷ್ಟು ಪ್ರಗತಿ ಸಾಧಿಸಿತ್ತು. ಆದರೆ, ಜಿಎಸ್‌ಟಿ ಸ್ಲ್ಯಾಬ್‌ಗಳ ಬದಲಾವಣೆಯ ನಂತರ ಈ ಬೆಳವಣಿಗೆ ದರ ಕುಸಿದಿದೆ. ಆರ್ಥಿಕ ಇಲಾಖೆ ಅಧಿಕಾರಿಗಳ ಅಂದಾಜಿನ ಪ್ರಕಾರ ವಾಣಿಜ್ಯ ತೆರಿಗೆ ಸಂಗ್ರಹದಲ್ಲೇ ₹7,000 ಕೋಟಿಯಿಂದ ₹9,000 ಕೋಟಿ ನಷ್ಟ ಆಗಬಹುದು.


‘ಮೋಟಾರು ವಾಹನ ತೆರಿಗೆ ಸಂಗ್ರಹದಲ್ಲಿ, ಆಯಾ ತ್ರೈಮಾಸಿಕದ ಅಂತ್ಯಕ್ಕೆ ಸರಾಸರಿ ಶೇ 90–93ರಷ್ಟು ಗುರಿ ಸಾಧಿಸಲಾಗಿದೆ. ಇನ್ನು ಮೂರು ತಿಂಗಳಲ್ಲಿ ಒಟ್ಟು, ₹13,500 ಕೋಟಿಯಷ್ಟು ಮೋಟಾರು ವಾಹನ ತೆರಿಗೆ ಸಂಗ್ರಹ ವಾಗಬಹುದು ಎಂದು ನಿರೀಕ್ಷಿಸಲಾಗಿದೆ. ಹೀಗಿದ್ದೂ ಗುರಿಯಲ್ಲಿ ಶೇ 10ರಷ್ಟು ಖೋತಾ ಆಗಬಹುದು’ ಎಂಬ ಅಂದಾಜು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರದು.

‘ಬಿಯರ್ ಮಾರಾಟದಲ್ಲಿ ಕುಸಿತದ ಮಧ್ಯೆಯೂ ಅಬಕಾರಿ ತೆರಿಗೆಯ ಸಂಗ್ರಹದಲ್ಲಿ ನಿರೀಕ್ಷಿತ ಮಟ್ಟದ ಬೆಳವಣಿಗೆ ದಾಖಲಾಗಿದೆ. ಇಲಾಖೆಯು ಪ್ರತಿ ತಿಂಗಳು ಸರಾಸರಿ ₹3,500 ಕೋಟಿ ಆದಾಯ ಗಳಿಸಿದೆ. ಒಂಬತ್ತು ತಿಂಗಳಲ್ಲಿ ಸುಮಾರು ₹30,000 ಕೋಟಿ ಸಂಗ್ರಹಿಸಲಾಗಿದೆ. ಉಳಿದ ಮೂರು ತಿಂಗಳಲ್ಲಿ ಬಜೆಟ್ ಗುರಿ ದಾಟುತ್ತೇವೆ. ಸನ್ನದುಗಳ ಹರಾಜಿನ ಮೂಲಕ ₹40,000 ಕೋಟಿಯ ಗುರಿ ಮುಟ್ಟುತ್ತೇವೆ’ ಎಂದು ಅಬಕಾರಿ ಇಲಾಖೆಯ ಅಧಿಕಾರಿ ಒಬ್ಬರು ವಿಶ್ವಾಸ ವ್ಯಕ್ತಪಡಿಸಿದರು.

ಈ ಒಂಬತ್ತು ತಿಂಗಳಲ್ಲಿ ಕಡಿಮೆ ಪ್ರಗತಿ ಸಾಧಿಸಿರುವುದು ನೋಂದಣಿ ಮತ್ತು ಮುದ್ರಾಂಕ ಇಲಾಖೆ. ಒಟ್ಟು ಗುರಿಯಲ್ಲಿ ಶೇ 65ರಷ್ಟು ಮಾತ್ರ ಆದಾಯ ಸಂಗ್ರಹವಾಗಿದೆ. ಕಾವೇರಿ ತಂತ್ರಾಂಶದಲ್ಲಿನ ಸಮಸ್ಯೆಗಳು, ಕಾವೇರಿ 2.0 ಮತ್ತು ಇ–ಸ್ವತ್ತು ಜಾರಿಯ ನಂತರ ನೋಂದಣಿ ಕೆಲಸ ನಿಧಾನವಾಗುತ್ತಿದೆ. ಸರ್ವರ್ ಸಮಸ್ಯೆಯಿಂದ ನೋಂದಣಿಯಾಗುತ್ತಿಲ್ಲ. ಇದರಿಂದಾಗಿ ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ. ಆರ್ಥಿಕ ವರ್ಷಾಂತ್ಯದ ವೇಳೆಗೆ ₹24,000 ಕೋಟಿಯಷ್ಟು ಆದಾಯ ಸಂಗ್ರಹವಾಗಬಹುದು ಎಂಬುದು ಇಲಾಖೆಯ ಅಧಿಕಾರಿಯೊಬ್ಬರ ಅಂದಾಜು.

ಆರ್ಥಿಕ ಇಲಾಖೆ ಅಧಿಕಾರಿಗಳ ಪ್ರಕಾರ ಮೋಟಾರು ವಾಹನ ತೆರಿಗೆ, ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದಲೇ ಸುಮಾರು ₹5,000 ಕೋಟಿ ಆದಾಯ ಖೋತಾ ಆಗಲಿದೆ. ಕೇಂದ್ರ ಸರ್ಕಾರದ ಸಹಾಯಾನುದಾನವೂ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿರುವುದರಿಂದ, ರಾಜ್ಯವು ತುಸು ಆರ್ಥಿಕ ಬಿಕ್ಕಟ್ಟು ಎದುರಿಸಬೇಕಾಗುತ್ತದೆ.

- ಬಿಯರ್ ಮಾರಾಟ ಕುಸಿತದ ಮಧ್ಯೆಯೂ ಅಬಕಾರಿ ಮೂಲದ ಆದಾಯ ಸಂಗ್ರಹದಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿ
- ಮೋಟಾರು ವಾಹನ ತೆರಿಗೆ ಸಂಗ್ರಹದಲ್ಲಿ ಶೇ 10ರಷ್ಟು ಖೋತಾ ಸಾಧ್ಯತೆ
- ಕಾವೇರಿ2.0, ಇ–ಸ್ವತ್ತು ಜಾರಿಯಿಂದ ನೋಂದಣಿ ಮತ್ತು ಮುದ್ರಾಂಕ ಮೂಲದ ಆದಾಯದಲ್ಲಿ ಕುಂಠಿತ ಪ್ರಗತಿ
- ಜಿಎಸ್‌ಟಿ ಸ್ಲ್ಯಾಬ್‌ಗಳ ಬದಲಾವಣೆಯಿಂದ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಭಾರಿ ಕುಸಿತ



ಕಿಚ್ಚು...

ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.



ಮೈಸೂರು ತಾಲ್ಲೂಕಿನ ಸಿದ್ದಲಿಂಗಪುರದಲ್ಲಿ ಗುರುವಾರ ಸಂಜೆ ಸಂಕ್ರಾಂತಿ ಅಂಗವಾಗಿ ಕಿಚ್ಚು ಹಾಯಿಸುವ ಕಾರ್ಯಕ್ರಮದಲ್ಲಿ ಯುವಕನೊಬ್ಬ ರಾಸು ಹಿಡಿದು ಬೆಂಕಿಯಲ್ಲಿ ಜಿಗಿದ ಪರಿ

ಮೂರು ಕೊಲ್ಲಿ ರಾಷ್ಟ್ರಗಳಿಂದ ಟ್ರಂಪ್ ಮನವೊಲಿಕೆ

ಮರಣ ದಂಡನೆ ನಿರ್ಧಾರ ಕೈಬಿಟ್ಟ ಇರಾನ್

ದುಬೈ / ಪ್ಯಾರಿಸ್ / ವಾಷಿಂಗ್ಟನ್ / ರಿಯಾದ್(ಎಪಿ/ಎಎಫ್‌ಪಿ): ಪ್ರಮುಖ ಬೆಳವಣಿಗೆಯೊಂದರಲ್ಲಿ, ಬಂಧಿತ ಪ್ರತಿಭಟನಕಾರರ ವಿಚಾರಣೆಯನ್ನು ತ್ವರಿತವಾಗಿ ನಡೆಸಿ, ಅವರನ್ನು ಮರಣ ದಂಡನೆಗೆ ಗುರಿಪಡಿಸುವ ತನ್ನ ನಿರ್ಧಾರದಿಂದ ಹಿಂದೆ ಸರಿದಿದ್ದಾಗಿ ಇರಾನ್‌ನ ನ್ಯಾಯಾಂಗ ಗುರುವಾರ ಹೇಳಿದೆ.

ಅಮೆರಿಕದ ಕೋರಿಕೆಯಂತೆ ಇರಾನ್ ಬೆಳವಣಿಗೆ ಕುರಿತು ಚರ್ಚಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಸಭೆ ಕರೆದಿತ್ತು. ಆದರೆ, ಸಭೆ ನಡೆಯುವ ಕೆಲವು ಗಂಟೆಗಳ ಮುನ್ನ ಮರಣದಂಡನೆ ಜಾರಿಗೊಳಿಸುವ ನಿರ್ಧಾರದಿಂದ ಇರಾನ್ ಹಿಂದೆ ಸರಿದಿರುವ ಮಾಹಿತಿ ಹೊರಬಿದ್ದಿದೆ.

10

ಪ್ರಮುಖ ಅಂಶಗಳು
- ಗುರುವಾರ ಬೆಳಿಗ್ಗೆ ನಾಲ್ಕು ಗಂಟೆಗಳಷ್ಟು ಇರಾನ್ ತನ್ನ ವಾಯುಪ್ರದೇಶವನ್ನು ಬಂದ್ ಮಾಡಿತ್ತು. ಇರಾನ್ ವಾಯುಪ್ರದೇಶವು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳನ್ನು ಸಂಪರ್ಕಿಸುವ ಪ್ರಮುಖ ವಾಯುಮಾರ್ಗವಾಗಿರುವ ಕಾರಣ ಅನೇಕ ಅಂತರರಾಷ್ಟ್ರೀಯ ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಗಿತ್ತು
- ಫೆ.10ರ ವರೆಗೆ ಇರಾನ್ ವಾಯುಪ್ರದೇಶದ ಮೂಲಕ ವಿಮಾನಗಳ ಸಂಚಾರ ಸ್ಥಗಿತಗೊಳಿಸುವಂತೆ ಜರ್ಮನಿಯ ವಿಮಾನ ಸುರಕ್ಷತಾ ಕಚೇರಿ ಸಲಹೆ ನೀಡಿದೆ
- ಅಮೆರಿಕದಲ್ಲಿ ಆಶ್ರಯ ಪಡೆದಿರುವ ಇರಾನ್‌ನ ನಾಯಕ ರೆಜಾ ಪಹ್ಲವಿ ಆಡಳಿತದ ಚುಕ್ಕಾಣಿ ಹಿಡಿಯಲು ಯೋಗ್ಯ ವ್ಯಕ್ತಿ ಎಂದು ಕಂಡುಬರುತ್ತದೆ. ಆದರೆ, ಅವರಿಗೆ ಜನರ ಬೆಂಬಲ ಸಿಗುವ ಬಗ್ಗೆ ಅನುಮಾನವಿದೆ ಎಂದು ಟ್ರಂಪ್ ಹೇಳಿದ್ದಾರೆ
- ಇರಾನ್‌ನಲ್ಲಿ ಕಳೆದ ಒಂದು ವಾರದಿಂದ ಕಂಡುಬಂದ ಆಡಳಿತ ವಿರೋಧಿ ಪ್ರತಿಭಟನೆಗಳು ತೀವ್ರತೆಯನ್ನು ಕಳೆದುಕೊಂಡಿರುವಂತೆ ಗುರುವಾರ ಕಂಡುಬಂತು. ಪ್ರತಿಭಟನೆಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕಠಿಣ ಕ್ರಮಗಳೇ ಇದಕ್ಕೆ ಕಾರಣ ಎನ್ನಲಾಗುತ್ತಿದೆ. ರಾಜಧಾನಿ ಟೆಹರಾನ್‌ನ ಬೀದಿಗಳಲ್ಲಿ ಯಾವುದೇ ಪ್ರತಿಭಟನೆ, ರಾತ್ರಿ ವೇಳೆ ಪಂಜಿನ ಮೆರವಣಿಗೆಗಳು ಕಂಡುಬಂದಿಲ್ಲ ಎಂದು ಕೆಲವು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ರಾಹುಲ್ ಗಾಂಧಿ ರಾಮ ಮಂದಿರ ಭೇಟಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಲಖನೌ: ಕಾಂಗ್ರೆಸ್ ನಾಯಕ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಯೋಧ್ಯೆಯ ರಾಮಮಂದಿರಕ್ಕೆ ಭೇಟಿ ನೀಡುವ ಸಾಧ್ಯತೆಗಳಿವೆ ಎಂಬ ವರದಿಗಳ ನಡುವೆಯೇ ಮಂದಿರಕ್ಕೆ ರಾಹುಲ್ ಭೇಟಿ ನೀಡಬಾರದು ಎಂದು ಸನ್ಯಾಸಿಗಳ ಗುಂಪೊಂದು ಆಗ್ರಹಿಸಿದೆ.



ರಾಹುಲ್ ಗಾಂಧಿ

2024ರಲ್ಲಿ ಬಾಲರಾಮನ ಪ್ರಾಣಪ್ರತಿಷ್ಠೆ ಸಮಾರಂಭವನ್ನು ಕಾಂಗ್ರೆಸ್ ಪಕ್ಷವು ‘ರಾಜಕೀಯ ನಾಟಕ’ ಎಂದು ಕರೆದಿದ್ದಕ್ಕಾಗಿ ರಾಹುಲ್ ಭೇಟಿಗೆ ವಿರೋಧ ವ್ಯಕ್ತಪಡಿಸುತ್ತಿರುವುದಾಗಿ ತಿಳಿದುಬಂದಿದೆ.

ರಾಹುಲ್ ಭೇಟಿ ಕುರಿತು ಕಾಂಗ್ರೆಸ್ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

11

‘ಕಾಡು’ಗೋಡಿಯಲ್ಲಿ ಎಂಬೆಸಿ ಐ.ಟಿ ಪಾರ್ಕ್

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಕಾಡುಗೋಡಿಯ 449 ಎಕರೆ ಅರಣ್ಯ ಭೂಮಿಯನ್ನು ರಕ್ಷಿಸಲು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದ್ದು, ಅದೇ ಭೂಮಿಯ 78.54 ಎಕರೆ ಪ್ರದೇಶದಲ್ಲಿ ಎಂಬೆಸಿ ಗ್ರೂಪ್‌ಗೆ ಸೇರಿದ ಕಂಪನಿಯೊಂದು ಮಾಹಿತಿ ತಂತ್ರಜ್ಞಾನ (ಐಟಿ) ಪಾರ್ಕ್ ನಿರ್ಮಾಣ ಕಾರ್ಯ ಆರಂಭಿಸಿದೆ.

ಸುಪ್ರೀಂ ಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವಂತೆ ಅರಣ್ಯ ಇಲಾಖೆ ಸರ್ಕಾರಕ್ಕೆ ಮನವಿ ಸಲ್ಲಿಸಿ ನಾಲ್ಕು ತಿಂಗಳು ಕಳೆದಿದ್ದರೂ ರಾಜ್ಯ ಸರ್ಕಾರ ನಿರಾಸಕ್ತಿ ತೋರಿದೆ.

ಲಭ್ಯವಿರುವ ದಾಖಲೆಗಳ ಪ್ರಕಾರ, ಕಾಡುಗೋಡಿ ನೆಡುತೋಪು ಸರ್ವೆ ನಂ 1ರಲ್ಲಿ ಒಟ್ಟು 711 ಎಕರೆ ಭೂಮಿಯನ್ನು ಮೈಸೂರು ಸರ್ಕಾರ 1901ರಲ್ಲಿ ‘ರಾಜ್ಯ ಮೀಸಲು ಅರಣ್ಯ’ವೆಂದು ಘೋಷಿಸಿತ್ತು. ಆದರೆ, 120 ಎಕರೆ ಹೊರತುಪಡಿಸಿ ಉಳಿದ ಭೂಮಿಯನ್ನು ವಶಕ್ಕೆ ಪಡೆಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ. ಈ ಜಮೀನಿನ ಮಾರುಕಟ್ಟೆ ಮೌಲ್ಯ ಸುಮಾರು ₹22,000 ಕೋಟಿ ಎಂದು ಅಂದಾಜಿಸಲಾಗಿದೆ.

‘2024ರಲ್ಲಿ ಸ್ವಾಧೀನಪಡಿಸಿಕೊಂಡಿದ್ದ 120 ಎಕರೆ ಭೂಮಿಯ ಮಾರುಕಟ್ಟೆ ಮೌಲ್ಯ ಸುಮಾರು ₹6,000 ಕೋಟಿ ಎಂದು ಅಂದಾಜಿಸಿದ್ದು, ಪ್ರತಿ ಎಕರೆಗೆ ಸರಾಸರಿ ₹50 ಕೋಟಿ ಮೌಲ್ಯವಿದೆ. ಸಂಪೂರ್ಣ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಕರಣವನ್ನು ಪುನರ್ ತೆರೆದು ಸುಪ್ರೀಂ ಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದರು. ಅವರ ಹೇಳಿಕೆಯ ಬೆನ್ನಲ್ಲೇ ‘ಅರಣ್ಯ ಭೂಮಿ ರಕ್ಷಿಸಲು ತಕ್ಷಣ ಮೇಲ್ಮನವಿ ಸಲ್ಲಿಸುವ ಅಗತ್ಯವಿದೆ’ ಎಂದು ಬೆಂಗಳೂರು ವಿಭಾಗದ ಅರಣ್ಯ ಕಚೇರಿಯು ಅರಣ್ಯ ಸಂರಕ್ಷಕರಿಗೆ ಪತ್ರ ಬರೆದಿತ್ತು.

11

ಹೈಕೋರ್ಟ್ ತೀರ್ಪು: 3.65 ಲಕ್ಷ ಹೆಕ್ಟೇರ್‌ಗೆ ಸಂಕಷ್ಟ

ಕಾಡುಗೋಡಿ ಅರಣ್ಯ ಭೂಮಿ ಕುರಿತ ಹೈಕೋರ್ಟ್ ತೀರ್ಪಿನಿಂದ ರಾಜ್ಯದ ಸುಮಾರು 3.65 ಲಕ್ಷ ಹೆಕ್ಟೇರ್ ಅರಣ್ಯ ಅಪಾಯದಲ್ಲಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಕಾಡುಗೋಡಿಯ ಪ್ರದೇಶವನ್ನು ಅರಣ್ಯ ಭೂಮಿ ಎಂದು ಮೈಸೂರು ಸರ್ಕಾರದಿಂದ 1886ರಲ್ಲಿ ಅಧಿಸೂಚನೆ ಹೊರಡಿಸಿತ್ತು. ಆದರೆ, ಆಗ ಉಸ್ತುವಾರಿಯಲ್ಲಿದ್ದ ಮದ್ರಾಸ್ ಸರ್ಕಾರದ ಮುಖ್ಯ ಆಯುಕ್ತರು ಅಧಿಸೂಚನೆ ಹೊರಡಿಸಿಲ್ಲ ಎಂಬ ಕಾರಣ ನೀಡಿದ್ದ ಹೈಕೋರ್ಟ್ ರಾಜ್ಯ ಅರಣ್ಯ ಇಲಾಖೆಯ ಅರ್ಜಿಯನ್ನು ವಜಾ ಮಾಡಿತ್ತು. ಆದರೆ, ಮದ್ರಾಸ್ ಸರ್ಕಾರದ ಮುಖ್ಯ ಆಯುಕ್ತರು ತಮ್ಮ ಅಧಿಕಾರವನ್ನು 1881ರಲ್ಲಿಯೇ ಮೈಸೂರು ದಿವಾನರಿಗೆ ಹಸ್ತಾಂತರಿಸಿದ್ದರು. ಇದಕ್ಕೆ ಸಂಬಂಧಿಸಿದ ದಾಖಲೆಗಳ ಜತೆಗೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು’ ಎಂದು ಅವರು ವಿವರಿಸಿದ್ದಾರೆ.

ಜೈಪುರ: ಬಾನು ಮುಷ್ತಾಕ್ ಮಾತಿನ ಆಕರ್ಷಣೆ

ವಿವರ ಪುಟ 11

‘ಐ–ಪ್ಯಾಕ್’ ಕಚೇರಿಯ ಮೇಲೆ ಇ.ಡಿ. ದಾಳಿ ವೇಳೆ ಸರ್ಕಾರದಿಂದ ಅಡ್ಡಿ

ಮಮತಾಗೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): ರಾಜಕೀಯ ಸಲಹಾ ಸಂಸ್ಥೆ ‘ಐ–ಪ್ಯಾಕ್’ ಕಚೇರಿಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಜನವರಿ 8ರಂದು ನಡೆಸಿದ ಶೋಧದ ವೇಳೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಡ್ಡಿಪಡಿಸಿದ್ದು ‘ಅತಿ ಗಂಭೀರ ವಿಷಯ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಯಾವುದೇ ಗಂಭೀರ ಅಪರಾಧದ ಪ್ರಕರಣದಲ್ಲಿ ಕೇಂದ್ರೀಯ ಸಂಸ್ಥೆಗಳು ನಡೆಸುವ ತನಿಖೆಯಲ್ಲಿ ರಾಜ್ಯದ ತನಿಖಾ ಸಂಸ್ಥೆಗಳು ಮಧ್ಯ ಪ್ರವೇಶಿಸಬಹುದೇ ಎಂಬುದರ ಕುರಿತು ಪರಿಶೀಲನೆ ನಡೆಸಲು ಒಪ್ಪಿಗೆ ಸೂಚಿಸಿದೆ.

‘ಐ–ಪ್ಯಾಕ್’ ಕಚೇರಿ, ಸಂಸ್ಥೆಯ ನಿರ್ದೇಶಕ ಪ್ರತೀಕ್ ಜೈನ್ ಅವರ ನಿವಾಸದಲ್ಲಿ ನಡೆಸಿದ ಶೋಧಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳ ವಿರುದ್ಧ ಪಶ್ಚಿಮ ಬಂಗಾಳ ಸರ್ಕಾರವು ದಾಖಲಿಸಿದ್ದ ಎಫ್‌ಐಆರ್‌ಗೆ ನ್ಯಾಯಾಲಯವು ತಡೆ ನೀಡಿದೆ. ದಾಳಿ ನಡೆಸಿದ ಸಂದರ್ಭದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂರಕ್ಷಿಸುವಂತೆ ರಾಜ್ಯ ಪೊಲೀಸರಿಗೆ ನಿರ್ದೇಶನ ನೀಡಿದೆ.

‘ಐ–ಪ್ಯಾಕ್’ ಕಚೇರಿಯ ಮೇಲೆ ಇ.ಡಿ ದಾಳಿ ನಡೆಸಿದಾಗ ಪಶ್ಚಿಮ ಬಂಗಾಳ ಸರ್ಕಾರ ಅಡ್ಡಿಪಡಿಸಿದರ ಕುರಿತು ಸಿಬಿಐ ತನಿಖೆಗೆ ಕೋರಿ ಇ.ಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ, ವಿಪುಲ್ ಪಂಚೋಲಿ ನೇತೃತ್ವದ ನ್ಯಾಯಪೀಠವು, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಸರ್ಕಾರ, ಡಿಜಿಪಿ ರಾಜೀವ್ ಕುಮಾರ್ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಿದೆ.

‘ನಮ್ಮ ಅಭಿಪ್ರಾಯದ ಪ್ರಕಾರ, ದೇಶದಲ್ಲಿ ಕಾನೂನಿನ ಪಾಲನೆ ಮಾಡುವುದು ಹಾಗೂ ಪ್ರತಿಯೊಂದು ಸಂಸ್ಥೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು ಅತ್ಯಗತ್ಯ. ಅಪರಾಧಿಗಳು ನಿರ್ದಿಷ್ಟ ರಾಜ್ಯಗಳ ಕಾನೂನಿನ ಸಂಸ್ಥೆಗಳಲ್ಲಿ ರಕ್ಷಣೆ ಪಡೆಯದಂತೆ ಪರಿಶೀಲಿಸುವ ಅಗತ್ಯವಿದೆ’ ಎಂದು ನ್ಯಾಯಪೀಠ ತಿಳಿಸಿದೆ.

‘ಗಂಭೀರ ಪ್ರಶ್ನೆಗಳನ್ನು ಈ ಘಟನೆ ಮೂಡಿಸಿದೆ. ಇದನ್ನು ಇತ್ಯರ್ಥ ಪಡಿಸದೇ ಬಿಟ್ಟರೆ, ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ. ಬೇರೆ ಬೇರೆ ರಾಜ್ಯ, ಸ್ಥಳಗಳಲ್ಲಿ ಬೇರೆ ಬೇರೆ ಪಕ್ಷಗಳು ಆಡಳಿತ ನಡೆಸುತ್ತಿದ್ದು, ಕಾನೂನುಬಾಹಿರ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆಯಿದೆ’ ಎಂದು ಪೀಠ ಕಳವಳ ವ್ಯಕ್ತಪಡಿಸಿದೆ.

4

ಮುಖ್ಯಾಂಶಗಳು
- ಇ.ಡಿ ಅಧಿಕಾರಿಗಳ ಮೇಲಿನ ಎಫ್‌ಐಆರ್‌ಗೆ ತಡೆ
- ದಾಳಿ ನಡೆದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸಂರಕ್ಷಿಸಲು ಸೂಚನೆ
- ಫೆಬ್ರುವರಿ 3ಕ್ಕೆ ಮುಂದಿನ ವಿಚಾರಣೆ ನಿಗದಿ

‘ಮುಖ್ಯಮಂತ್ರಿಯಾಗಿ ಹೋಗಿಲ್ಲ, ಟಿಎಂಸಿ ಅಧ್ಯಕ್ಷೆಯಾಗಿ ಹೋಗಿದ್ದೆ’



ಮಮತಾ ಬ್ಯಾನರ್ಜಿ

‘ಟಿಎಂಸಿಯ ಚುನಾವಣಾ ಕೆಲಸ ವಹಿಸಿದ್ದ ಪ್ರತೀಕ್ ಜೈನ್ ಅವರ ‘ಐ–ಪ್ಯಾಕ್’ ಕಚೇರಿಗೆ ದಾಳಿ ನಡೆದಾಗ ಅನಧಿಕೃತ ವ್ಯಕ್ತಿಗಳು ಪ್ರವೇಶಿಸಿದ್ದಾರೆ ಎಂಬ ಮಾಹಿತಿ ತಿಳಿಯಿತು. ಹೀಗಾಗಿ ಜನವರಿ 8ರಂದು ಆ ಕಚೇರಿಗೆ ಭೇಟಿ ನೀಡಿದ್ದೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

‘ಐ–ಪ್ಯಾಕ್’ ಕಚೇರಿಗೆ ಮಮತಾ ಅವರು ಮುಖ್ಯಮಂತ್ರಿಯಾಗಿ ಪ್ರವೇಶಿಸಿರಲಿಲ್ಲ. ತೃಣಮೂಲ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಅಲ್ಲಿಗೆ ತೆರಳಿದ್ದರು’ ಎಂದು ಅವರ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ನ್ಯಾಯಪೀಠಕ್ಕೆ ತಿಳಿಸಿದರು.

‘ಪಶ್ಚಿಮ ಬಂಗಾಳದಲ್ಲಿ ‘ಐ–ಪ್ಯಾಕ್’ ಸಂಸ್ಥೆಯು ಟಿಎಂಸಿಯ ಚುನಾವಣಾ ಮೇಲುಸ್ತುವಾರಿ ವಹಿಸಿದೆ. 2021ರಲ್ಲಿ ಸಂಸ್ಥೆಯ ಜೊತೆಗೆ ಪಕ್ಷವು ಔಪಚಾರಿಕ ಒಪ್ಪಂದವನ್ನು ಮಾಡಿಕೊಂಡಿದೆ. ಈ ವಿಚಾರ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳಿಗೂ ತಿಳಿದಿತ್ತು. ಅಲ್ಲಿ ದತ್ತಾಂಶಗಳನ್ನು ಸಂಗ್ರಹಿಸಿಡಲಾಗಿತ್ತು ಎಂಬುದರ ಅರಿವು ಅವರಿಗಿತ್ತು’ ಎಂದು ಸಿಬಲ್ ಹೇಳಿದರು.

4

ವಿಚಾರಣೆ ವೇಳೆ ಗದ್ದಲ: ಅಸಮಾಧಾನ

ನವದೆಹಲಿ(ಪಿಟಿಐ): ಐ–ಪ್ಯಾಕ್ ಕಚೇರಿಯಲ್ಲಿ ಶೋಧಕ್ಕೆ ಸಂಬಂಧಿಸಿ ಜ.9ರಂದು ಕಲ್ಕತ್ತ ಹೈಕೋರ್ಟ್‌ನಲ್ಲಿ ನಡೆದ ವಿಚಾರಣೆ ವೇಳೆ ಉಂಟಾದ ಗದ್ದಲಕ್ಕೆ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

ನ್ಯಾಯಾಲಯದ ಆವರಣದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸುವಂತೆ ಟಿಎಂಸಿಯ ಕಾನೂನು ವಿಭಾಗವು ವಾಟ್ಸ್‌ಆ್ಯಪ್ ಸಂದೇಶಗಳನ್ನು ರವಾನಿಸಿತ್ತು’ ಎಂದು ಇ.ಡಿಯ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸುಪ್ರೀಂ ಕೋರ್ಟ್ ನ್ಯಾಯಪೀಠದ ಗಮನಸೆಳೆದರು. ‘ಪ್ರಜಾಪ್ರಭುತ್ವವು ದೊಂಬಿ ಪ್ರಭುತ್ವವಾಗಿ ಬದಲಾಯಿತು. ಇದನ್ನೇ ಹೈಕೋರ್ಟ್‌ನ ದಾಖಲೆಗಳು ತಿಳಿಸುತ್ತಿವೆ. ದೊಡ್ಡ ಸಂಖ್ಯೆಯಲ್ಲಿ ವಕೀಲರು ಹಾಗೂ ಇತರರು ನ್ಯಾಯಾಲಯದ ಆವರಣ ಪ್ರವೇಶಿಸಿ, ಗೊಂದಲ ಸೃಷ್ಟಿಸಿದರು. ಇದರಿಂದ, ವಿಚಾರಣೆ ನಡೆಸಲು ನ್ಯಾಯಪೀಠಕ್ಕೆ ಸಾಧ್ಯವಾಗಿಲ್ಲ’ ಎಂದರು.

4

₹70 ಸಾವಿರದ ಕಾರಿಗೆ ₹1.11 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಲೆನ್ಸರ್, ಗಾಜು, ಬಣ್ಣ, ಲೈಟ್ ಮಾರ್ಪಾಡು ಮಾಡಿದ್ದ ಕಾರಿಗೆ ಯಲಹಂಕ ಪ್ರಾದೇಶಿಕ ಸಾರಿಗೆ ಕಚೇರಿ ಅಧಿಕಾರಿಗಳು ₹1,11,500 ದಂಡ ವಿಧಿಸಿದ್ದಾರೆ. ಕಾರು ಸುಮಾರು 17 ವರ್ಷಗಳಷ್ಟು ಹಳೆಯದಾಗಿದ್ದು ₹70 ಸಾವಿರ ಮೌಲ್ಯ ಎಂದು ಅಂದಾಜಿಸಲಾಗಿದೆ. ಕಾರಿನ ಮೌಲ್ಯಕ್ಕಿಂತ ದಂಡದ ಮೊತ್ತವೇ ಹೆಚ್ಚಿದೆ.

ಕೇರಳದ ಎರ್ನಾಕುಲಂ ಆರ್‌ಟಿಒ ನೋಂದಣಿ ಸಂಖ್ಯೆ (ಕೆಎಲ್7 ಎಬಿ 8764) ಹೊಂದಿರುವ ಕಾರು ಭಾರತಿ ನಗರ–ಹೆಣ್ಣೂರು ರಸ್ತೆಯಲ್ಲಿ ಕರ್ಕಶವಾಗಿ ಸದ್ದು ಮಾಡುತ್ತಾ ಸಾಗುತ್ತಿತ್ತು. ಕಿರಿಕಿರಿ ಸಹಿಸಲಾಗದ ಸಾರ್ವಜನಿಕರು ಇದರ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಲ್ಲದೇ ಪೊಲೀಸರಿಗೆ ಮಾಹಿತಿ ನೀಡಿದ್ದರು.



ಸೈಲೆನ್ಸರ್, ಬಣ್ಣ, ಗಾಜು ಮಾರ್ಪಾಡು ಮಾಡಿರುವ ಕಾರು

ಯಲಹಂಕ ಸಂಚಾರ ಪೊಲೀಸರು ಕಾರ್ಯಾಚರಣೆ ನಡೆಸಿ ಈ ಕಾರನ್ನು ಪತ್ತೆ ಹಚ್ಚಿದರು. ಬೆಂಗಳೂರಿನಲ್ಲಿ ಓದುತ್ತಿರುವ ಕೇರಳದ ಮಹಮ್ಮದ್ ಸೈಫನ್ ಎಂಬ ವಿದ್ಯಾರ್ಥಿ ಚಲಾಯಿಸುತ್ತಿದ್ದ ಈ ಕಾರಿನ ಸೈಲೆನ್ಸರ್ ಸೇರಿದಂತೆ ಪೂರ್ಣವಾಗಿ ಮಾರ್ಪಾಡು ಆಗಿರುವುದನ್ನು ಕಂಡ ಪೊಲೀಸರು ಯಲಹಂಕ ಪ್ರಾದೇಶಿಕ ಸಾರಿಗೆ ಕಚೇರಿಗೆ ಮಾಹಿತಿ ನೀಡಿದ್ದರು.

ಸಾರಿಗೆ ಇನ್‌ಸ್ಪೆಕ್ಟರ್ ನಾಗರತ್ನ ಮತ್ತು ಸಿಬ್ಬಂದಿ ಬಂದು ಕಾರನ್ನು ವಶಕ್ಕೆ ತೆಗೆದುಕೊಂಡರು. 2007–08 ಮಾಡೆಲ್ ಕಾರು ಇದಾಗಿದ್ದು, ಕಾರಿನಲ್ಲಿ ಯಾರಿದ್ದಾರೆ ಎಂಬುದು ಗೊತ್ತಾಗದಂತೆ ಕಪ್ಪು ಗಾಜು ಅಳವಡಿಸಲಾಗಿತ್ತು. ಬಹುಬಣ್ಣದ ಕಾರನ್ನಾಗಿ ಪರಿವರ್ತಿಸಲಾಗಿತ್ತು. ಹೆಡ್‌ಲೈಟ್ ಅನ್ನು ಡಿಸ್ಕೊಲೈಟ್ ಆಗಿ ಮಾರ್ಪಾಡು ಮಾಡಲಾಗಿತ್ತು. ಮಾಲೀಕರಿಗೆ ಮೋಟಾರು ವಾಹನ ಕಾಯ್ದೆಯ 182 (1)ಎ ಸೆಕ್ಷನ್ ಪ್ರಕಾರ ದಂಡ ವಿಧಿಸಲಾಗಿದೆ.

10

ಜನ್ಮಜಾತ ಸಮಸ್ಯೆ ಪತ್ತೆಗೆ ತಪಾಸಣೆ

ಬೆಂಗಳೂರು: ಜನ್ಮಜಾತ ಅನಾರೋಗ್ಯ ಸಮಸ್ಯೆಗಳ ಪತ್ತೆಯ ಜತೆಗೆ, ವಿರಳ ಕಾಯಿಲೆಗಳಿಂದ ಸಂಭವಿಸುತ್ತಿರುವ ಮರಣ ತಡೆಯಲು ಆರೋಗ್ಯ ಇಲಾಖೆಯು ‘ಸಾರ್ವತ್ರಿಕ ನವಜಾತ ಶಿಶು ತಪಾಸಣೆ ಯೋಜನೆ’ ರೂಪಿಸಿದೆ.

ವಿವರ ಪುಟ 4

ಚಿನಕುರುಳಿ ಪ್ರಕಾಶ್ ಶೆಟ್ಟಿ




ಯಾರನ್ನೂ ಗಡಿಪಾರು ಮಾಡುವ ಅಧಿಕಾರ ನಮಗೆ ಇಲ್ಲ: ‘ಸುಪ್ರೀಂ’ಗೆ ಇ.ಸಿ ಸ್ಪಷ್ಟನೆ

‘ನೋಂದಣಿಗಷ್ಟೇ ಪೌರತ್ವ ದೃಢೀಕರಣ’

ನವದೆಹಲಿ (ಪಿಟಿಐ): ‘ಮತದಾರರನ್ನು ನೋಂದಣಿ ಮಾಡುವ ಉದ್ದೇಶದಿಂದ ಮಾತ್ರ ಅವರ ಪೌರತ್ವವನ್ನು ನಿರ್ಧರಿಸಬಹುದು. ಯಾರನ್ನಾದರೂ ಗಡಿಪಾರು ಮಾಡಬಹುದೇ ಎಂಬುದನ್ನು ನಾವು ನಿರ್ಧರಿಸಲು ಸಾಧ್ಯವಿಲ್ಲ’ ಎಂದು ಚುನಾವಣಾ ಆಯೋಗವು (ಇ.ಸಿ) ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಚುನಾವಣಾ ಆಯೋಗದ ಪರ ಹಾಜರಾದ ಹಿರಿಯ ವಕೀಲ ರಾಕೇಶ್ ದ್ವಿವೇದಿ ಅವರು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠಕ್ಕೆ ಈ ವಿಷಯ ತಿಳಿಸಿದರು.

ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಅಧಿಕಾರದ ವ್ಯಾಪ್ತಿಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಅಂತಿಮ ವಿಚಾರಣೆಯನ್ನು ಪೀಠವು ಗುರುವಾರ ಪುನರಾರಂಭಿಸಿದೆ.



ಆಯೋಗ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಸಮರ್ಥಿಸಲು ದ್ವಿವೇದಿ ಅವರು ವಿಚಾರಣೆಯ ಆರಂಭದಲ್ಲಿ ಸಂವಿಧಾನದ 326ನೇ ವಿಧಿಯನ್ನು ಉಲ್ಲೇಖಿಸಿದರು. ಚುನಾವಣೆಯು ವಯಸ್ಕರ ಮತಾಧಿಕಾರವನ್ನು ಆಧರಿಸಿರಬೇಕು ಎಂಬುದನ್ನು 326ನೇ ವಿಧಿಯು ಸಾರುತ್ತದೆ ಎಂದರು.

‘ವಯಸ್ಕರ ಮತದಾನದ ಹಕ್ಕು ಮೂರು ವಿಭಿನ್ನ ಅಂಶಗಳನ್ನು ಒಳಗೊಂಡಿದೆ’ ಎಂದು ಹೇಳಿದರು.

10

> **ಪೌರತ್ವ ಹೊಂದಿಲ್ಲದವರು ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆಯದಂತೆ ನೋಡಿಕೊಳ್ಳುವ ಸಾಂವಿಧಾನಿಕ ಕರ್ತವ್ಯವನ್ನು ಚುನಾವಣಾ ಆಯೋಗ ಹೊಂದಿದೆ**
> **ಜಾಯ್‌ಮಾಲ್ಯ ಬಾಗ್ಚಿ,** ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ

‘ಕೇರಳ: ಕೈಬಿಟ್ಟವರ ಹೆಸರು ಪ್ರಕಟಿಸಿ’

ಕೇರಳದಲ್ಲಿ ಎಸ್‌ಐಆರ್ ಪ್ರಕ್ರಿಯೆ ಭಾಗವಾಗಿ ಪ್ರಕಟಿಸಿರುವ ಕರಡು ಮತದಾರರ ಪಟ್ಟಿಯಿಂದ ಹೊರಗಿಡಲಾದ ಮತದಾರರ ಹೆಸರನ್ನು ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು, ಕರಡು ಮತದಾರರ ಪಟ್ಟಿ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನೀಡಿರುವ ಗಡುವನ್ನು ಎರಡು ವಾರಗಳವರೆಗೆ ವಿಸ್ತರಿಸಿರುವುದನ್ನು ಪರಿಗಣಿಸುವಂತೆಯೂ ಕೇಳಿತು. ಆಯೋಗದ ಪರ ವಾದ ಮಂಡಿಸಿದ ವಕೀಲರು, ‘ಗಡುವು ವಿಸ್ತರಣೆ ವಿಚಾರವನ್ನು ಪರಿಗಣಿಸಲಾಗುವುದು’ ಎಂದರು. ಕೇರಳದಲ್ಲಿ ಕೈಗೊಂಡ ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸುತ್ತಿದೆ.

ಆಯೋಗವು ಪ್ರಕಟಿಸಿರುವ ಕರಡು ಮತದಾರರ ಪಟ್ಟಿಯಲ್ಲಿ 24 ಲಕ್ಷ ಮತದಾರರನ್ನು ಕೈಬಿಡಲಾಗಿದೆ ಎಂದು ಅರ್ಜಿದಾರರ ಪರ ವಕೀಲರು ಪೀಠಕ್ಕೆ ತಿಳಿಸಿದರು.

ಉತ್ತರ ಕನ್ನಡ: ವಿಜ್ಞಾನಿಗಳಿಂದ ಅಧ್ಯಯನ

110 ರಾಮಪತ್ರೆ ಜಡ್ಡಿ ಕಾಡು

ಪ್ರಜಾವಾಣಿ ವಾರ್ತೆ

ಶಿರಸಿ: ಬೇಡ್ತಿ– ವರದಾ ನದಿ ತಿರುವು ಯೋಜನೆ ವಿಷಯವು ಚರ್ಚೆಯಾಗುತ್ತಿರುವ ಬೆನ್ನಲ್ಲೇ ಕೆಲ ವಿಜ್ಞಾನಿಗಳು ಪಶ್ಚಿಮ ಘಟ್ಟಗಳಲ್ಲಿ ಅಪರೂಪದ ಮರಗಳು ಮತ್ತು ಸಸ್ಯಗಳಿರುವುದನ್ನು ಪತ್ತೆ ಮಾಡಿದ್ದಾರೆ. ಅವುಗಳ ಮಹತ್ವ ಮತ್ತು ಸೂಕ್ಷ್ಮ ಸಂಗತಿಗಳ ಬಗ್ಗೆ ಅಧ್ಯಯನ ಮಾಡಿರುವ ಅವರು, ‘ಅಮೂಲ್ಯವಾದ ವೃಕ್ಷ ಪ್ರಭೇದಗಳನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯ ಇದೆ’ ಎಂದು ಪ್ರತಿಪಾದಿಸಿದ್ದಾರೆ.

‘ಬೇಡ್ತಿ ಮತ್ತು ಅಘನಾಶಿನಿ ನದಿ ಕೊಳ್ಳಗಳಲ್ಲಿ ಸಾವಿರಾರು ವರ್ಷಗಳ ಇತಿಹಾಸವುಳ್ಳ ಅಪರೂಪದ 39 ರಾಮಪತ್ರೆ ಜಡ್ಡಿ ಕಾಡುಗಳಿವೆ. ಅವು ನದಿಗಳಿಗೆ ಶಾಶ್ವತ ಜಲಮೂಲಗಳು. ಮಣ್ಣು ಸವಕಳಿ ತಡೆಗಟ್ಟುವಿಕೆ, ಪ್ರವಾಹ ನಿಯಂತ್ರಣ, ಅಂತರ್ಜಲ ಮರುಪೂರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ’ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ವಿಜ್ಞಾನಿ ಗಿರೀಶ ಪೂಜಾರ್ ತಿಳಿಸಿದ್ದಾರೆ.

7



ಬೇಡ್ತಿ ಮತ್ತು ಅಘನಾಶಿನಿ ನದಿ ಕೊಳ್ಳ ಅಧ್ಯಯನ ತಂಡದ ಸದಸ್ಯರು ಗುರುತಿಸಿದ ರಾಮಪತ್ರೆ ಜಡ್ಡಿ ಕಾಡು

> **ಬೇಡ್ತಿ–ವರದಾ, ಅಘನಾಶಿನಿ–ವೇದಾವತಿ ನದಿಗಳ ಜೋಡಣೆಯಿಂದ ಅತ್ಯಂತ ಪ್ರಾಚೀನ ಕಾಲದ ರಾಮಪತ್ರೆ ಜಡ್ಡಿ ಕಾಡುಗಳ ಶೇಕಡಾ 75ಕ್ಕೂ ಹೆಚ್ಚು ಭಾಗ ನಾಶವಾಗುತ್ತವೆ**
> **ನರಸಿಂಹ ಹೆಗಡೆ ವಾನಳ್ಳಿ,** ಪರಿಸರ ಕಾರ್ಯಕರ್ತ

> **ಹವಾಗುಣ ವೈಪರೀತ್ಯದ ಈ ಕಾಲದಲ್ಲಿ ಹೆಚ್ಚು ಇಂಗಾಲ ಶೇಖರಿಸುವ ಸಾಮರ್ಥ್ಯ ಹೊಂದಿರುವ ಈ ಜೌಗು ಪ್ರದೇಶಗಳನ್ನು ಉಳಿಸಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ**
> **ಗಿರೀಶ ಪೂಜಾರ್,** ಇಸ್ರೊದ ವಿಜ್ಞಾನಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಗಿನ ಜಾವ ಮಂಜು ಕವಿದ ವಾತಾವರಣ ಇರಲಿದೆ

ಕಲ್ಪತರು ಟ್ರಸ್ಟ್ ಪ್ರಶಸ್ತಿಗೆ ಮೂವರ ಆಯ್ಕೆ

ಬೆಂಗಳೂರು: ಕಲ್ಪತರು ಸಾಹಿತ್ಯ, ಕಲಾ ಟ್ರಸ್ಟ್‌ನವರು ಆರ್.ಜಿ.ಬಸಪ್ಪ ಅವರ ಸ್ಮರಣಾರ್ಥ ನೀಡುವ ಪ್ರಶಸ್ತಿಗಳಿಗೆ ಮೂವರನ್ನು ಆಯ್ಕೆ ಮಾಡಲಾಗಿದೆ.ಕಲ್ಪತರು ಸಾಹಿತ್ಯ ಸಿರಿ ದತ್ತಿ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಆಶುಕವಿ ಸಿದ್ದಪ್ಪ ಬಿದರಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು, ಫಲಕ ಒಳಗೊಂಡಿದೆ.

ಕಲ್ಪತರು ಸಂಗೀತ ಸಿರಿ ರಾಜ್ಯ ಪ್ರಶಸ್ತಿಗೆ ಬಳ್ಳಾರಿ ಜಿಲ್ಲೆಯ ಸಂಗೀತ ನಿರ್ದೇಶಕ ರಾಜು ಎಮ್ಮಿಗೂರ ಹಾಗೂ ಕಲ್ಪತರು ಕಲಾಸಿರಿ ಪ್ರಶಸ್ತಿಗೆ ತುಮಕೂರು ಜಿಲ್ಲೆಯ ವೀರಗಾಸೆ ಕಲಾವಿದೆ ಮಾಧುರ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಈ ಎರಡೂ ಪ್ರಶಸ್ತಿಗಳು ತಲಾ ₹5 ಸಾವಿರ ನಗದು ಹಾಗೂ ಫಲಕ ಒಳಗೊಂಡಿವೆ. ಚಾಮರಾಜಪೇಟೆ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಜ.17ರಂದು ಸಂಜೆ 5ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಸಾಹಿತಿ ಸತ್ಯಾನಂದ ಪಾತ್ರೋಟ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಸಾಪ ಮಾಜಿ ಅಧ್ಯಕ್ಷ ಮನು ಬಳಿಗಾರ ಅಧ್ಯಕ್ಷತೆ ವಹಿಸಲಿದ್ದಾರೆ.

‘ಚಾಮುಂಡಿ ಬೆಟ್ಟದಲ್ಲಿ ಶಾಶ್ವತ ನಿರ್ಮಾಣ ಸಲ್ಲ’

‘ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ’ ರಚನೆಯ ಸಿಂಧುತ್ವ ಪ್ರಶ್ನಿಸಿ ಅರ್ಜಿ; ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರಿನ ಪ್ರಸಿದ್ಧ ಚಾಮುಂಡೇಶ್ವರಿ ಬೆಟ್ಟದಲ್ಲಿ ಯಾವುದೇ ಶಾಶ್ವತ ಕಾಮಗಾರಿ ನಿರ್ಮಾಣ ಮಾಡಬಾರದು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ’ ರಚನೆಯ ಸಿಂಧುತ್ವ ಪ್ರಶ್ನಿಸಿ ಮೈಸೂರು ರಾಜಮನೆತನದ ಪ್ರಮೋದಾ ದೇವಿ ಒಡೆಯರ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ.

ವಿಚಾರಣೆ ವೇಳೆ ಪ್ರಮೋದಾ ದೇವಿ ಪರ ಪದಾಂಕಿತ ಹಿರಿಯ ವಕೀಲ ಜೆ.ಸಾಯಿ ದೀಪಕ್, ‘ದೇವಾಲಯದ ಆಸ್ತಿ ಮಾಲೀಕತ್ವ ವಿವಾದವು ಇದೇ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಾಕಿ ಇದೆ. ಏತನ್ಮಧ್ಯೆ, ರಾಜ್ಯ ಸರ್ಕಾರ ಶಾಸನದ ಮೂಲಕ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತಂದಿದೆ. ಈ ಪ್ರಾಧಿಕಾರವು ಅರ್ಜಿದಾರರಿಗೆ ಯಾವುದೇ ಸಭೆಯ ನೋಟಿಸ್‌ಗಳನ್ನು ನೀಡುತ್ತಿಲ್ಲ ಮತ್ತು ದೇವಾಲಯದ ಆವರಣದಲ್ಲಿ ಕೆಲವು ಶಾಶ್ವತ ನಿರ್ಮಾಣಗಳ ಕಾಮಗಾರಿ ನಡೆಸುತ್ತಿದೆ’ ಎಂದು ದೂರಿದರು.

ಇದಕ್ಕೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎನ್.ದೇವದಾಸ್ (ಎಎಜಿ), ‘ಕೇಂದ್ರ ಸರ್ಕಾರದ ‘ಪ್ರಸಾದ್’ ಯೋಜನೆಯಡಿ ಚಾಮುಂಡಿ ಬೆಟ್ಟದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ದೇವಾಲಯದ ಆವರಣದಲ್ಲಿ ಯಾವುದೇ ಶಾಶ್ವತ ಕಾಮಗಾರಿ ನಡೆಸುವುದಿಲ್ಲ. ಬೇಸಿಗೆ ಸಮೀಪಿಸುತ್ತಿರುವ ಕಾರಣ ಭಕ್ತರ ಹಿತದೃಷ್ಟಿಯಿಂದ ತಂಗುದಾಣ ನಿರ್ಮಿಸಲಾಗುತ್ತಿದೆ’ ಎಂದು ವಿವರಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಮುಂದಿನ ವಿಚಾರಣೆಯ ದಿನಾಂಕದೊಳಗಾಗಿ ‘ಪ್ರಸಾದ್’ ಯೋಜನೆ ಅಡಿಯಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿ ಮತ್ತು ಯೋಜನೆಯ ಅನುಷ್ಠಾನದ ವಿಧಾನದ ವಿವರಗಳನ್ನು ಕೋರ್ಟ್‌ಗೆ ಹಾಜರುಪಡಿಸಬೇಕು’ ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿತು.

‘ಕೇಂದ್ರ ಸರ್ಕಾರದ ಯೋಜನೆಯಡಿ ಯಾವ ರೀತಿಯ ಕಾಮಗಾರಿಗಳಿಗೆ ಅವಕಾಶವಿದೆ ಎಂಬುದನ್ನು ತಿಳಿಸಿ’ ಎಂದು ಉಭಯ ಸರ್ಕಾರಗಳಿಗೆ ನಿರ್ದೇಶಿಸಿ ವಿಚಾರಣೆಯನ್ನು ಫೆಬ್ರುವರಿ 13ಕ್ಕೆ ಮುಂದೂಡಿತು.

ಕೇಂದ್ರ ಪ್ರವಾಸೋದ್ಯಮ ಸಚಿವಾಲಯವನ್ನೂ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಬೇಕೆಂಬ ಮಧ್ಯಂತರ ಅರ್ಜಿ ಸ್ವೀಕರಿಸಿದ ನ್ಯಾಯಪೀಠ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಅವರಿಗೆ ನೋಟಿಸ್ ಪಡೆಯಲು ಸೂಚಿಸಿತು.

ಅರ್ಜಿದಾರರ ಕೋರಿಕೆ ಏನು?

‘ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ-2024 ಸಂವಿಧಾನದ 13, 25, 26 ಮತ್ತು 29ನೇ ವಿಧಿಗಳ ಉಲ್ಲಂಘನೆ. ಈ ಕಾಯ್ದೆಯನ್ನು ಏಕಪಕ್ಷೀಯವಾಗಿ ರೂಪಿಸಲಾಗಿದ್ದು ತಾರತಮ್ಯದಿಂದ ಕೂಡಿದೆ. ಆದ್ದರಿಂದ, ಇದನ್ನು ಅಸಿಂಧುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಕಲಬೆರಕೆ ಹಾಲು: 8 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಕೆಜಿಎಫ್: ನಂದಿನಿ ಸೇರಿದಂತೆ ಹಲವು ಕಂಪನಿಗಳ ಬ್ರ್ಯಾಂಡ್‌ಗಳ ಹೆಸರಿನಲ್ಲಿ ಕಲಬೆರಕೆ ಹಾಲನ್ನು ತಯಾರಿಸುತ್ತಿದ್ದ ಎಂಟು ಮಂದಿಯನ್ನು ಆಂಡರಸನ್‌ಪೇಟೆ ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದಾರೆ.

ಕಲಬೆರಕೆ ಹಾಲು ತಯಾರಿಸಲು ಬಳಸುತ್ತಿದ್ದ ಪಾಮ್ ಆಯಿಲ್, ಹಾಲಿನ ಪುಡಿ, ಬೆಲ್ಲ, ಮಿಕ್ಸಿ ಮುಂತಾದ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಆಂಧ್ರಪ್ರದೇಶದ ವೆಂಕಟೇಶಪ್ಪ (50), ಬಾಲಾಜಿ (35), ದಿಲೀಪ್ (25), ಬಾಲರಾಜ್ (33), ಮನೋಹರ್ (28), ಕಾರ್ತಿಕ್ (29), ಮನೋಜ್ (22) ಮತ್ತು ಮಂಜುನಾಥ್ (55) ಬಂಧಿತ ಆರೋಪಿಗಳು. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಕಲಿ ಬಿಲ್ ಪ್ರಕರಣ: ಕಾನೂನಿಗೆ ಆದ್ಯತೆ, ದಯೆಗೆ ಅಲ್ಲ – ಹೈಕೋರ್ಟ್

ಬಹುಕೋಟಿ ಹಗರಣ: ಜಾಮೀನು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಂಧನಕ್ಕೆ ಕಾರಣಗಳೇನು ಎಂಬುದನ್ನು ಕಾನೂನು ಅಂಶಗಳನ್ನು ಆಧರಿಸಿ ಪರಿಶೀಲಿಸುವ ಬದಲು ದಯೆಯ ಅಡಿಯಲ್ಲಿ ಮಾತ್ರವೇ ನೋಡುತ್ತಾ ಹೋದರೆ ಅದು ಭೂತದ ಪೆಟ್ಟಿಗೆಯ ಬಾಯಿ ತೆರೆದಂತೆ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಅರ್ಜಿದಾರರನ್ನು ಕುಟುಕಿದೆ.

ಬಹುಕೋಟಿ ರೂಪಾಯಿಗಳ ನಕಲಿ ಬಿಲ್ ಸೃಷ್ಟಿಸಿದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಗರದ ಉದ್ಯಮಿ ಇ.ಪ್ರತಾಪ್ ಪತ್ನಿಗೆ ಜಾಮೀನು ಮಂಜೂರು ಮಾಡಲು ನಿರಾಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ದಯೆ ಎಂಬುದು ಪ್ರಕರಣದಿಂದ ಪ್ರಕರಣಕ್ಕೆ ಬೇರೆಯಾಗುತ್ತಾ ಹೋಗುತ್ತದೆ. ಆದ್ದರಿಂದ, ಮಧ್ಯಂತರ ಜಾಮೀನು ನೀಡಲಾಗದು’ ಎಂದು ಅರ್ಜಿ ವಜಾಗೊಳಿಸಿದೆ.

ಬಂಧನ ಪ್ರಶ್ನಿಸಿ ಪ್ರತಾಪ್ ಪುತ್ರಿ ಇ.ಇಶಿತಾ ಮತ್ತು ಜಾಮೀನು ಕೋರಿ ಪ್ರತಾಪ್ ಪತ್ನಿ ಇ.ರೇವತಿ ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪು ಪ್ರಕಟಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು, ‘ಅರ್ಜಿದಾರರು ಸಂಬಂಧಿಸಿದ ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸಬಹುದು. ಯಾವುದೇ ವಿಳಂಬ ಮಾಡದೆ ನ್ಯಾಯಾಲಯ ಅದನ್ನು ಕಾನೂನು ಪ್ರಕಾರ ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸತಕ್ಕದ್ದು’ ಎಂದು ಆದೇಶಿಸಿದ್ದಾರೆ.

ದಯೆಯ ನೆಲೆಯಲ್ಲಿ ಜಾಮೀನು ನೀಡಲು ಮನವಿ: ಆಕ್ಷೇಪ



ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ. ಚೌಟ, ‘ಬಂಧನದ ಮೆಮೊ ಕಾನೂನಿಗೆ ವಿರುದ್ಧವಾಗಿದೆ. ಹಾಗಾಗಿ, ಮಾನವೀಯ ಮತ್ತು ದಯೆಯ ನೆಲೆಯಲ್ಲಿ ಜಾಮೀನು ನೀಡಬೇಕು’ ಎಂದು ಕೋರಿದ್ದರು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ, ‘ಬಹುಕೋಟಿ ರೂಪಾಯಿ ತೆರಿಗೆ ವಂಚನೆ ಪ್ರಕರಣದಲ್ಲಿ ಪತಿ ಮತ್ತು ಪತ್ನಿ ಇಬ್ಬರೂ ಆರೋಪಿಗಳಾಗಿದ್ದಾರೆ. 2025ರ ಸೆಪ್ಟೆಂಬರ್‌ನಿಂದಲೂ ಅವರಿಗೆ ಹಲವು ಬಾರಿ ನೋಟಿಸ್ ನೀಡಲಾಗಿತ್ತಾದರೂ ವಿಚಾರಣೆಗೆ ಹಾಜರಾಗಿರಲಿಲ್ಲ. ಹಾಗಾಗಿ, ವಶಕ್ಕೆ ಪಡೆದು ವಿಚಾರಣೆ ಮಾಡಲಾಗುತ್ತಿದೆ. ಇಬ್ಬರ ವಿರುದ್ಧದ ಆರೋಪಗಳನ್ನು ಬಂಧನದ ಮೆಮೊದಲ್ಲಿ ಸಂಪೂರ್ಣ ವಿವರಿಸಲಾಗಿದೆ’ ಎಂದು ವಿವರಿಸಿದ್ದರು.

‘ಎಲ್ಲ ಕ್ಷೇತ್ರಗಳಲ್ಲೂ ಸೃಜನಶೀಲತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ಕ್ಷೇತ್ರಗಳಲ್ಲೂ ಕಲೆ ಮತ್ತು ಸೃಜನಶೀಲತೆಯನ್ನು ಕಾಣಬಹುದು’ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

ಆರ್ಟ್ ಮಂತ್ರಂ ಟ್ರಸ್ಟ್ ಗುರುವಾರ ಆಯೋಜಿಸಿದ್ದ ಸೃಜನಶೀಲ ನಗರ ಬೆಂಗಳೂರು, ಸಂವಾದಗಳು ಮತ್ತು ಅನ್ವೇಷಣೆಗಳ ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ನಗರದ ಸುಂದರ ಪ್ರದೇಶಗಳಿಗೆ ಭೇಟಿ ನೀಡಿ ಆಸ್ವಾದಿಸಬೇಕು. ಸ್ಥಳೀಯ ಸಂಸ್ಕೃತಿಯನ್ನು ಹೆಚ್ಚು ಜನರಿಗೆ ತಲುಪಿಸಬೇಕು ಎಂದರು.

ಪಾದಚಾರಿ ಮಾರ್ಗಗಳು, ಕೆಳಸೇತುವೆ, ಮೇಲ್ಸೇತುವೆ, ಬೃಹತ್ ಗೋಡೆಗಳ ಮೇಲೆ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಸೃಜನಾತ್ಮಕ ಕಲೆಗಳನ್ನು ಬಿತ್ತರಿಸಬೇಕು. ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಕಸ ಎಸೆಯದಂತೆ ಕಲಾಕೃತಿಗಳ ಮೂಲಕ ಜಾಗೃತಿ ಮೂಡಿಸಬೇಕು ಎಂದು ಅವರು ಹೇಳಿದರು.



ಸೃಜನಶೀಲ ನಗರ ಬೆಂಗಳೂರು, ಸಂವಾದಗಳು ಮತ್ತು ಅನ್ವೇಷಣೆಗಳು ಉತ್ಸವದಲ್ಲಿ ಆರ್ಟ್ ಮಂತ್ರಂ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಜೀಜಾ ಹರಿಸಿಂಗ್, ಅಧ್ಯಕ್ಷ ಸುಧಾಕರ್ ರಾವ್, ಶಾಲಿನಿ ರಜನೀಶ್, ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್, ಎನ್‌ಜಿಎಂಎನ ನಿರ್ದೇಶಕಿ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ಹಾಜರಿದ್ದರು

ನಗರದಲ್ಲಿ ಇಂದು

ಬೆಂಗಳೂರು ಸಮಾಜ ವಿಜ್ಞಾನ ಉತ್ಸವ: ಭಾಗವಹಿಸುವವರು: ಪ್ರಕಾಶ್ ಬೆಳವಾಡಿ, ಮಾಳವಿಕಾ ಅವಿನಾಶ್, ಪ್ರಲ್ಹಾದ್ ರಾಮರಾವ್, ಸ್ವಾಮಿ ಮಿತ್ರಾನಂದ, ಗುರುಪ್ರಕಾಶ್ ಪಾಸ್ವಾನ್, ಆಯೋಜನೆ: ಬೆಂಗಳೂರು ಸೋಷಿಯಲ್ ಸೈನ್ಸ್ ಫೆಸ್ಟಿವಲ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, 8ರಿಂದ



ಪ್ರಕಾಶ್ ಬೆಳವಾಡಿ

ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ಅಲೋಕ್ ಮೋಹನ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ ಕ್ರೀಡಾಂಗಣ, ಕೋರಮಂಗಲ, ಬೆಳಿಗ್ಗೆ 8.30

‘ಕಲಾದರ್ಪಣ ಕಿತ್ತೂರು ರಾಣಿ ಚೆನ್ನಮ್ಮ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ: ಸಿ.ಕೆ. ರಾಮಮೂರ್ತಿ, ಅತಿಥಿಗಳು: ಸತೀಶಕುಮಾರ್ ಎಸ್. ಹೊಸಮನಿ, ಎಚ್. ರಾಜಣ್ಣ, ಗೋ.ನಾ. ಸ್ವಾಮಿ, ಪ್ರಶಸ್ತಿ ಸ್ವೀಕರಿಸುವವರು: ಅನುಪಮಾ ಪ್ರಸಾದ್, ರಮ್ಯಾ ಎಂ.ಕೆ., ಉಮಾ ನಾರಾಯಣ್ ಬಿ.ಎಂ., ವೇದ ಪ್ರಶಾಂತ್, ವನಿತಾ, ಗೌರಿಪ್ರಭ ಪ್ರಸಾದ್, ಆಯೋಜನೆ: ಕಲಾದರ್ಪಣ ಆರ್ಟ್ ರಿಪ್ಲೆಕ್ಟ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಐಟಿಪಿಬಿ ಮೆಟ್ರೊ ಸ್ಕೈವಾಕ್‌ಗೆ ಚಾಲನೆ: ರವಿಶಂಕರ್ ಜೆ., ಗೌರಿ ಶಂಕರ್ ನಾಗಭೂಷಣಂ, ಆಯೋಜನೆ: ಕ್ಯಾಪಿಟಲ್ಯಾಂಡ್, ಇಂಟರ್ ನ್ಯಾಷನಲ್ ಟೆಕ್ ಪಾರ್ಕ್, ಸ್ಥಳ: ಐಟಿಪಿಬಿ ಮೆಟ್ರೊ ಸ್ಕೈವಾಕ್, ಬೆಳಿಗ್ಗೆ 11

ರಾಜ್ಯಮಟ್ಟದ ಐದು ದಿನಗಳ ಜಾನಪದ ನಾಟಕಗಳ ಉತ್ಸವ: ಅತಿಥಿಗಳು: ಎಚ್.ಎಲ್. ನಾಗರಾಜ, ಬಿಂದು ಬಾಯಿ ಬಿ., ‘ನರಕಾಸುರ ವಧೆ’ ನಾಟಕ ಪ್ರದರ್ಶನ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಗಂಗಮ್ಮ ಪಟೇಲ್ ಮುದ್ದುಭೈರಪ್ಪ ಸಭಾಂಗಣ, ನ್ಯೂ ಮಂಜುಳ ಪಬ್ಲಿಕ್ ಸ್ಕೂಲ್ ಸಮುಚ್ಚಯ, ನೆಲಗದರನಹಳ್ಳಿ, ಮಧ್ಯಾಹ್ನ 1

ಸಂಸ್ಥಾಪಕರ ದಿನ: ಅತಿಥಿಗಳು: ಯದುವೀರ ಕೃಷ್ಣದತ್ತ ಒಡೆಯರ್, ರವಿ ಡಿ. ಚನ್ನಣ್ಣವರ್, ಕೊಟ್ರಸ್ವಾಮಿ ಎಂ., ಅಶೋಕ್ ಚನ್ನೇಗೌಡ, ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಗುರುರಾಯನಪುರ, ತಾವರೆಕೆರೆ, ಸಂಜೆ 5

‘ನನ್ನ ತೇಜಸ್ವಿ’ ನಾಟಕ ಪ್ರದರ್ಶನ: ನಿರ್ದೇಶನ: ಬಿ.ಎಂ. ಗಿರಿರಾಜ, ಪ್ರಸ್ತುತಿ: ಕಲಾ ಮಾಧ್ಯಮ ತಂಡ, ಸ್ಥಳ: ಲಾಲ್‌ಬಾಗ್, ಸಂಜೆ 5

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ ‘ಜೈಮಿನಿ ಭಾರತ’ ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ಕೆ. ಶ್ರೀಧರ ರಾವ್, ಎಸ್. ರಘುನಾಥ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಬೆಂಗಳೂರು ಹಬ್ಬಕ್ಕೆ ಚಾಲನೆ: ಆಯೋಜನೆ: ಬೆಂಗಳೂರು ಹಬ್ಬ, ಸ್ಥಳ: ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮುಂಭಾಗ, ಸಂಜೆ 5.30

‘ಚೂಡಾಮಣಿ ಲಂಕಾದಹನ’ ಯಕ್ಷಗಾನ ಬೊಂಬೆಯಾಟ ಪ್ರದರ್ಶನ: ಭಾಸ್ಕರ್ ಕೊಗ್ಗ ಕಾಮತ್, ಆಯೋಜನೆ: ಬೆಂಗಳೂರು ಹಬ್ಬ, ಸ್ಥಳ: ಯುವಕ ಸಂಘ, ಜಯನಗರ, ಸಂಜೆ 7

ನಾಟ್ಯ ರಸ ಸಂಜೆಯ ಉದ್ಘಾಟನೆ: ಪದ್ಮಿನಿ ರವಿ, ಆಯೋಜನೆ: ವೆಂಕಟೇಶ ನಾಟ್ಯ ಮಂದಿರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು nagaradalli_indu@prajavani.co.in ಗೆ ಕಳುಹಿಸಿ..

ಕನ್ನಡ ಕಲ್ಚರೋತ್ಸವ ನಾಳೆಯಿಂದ

ಬೆಂಗಳೂರು: ‘ಕನ್ನಡದ ಮನಸುಗಳನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಇದೇ 17ರಿಂದ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನಲ್ಲಿ(ಎನ್‌ಜಿಎಂಎ) ಕಲ್ಚರೋತ್ಸವ ಕನ್ನಡ ಹಬ್ಬ ಆಯೋಜಿಸಲಾಗಿದೆ’ ಎಂದು ಪಿಕಲ್ ಜಾರ್ ಮೀಡಿಯಾ ಸಂಸ್ಥಾಪಕಿ ವಾಸಂತಿ ಹರಿಪ್ರಕಾಶ್ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಕಾರ್ಯಕ್ರಮ ಎರಡು ದಿನಗಳ ಕಾಲ ಜರುಗಲಿದೆ. ಊಟ, ಆಟ, ಪಾಠ ಮತ್ತು ಡೇಟಾ ಎಂಬ ನಾಲ್ಕು ಆಯಾಮಗಳಿರಲಿವೆ. ಕನ್ನಡದ ಖ್ಯಾತ ಸಾಹಿತಿಗಳು, ಕಲಾವಿದರು, ವಿಮರ್ಶಕರು, ಸಂಶೋಧಕರು ಹಾಗೂ ನಾಡಿನ ವಿವಿಧ ಸ್ಥರಗಳಲ್ಲಿ ಕನ್ನಡದ ಸೇವೆ ಮಾಡುತ್ತಿರುವವರು ಒಂದೆಡೆ ಸೇರುವರು’ ಎಂದು ಹೇಳಿದ್ದಾರೆ.

‘ನಾಡಿನ ವಿವಿಧ ಬಗೆಯ ತಿಂಡಿ-ತಿನಿಸುಗಳುಳ್ಳ ಮಳಿಗೆಗಳು, ಕಲಾ ವಿನ್ಯಾಸಗಳ ಪ್ರದರ್ಶನ, ಪರಿಚಯ ಇರಲಿದೆ ಎಂದು ಮಾಹಿತಿ ನೀಡಿದ್ದಾರೆ.

ಸಮಸ್ಯೆ ಶಾಶ್ವತ: ಪರಿಹಾರ ದೂರ

ವಾರಾಂತ್ಯ, ದಟ್ಟಣೆ ಅವಧಿಯಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳು • ಚಾಲಕರು ಹೈರಾಣ



ಗೊರಗುಂಟೆಪಾಳ್ಯದಲ್ಲಿ ಎರಡು ಜಂಕ್ಷನ್ ದಾಟಲು ದಟ್ಟಣೆ ಅವಧಿಯಲ್ಲಿ ಅರ್ಧ ತಾಸು ಬೇಕಾಗುತ್ತಿದೆ
ಲೋಕೇಶ್, ಕ್ಯಾಬ್ ಚಾಲಕ, ರಾಜರಾಜೇಶ್ವರಿ ನಗರ



ತುಮಕೂರು, ಹಾಸನ, ಕೆ.ಆರ್.ಪುರದ ಕಡೆಯಿಂದ ಬಂದು ಗೊರಗುಂಟೆಪಾಳ್ಯದಲ್ಲಿ ಬಸ್ ಇಳಿದರೆ, ಹೆದ್ದಾರಿ ದಾಟಲು ಸ್ಕೈವಾಕ್ ಇಲ್ಲದ ಕಾರಣ ಜೀವಕ್ಕೂ ಅಪಾಯ ಉಂಟಾಗುತ್ತಿದೆ
ಶಿವು, ಆಟೊ ಚಾಲಕ, ಕಮಲಾನಗರ

• ಆದಿತ್ಯ ಕೆ.ಎ.

ಬೆಂಗಳೂರು: ತುಮಕೂರು ರಸ್ತೆಯ ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆಯಲ್ಲಿ ಎಲ್ಲ ಮಾದರಿಯ ವಾಹನಗಳ ಸಂಚಾರ ಆರಂಭವಾಗಿ ಒಂದೂವರೆ ವರ್ಷ ಕಳೆದಿದ್ದರೂ ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿ–48ರಲ್ಲಿ ವಾಹನ ಚಾಲಕರಿಗೆ ಸಂಕಟ ಮಾತ್ರ ತಪ್ಪುತ್ತಿಲ್ಲ. ಅದರಲ್ಲೂ ವಾರಾಂತ್ಯ, ರಜಾ ದಿನಗಳು ಹಾಗೂ ದಟ್ಟಣೆ ಅವಧಿಯಾದ ಬೆಳಿಗ್ಗೆ– ಸಂಜೆ ಈ ಹೆದ್ದಾರಿಯಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ.

ಸಂಚಾರ ಸಂಕಟ

‘ಹೆದ್ದಾರಿಯಲ್ಲಿ ಸಾಗುವ ವಾಹನ ಚಾಲಕರ ಸಮಸ್ಯೆಯನ್ನು ಬಗೆಹರಿಸುತ್ತೇವೆ. ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡುತ್ತೇವೆ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳು, ಕಳೆದ ವರ್ಷ ಆಶ್ವಾಸನೆ ನೀಡಿದ್ದರು. ಈ ಹೆದ್ದಾರಿಯಲ್ಲಿ ‘ಪ್ರಜಾವಾಣಿ’ ಪ್ರತಿನಿಧಿ ಸುತ್ತು ಹಾಕಿದಾಗ ಸಮಸ್ಯೆ ಶಾಶ್ವತವಾಗಿ ಉಳಿದಿರುವುದು ಕಂಡುಬಂತು.

ಈ ಮಾರ್ಗವು ಬೆಂಗಳೂರು ನಗರವನ್ನು ಸಂಪರ್ಕಿಸುವ ಪ್ರಮುಖ ಕೊಂಡಿ. ಮಹಾರಾಷ್ಟ್ರ, ಗೋವಾ ಹಾಗೂ ರಾಜ್ಯದ 21ಕ್ಕೂ ಹೆಚ್ಚು ಜಿಲ್ಲೆಗಳಿಗೆ ತೆರಳುವುದಕ್ಕೆ ಇದೇ ಮಾರ್ಗವನ್ನು ವಾಹನ ಚಾಲಕರು ಅವಲಂಬಿಸಬೇಕು. ದಿನದ 24 ಗಂಟೆಯೂ ಈ ಮಾರ್ಗದಲ್ಲಿ ವಾಹನ ಸಂಚಾರವಿದ್ದು, ಅದರಲ್ಲಿ 10 ತಾಸು ಹೆದ್ದಾರಿ ದಟ್ಟಣೆಯಿಂದ ಕೂಡಿರುತ್ತದೆ. ಕೆಲವು ಜಂಕ್ಷನ್‌ಗಳನ್ನು ದಾಟುವುದಕ್ಕೇ ವಾಹನ ಸವಾರರು ಪ್ರತಿನಿತ್ಯ ಪರದಾಡಬೇಕಾದ ಪರಿಸ್ಥಿತಿಯಿದೆ.

ಮೇಲ್ಸೇತುವೆಯ 8ನೇ ಮೈಲಿಯ 102 ಹಾಗೂ 103ನೇ ಪಿಲ್ಲರ್‌ನಲ್ಲಿ ಕೇಬಲ್‌ಗಳು ಬಾಗಿದ್ದರಿಂದ 2021ರ ಡಿಸೆಂಬರ್‌ನಿಂದ ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ದೀರ್ಘ ಹೋರಾಟದ ಬಳಿಕ ಮೇಲ್ಸೇತುವೆಯ ಕೇಬಲ್ ಬದಲಾವಣೆ ಮಾಡಲಾಯಿತು. ಮೇಲ್ಸೇತುವೆ ಸುಭದ್ರಗೊಳಿಸಿದ ನಂತರ 2024ರ ಜುಲೈನಿಂದ ಎಲ್ಲ ಮಾದರಿಯ ವಾಹನಗಳ ಸಂಚಾರಕ್ಕೆ ಸಂಚಾರ ವಿಭಾಗದ ಪೊಲೀಸರು ಹಸಿರು ನಿಶಾನೆ ತೋರಿದ್ದರು. ಮೇಲ್ಸೇತುವೆಯಲ್ಲಿ ಬಸ್, ಟ್ರಕ್‌ಗಳೂ ಸಾಗುತ್ತಿದ್ದರೂ ದಟ್ಟಣೆಯ ಸಮಸ್ಯೆಗೆ ಪರಿಹಾರ ಮಾತ್ರ ಸಿಕ್ಕಿಲ್ಲ. ಕೆಲವೊಮ್ಮೆ ಮೇಲ್ಸೇತುವೆಯಲ್ಲಿ ವಾಹನಗಳು ಕೆಟ್ಟು ನಿಂತರೆ ಅಂತಹ ವಾಹನಗಳನ್ನು ತೆರವು ಮಾಡುವುದಕ್ಕೆ ತಾಸುಗಟ್ಟಲೇ ಹಿಡಿಯುತ್ತದೆ. ಆಗಲೂ ದಟ್ಟಣೆ ಎದುರಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

‘ಈ ಮಾರ್ಗದಲ್ಲಿ ಗೊರಗುಂಟೆಪಾಳ್ಯ ಪ್ರಮುಖ ಜಂಕ್ಷನ್. ಹಾಸನ, ತುಮಕೂರು, ಮಂಗಳೂರು, ಉಡುಪಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಚಿತ್ರದುರ್ಗ ಹಾಗೂ ಕೆ.ಆರ್.ಪುರ, ದೇವನಹಳ್ಳಿ, ಹೈದರಾಬಾದ್ ಕಡೆಯಿಂದ ಪ್ರತಿನಿತ್ಯ ಬರುವ ಸಾವಿರಾರು ವಾಹನಗಳು ಈ ಜಂಕ್ಷನ್‌ನಲ್ಲಿ ಸಿಲುಕಿಕೊಳ್ಳುತ್ತಿವೆ. ಜಂಕ್ಷನ್ ದಾಟುವುದು ಸವಾಲಾಗಿದೆ’ ಎಂದು ವಾಹನ ಚಾಲಕ ಮೋಹನ್ ಅಳಲು ತೋಡಿಕೊಳ್ಳುತ್ತಾರೆ.

‘ಗೊರಗುಂಟೆಪಾಳ್ಯ ಜಂಕ್ಷನ್‌ಗೆ ಪ್ರತಿನಿತ್ಯ ಸಾವಿರಾರು ಜನರು ಬರುತ್ತಾರೆ. ಶಾಲಾ– ಕಾಲೇಜು ವಿದ್ಯಾರ್ಥಿಗಳ ದಂಡೇ ಇರುತ್ತದೆ. ಸಿಗ್ನಲ್ ಬಿಡುತ್ತಿದ್ದಂತೆಯೇ ವೇಗವಾಗಿ ನುಗ್ಗುವ ವಾಹನಗಳ ಮಧ್ಯೆ ಪಾದಚಾರಿಗಳು ಹೆದ್ದಾರಿ ದಾಟುವ ಸಾಹಸ ಮಾಡುತ್ತಿದ್ದಾರೆ. ಸ್ಕೈವಾಕ್ ಇಲ್ಲದಿರುವುದೇ ಈ ಸಮಸ್ಯೆಗೆ ಕಾರಣವಾಗಿದೆ’ ಎಂದು ಪಾದಚಾರಿಗಳು ಅಳಲು ತೋಡಿಕೊಂಡರು.

ಎರಡು ವರ್ಷಗಳ ಹಿಂದೆ ಈ ಜಂಕ್ಷನ್‌ನಲ್ಲಿ ಸ್ಕೈವಾಕ್ ನಿರ್ಮಿಸಲು ಬಿಬಿಎಂಪಿ ಹಾಗೂ ಸಂಚಾರ ವಿಭಾಗದ ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದರು. ಆದರೆ, ಕೆಲಸ ನನೆಗುದಿಗೆ ಬಿದ್ದಿದೆ. ಬಸ್ ತಂಗುದಾಣ ಸಹ ಇಲ್ಲ. ಕೆಎಲ್‌ಇ ದಂತ ವೈದ್ಯಕೀಯ ಕಾಲೇಜು ಎದುರು ಬಸ್ ತಂಗುದಾಣ ಇದ್ದರೂ ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ತೆರಳುತ್ತಿಲ್ಲ. ಜಂಕ್ಷನ್‌ನಲ್ಲಿ ಇರುವ ಚಂದ್ರಮೌಳೇಶ್ವರ, ಶಿವಗಣಪತಿ ದೇಗುಲದ ಎದುರೇ ನೂರಾರು ಪ್ರಯಾಣಿಕರು ನಿಂತಿರುತ್ತಾರೆ. ಪ್ರಯಾಣಿಕರು ಯಾವ ಕ್ಷಣದಲ್ಲಿ ರಸ್ತೆ ದಾಟುತ್ತಾರೋ ಎನ್ನುವ ಭಯ ಚಾಲಕರನ್ನು ಕಾಡುತ್ತಲೇ ಇರುತ್ತದೆ.

ಯಶವಂತಪುರದ ಗೋವರ್ಧನ ಚಿತ್ರಮಂದಿರದ ಎದುರು ರಾತ್ರಿ ಎಂಟರ ಬಳಿಕ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ರಸ್ತೆಯ ಮಧ್ಯದಲ್ಲಿಯೇ ಖಾಸಗಿ ಬಸ್‌ಗಳು ಪೈಪೋಟಿಗೆ ಇಳಿಯುತ್ತವೆ. ಅದು ಮತ್ತೊಂದು ರೀತಿಯ ಸಮಸ್ಯೆ ತಂದೊಡ್ಡುತ್ತಿದೆ.

ಆರು ವರ್ಷದಿಂದ ಕಗ್ಗಂಟು: ಅಲ್ಲಿಂದ ಮುಂದಕ್ಕೆ ಸಾಗಿದರೆ ಜಾಲಹಳ್ಳಿ ಕ್ರಾಸ್‌ನಲ್ಲಿ ಕೆಳಸೇತುವೆ ಕಾಮಗಾರಿ ಆರಂಭ ಆಗದಿರುವುದು ನಿತ್ಯ ಸಂಚರಿಸುವ ಪಾದಚಾರಿಗಳು, ಚಾಲಕರಿಗೆ ನೋವು ಉಂಟು ಮಾಡಿದೆ. ಗಂಗಮ್ಮನ ಗುಡಿ ಕಡೆಯಿಂದ ಬರುವ ವಾಹನಗಳು, ಪೀಣ್ಯ ಅಥವಾ ಹುಬ್ಬಳ್ಳಿ ಕಡೆಗೆ ಸರಾಗವಾಗಿ ಸಾಗುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾಲ್ಕು ಕಡೆಯಿಂದ ವೇಗವಾಗಿ ವಾಹನಗಳು ಬರುತ್ತವೆ. ರಸ್ತೆ ದಾಟಲು ಪಾದಚಾರಿಗಳು ಗಡಿಬಿಡಿಯಲ್ಲಿ ಸಾಗಿ ಅಪಾಯಕ್ಕೆ ಸಿಲುಕಿಕೊಳ್ಳುತ್ತಿದ್ದಾರೆ.

ಜಾಲಹಳ್ಳಿಯ ಎಸ್.ಎಂ.ರಸ್ತೆಯಿಂದ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ (ಜಾಲಹಳ್ಳಿ ಕ್ರಾಸ್) ಸಂಪರ್ಕ ಕಲ್ಪಿಸುವ ಕೆಳಸೇತುವೆ ಕಾಮಗಾರಿಗೆ 2019ರಲ್ಲೇ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಹಿಂದಿನ ಬಿಬಿಎಂಪಿ) ಯೋಜನೆ ರೂಪಿಸಿತ್ತು. ಕಾಮಗಾರಿಗೆ ₹57 ಕೋಟಿ ನಿಗದಿಪಡಿಸಿ ಟೆಂಡರ್ ಸಹ ಆಹ್ವಾನಿಸಲಾಗಿತ್ತು. 2022ರಲ್ಲಿ ಒಂದು ಬದಿಯ ಕಟ್ಟಡಗಳನ್ನು ತೆರವು ಮಾಡಲಾಗಿತ್ತು. ಆದರೆ, ಅಂಗಡಿ ಮಾಲೀಕರು ಹೆಚ್ಚಿನ ಪರಿಹಾರ ಕೋರಿ ಕೋರ್ಟ್ ಮೆಟ್ಟಿಲೇರಿದ್ದು, ಕಾಮಗಾರಿ ಆರಂಭಿಸಲು ಸಾಧ್ಯವಾಗಿಲ್ಲ.

ಇನ್ನು ನೆಲಮಂಗಲ ಜಂಕ್ಷನ್‌ನಲ್ಲೂ ಸಂಜೆ 4ರಿಂದ ರಾತ್ರಿ 8ರವರೆಗೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಜಂಕ್ಷನ್ ದಾಟಲು ಅರ್ಧ ತಾಸು ಬೇಕಾಗಿದೆ. ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ ಎಂದು ವಾಹನ ಚಾಲಕರು ನೋವು ತೋಡಿಕೊಂಡರು.



ಹೆದ್ದಾರಿ ಬದಿಯಲ್ಲಿ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳು ನಿಲುಗಡೆ ಮಾಡಲಾಗುತ್ತಿದ್ದು, ಇದು ಸಹ ವಾಹನ ದಟ್ಟಣೆಗೆ ಕಾರಣವಾಗಿದೆ



ಗೊರಗುಂಟೆಪಾಳ್ಯ ಜಂಕ್ಷನ್ ಬಳಿ ಟ್ರಾಫಿಕ್ ದಟ್ಟಣೆ ಉಂಟಾಗಿದ್ದ ದೃಶ್ಯ —ಚಿತ್ರಗಳು: ರಂಜು ಪಿ

ಎಲ್ಲೆಲ್ಲಿ ಅಪಾಯ?

ಕೆಎಸ್‌ಆರ್‌ಟಿಸಿ ಹಾಗೂ ಸಂಚಾರ ಪೊಲೀಸರು ಗುರುತಿಸಿರುವ ಅಪಘಾತ ಸಂಭವಿಸುವ ಸ್ಥಳಗಳು (ಬೆಂಗಳೂರು–ತುಮಕೂರು–ಹಾಸನ ಮಾರ್ಗ)

- ಸುಜಾತಾ ಸಿಗ್ನಲ್ • ಓಕಳಿಪುರ ಜಂಕ್ಷನ್
- ನವರಂಗ್ ವೃತ್ತ
- ಯಶವಂತಪುರ/ಆರ್‌ಎಂಸಿ ಯಾರ್ಡ್ ರಸ್ತೆ
- ಗೊರಗುಂಟೆಪಾಳ್ಯ ಜಂಕ್ಷನ್
- ಎಸ್‌ಆರ್‌ಎಸ್ ಜಂಕ್ಷನ್
- ಪೀಣ್ಯ ಜಂಕ್ಷನ್ • ಜಾಲಹಳ್ಳಿ ಕ್ರಾಸ್
- 8ನೇ ಮೈಲಿ • ಮಾದನಾಯಕನಹಳ್ಳಿ
- ಅರಿಶಿನಕುಂಟೆ • ಕುಣಿಗಲ್ ಬೈಪಾಸ್
- ಟಿ.ಬೇಗೂರು, ತ್ಯಾಮಗೊಂಡ್ಲು ಕ್ರಾಸ್

ಸಂಚಾರ ವಿಭಾಗಕ್ಕಿಲ್ಲ ವಿಶೇಷ ಕಮಿಷನರ್

ಸಂಚಾರ ವಿಭಾಗಕ್ಕೆ 2023ರಲ್ಲಿ ಹೊಸದಾಗಿ ವಿಶೇಷ ಕಮಿಷನರ್ ಹುದ್ದೆ ಸೃಜಿಸಲಾಗಿತ್ತು. ಎಂ.ಎ.ಸಲೀಂ ಅವರು ಆ ವಿಭಾಗದಲ್ಲಿ ಮೊದಲ ವಿಶೇಷ ಕಮಿಷನರ್ (ಈಗಿನ ರಾಜ್ಯ ಪೊಲೀಸ್ ಮಹಾನಿರ್ದೇಶಕ) ಆಗಿ ಕೆಲಸ ಮಾಡಿದ್ದರು. ಹಲವು ಸುಧಾರಣಾ ಕ್ರಮಗಳನ್ನೂ ಜಾರಿಗೆ ತಂದಿದ್ದರು. ಅವರು ವರ್ಗಾವಣೆಯಾದ ನಂತರ ವಿಶೇಷ ಕಮಿಷನರ್ ನೇಮಕವೇ ಆಗಿಲ್ಲ.

‘ನಗರದಲ್ಲಿ ಒಂದೂವರೆ ಕೋಟಿಗೂ ಹೆಚ್ಚಿನ ವಾಹನಗಳಿವೆ. ವಾಹನ ದಟ್ಟಣೆ ಸಮಸ್ಯೆ ಪ್ರತಿನಿತ್ಯ ಉಲ್ಬಣಿಸುತ್ತಿದ್ದು, ಸಂಚಾರ ವಿಭಾಗಕ್ಕೆ ವಿಶೇಷ ಕಮಿಷನರ್ ನೇಮಿಸಬೇಕು’ ಎಂಬ ಆಗ್ರಹವಿದೆ.

ಹೆದ್ದಾರಿ ಬದಿಯಲ್ಲಿ ಟ್ರಕ್...

ದಟ್ಟಣೆ ಅವಧಿಯಾದ ಬೆಳಿಗ್ಗೆ 7ರಿಂದ 11ರವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 11ರವರೆಗೆ ಸರಕು ಸಾಗಣೆ ವಾಹನಗಳಿಗೆ ನಗರದ ಒಳಕ್ಕೆ ಪ್ರವೇಶ ಇಲ್ಲ. ಹೀಗಾಗಿ, ದೂರದ ಜಿಲ್ಲೆಗಳಿಂದ ನಗರದ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಬರುವ ಟ್ರಕ್‌ಗಳು, ಹೆದ್ದಾರಿ ಬದಿಯಲ್ಲಿ ನಿಂತಿರುತ್ತವೆ (ಟೋಲ್ ಗೇಟ್ ಬಳಿ). ವೇಗವಾಗಿ ಬರುವ ಕಾರುಗಳು, ದ್ವಿಚಕ್ರ ವಾಹನಗಳು, ಸರಕು ಸಾಗಣೆ ವಾಹನಗಳಿಗೆ ಡಿಕ್ಕಿ ಹೊಡೆಯುತ್ತಿರುವ ಘಟನೆಗಳು ಆಗಾಗ್ಗೆ ಸಂಭವಿಸುತ್ತಲೇ ಇರುತ್ತವೆ.

ಸರಕು ಸಾಗಣೆ ವಾಹನ ನಿಲುಗಡೆಗೆ ನೈಸ್ ರಸ್ತೆಯ ಬದಿಯಲ್ಲಿ ಖಾಲಿ ಪ್ರದೇಶ ನೀಡುವಂತೆ ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದ್ದರೂ, ಇದಕ್ಕೆ ಮನ್ನಣೆ ಸಿಕ್ಕಿಲ್ಲ.

ಚಿಟಿಕೆ ಸುದ್ದಿ

ಶಾಲೆಗಳಲ್ಲಿ 'ನೀರಿನ ಗಂಟೆ' ಕಡ್ಡಾಯ



ಬೆಂಗಳೂರು: ಮಕ್ಕಳಿಗೆ ನೀರು ಕುಡಿಯುವಂತೆ ಜ್ಞಾಪಿಸಲು ಶಾಲೆಗಳಲ್ಲಿ 'ನೀರಿನ ಗಂಟೆ' (ವಾಟರ್ ಬೆಲ್) ಬಾರಿಸುವುದನ್ನು ಕಡ್ಡಾಯಗೊಳಿಸಿ, ಶಾಲಾ ಶಿಕ್ಷಣ ಇಲಾಖೆಯ 'ಪಿ.ಎಂ ಪೋಷಣ್ ಶಕ್ತಿ ನಿರ್ಮಾಣ್' ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.

ಆರೋಗ್ಯ, ಬೆಳವಣಿಗೆ ದೃಷ್ಟಿಯಿಂದ ಮಕ್ಕಳು ನಿತ್ಯವೂ ನಿಗದಿತ ಪ್ರಮಾಣದಲ್ಲಿ ನೀರು ಕುಡಿಯಬೇಕು. ಆದರೆ, ಮಕ್ಕಳಿಗೆ ಈ ಕುರಿತು ಸೂಕ್ತ ಅರಿವು ಇರುವುದಿಲ್ಲ. ಅದಕ್ಕಾಗಿ ಶಾಲಾ ಅವಧಿಯಲ್ಲಿ ಮಕ್ಕಳು ನಿಯಮಿತವಾಗಿ ನೀರು ಕುಡಿಯುವುದನ್ನು ನೆನಪಿಸಬೇಕಾದುದು ಶಿಕ್ಷಕರು ಮತ್ತು ಸಿಬ್ಬಂದಿಯ ಜವಾಬ್ದಾರಿಯೂ ಆಗಿದೆ ಎಂದು ಹೇಳಿದ್ದಾರೆ.

ಮಕ್ಕಳಿಗೆ ಶುದ್ಧ ಕುಡಿಯುವ ನೀರು ನೀಡಬೇಕು. ನೀರಿನಿಂದ ಹರಡಬಹುದಾದ ಕಾಯಿಲೆಗಳಿಗೆ ತುತ್ತಾಗದಂತೆ ಎಚ್ಚರ ವಹಿಸಬೇಕು. ಮಧ್ಯಾಹ್ನದ ಬಿಸಿಯೂಟ, ಆಟದ ಸಮಯದಲ್ಲಿ ನೀರು ಲಭ್ಯ ಇರುವಂತೆ ನೋಡಿಕೊಳ್ಳಬೇಕು. ಎಲ್‌ಕೆಜಿ, ಯುಕೆಜಿ ಒಳಗೊಂಡಂತೆ ಎಲ್ಲ ಹಂತದಲ್ಲೂ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳು ಈ ನಿಯಮ ಪಾಲಿಸಬೇಕು ಎಂದು ಸೂಚಿಸಿದ್ದಾರೆ.

22ರಿಂದ ಅಧಿವೇಶನ

ಬೆಂಗಳೂರು: ವಿಧಾನ ಮಂಡಲದ ಜಂಟಿ ಅಧಿವೇಶನ ಇದೇ 22ರಿಂದ 31ರವರೆಗಿನ ಅವಧಿಯಲ್ಲಿ ರಜಾದಿನಗಳನ್ನು ಹೊರತುಪಡಿಸಿ ಒಟ್ಟು ಏಳು ದಿನ ನಡೆಯಲಿದೆ ಎಂದು ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದ್ದಾರೆ.

'22ರಂದು ಬೆಳಿಗ್ಗೆ 11 ಗಂಟೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. 24, 25 ಮತ್ತು 26ರಂದು ಸಾರ್ವತ್ರಿಕ ರಜಾ ದಿನಗಳಿರುವುದರಿಂದ ಅಂದು ಕಾರ್ಯಕಲಾಪಗಳು ಇರುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಅಧಿವೇಶನದ ಅವಧಿಯಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮತ್ತು ಕೇಂದ್ರ ಸರ್ಕಾರ ನರೇಗಾ ಕಾಯ್ದೆಯ ಬದಲು ಹೊಸತಾಗಿ ಜಾರಿಗೆ ತಂದಿರುವ 'ವಿಬಿ ಜಿ ರಾಮ್ ಜಿ' ಕಾಯ್ದೆಯ ಕುರಿತು ವಿಶೇಷ ಚರ್ಚೆ ನಡೆಯಲಿದೆ.

'ತಾಂತ್ರಿಕ ಪದಗಳ ಸಂಶೋಧನೆ ಅಗತ್ಯ'

ನವದೆಹಲಿ (ಪಿಟಿಐ): 'ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖಿಸಿರುವ 'ಧರ್ಮ'ದಂತಹ ತಾಂತ್ರಿಕ ಪದಗಳ ಬಗ್ಗೆ ವ್ಯಾಪಕ ಸಂಶೋಧನೆ ನಡೆಯಬೇಕಿದೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಗುರುವಾರ ಹೇಳಿದರು.

ಬಿಜೆಪಿಯ ಮಾಜಿ ಸಂಸದ ತರುಣ್ ವಿಜಯ್ ರಚನೆಯ 'ಮಂತ್ರ ವಿಪ್ಲವ' ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನ್ಮಜಾತ ಸಮಸ್ಯೆ ಪತ್ತೆಗೆ ತಪಾಸಣೆ

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಯೋಗಿಕ ಜಾರಿ

• ವರುಣ ಹೆಗಡೆ

ಬೆಂಗಳೂರು: ಜನ್ಮಜಾತ ಅನಾರೋಗ್ಯ ಸಮಸ್ಯೆಗಳ ಪತ್ತೆಯ ಜತೆಗೆ, ವಿರಳ ಕಾಯಿಲೆಗಳಿಂದ ಸಂಭವಿಸುತ್ತಿರುವ ಮರಣ ತಡೆಯಲು ಆರೋಗ್ಯ ಇಲಾಖೆಯು 'ಸಾರ್ವತ್ರಿಕ ನವಜಾತ ಶಿಶು ತಪಾಸಣೆ ಯೋಜನೆ' ರೂಪಿಸಿದೆ.

ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಶೀಘ್ರದಲ್ಲಿಯೇ ಜಾರಿಯಾಗಲಿದೆ. ಈ ಸಂಬಂಧ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ (ಐಜಿಐಸಿಎಚ್) ವಿವಿಧ ಸರ್ಕಾರಿ ಹೆರಿಗೆ ಆಸ್ಪತ್ರೆಗಳ ವೈದ್ಯರಿಗೆ ಅಗತ್ಯ ತರಬೇತಿ ನೀಡಲಾಗುತ್ತಿದೆ. ಜನಿಸಿದ 48 ಗಂಟೆಯಿಂದ 72 ಗಂಟೆಯ ಒಳಗೆ ಶಿಶುಗಳ ರಕ್ತದ ಮಾದರಿಯನ್ನು ಪಡೆದು, ಪರೀಕ್ಷೆ ನಡೆಸಲು ಪ್ರಯೋಗಾಲಯಕ್ಕೆ ಕಳಿಸಲಾಗುತ್ತದೆ. ಆರಂಭಿಕ ಹಂತದಲ್ಲಿಯೇ ಸಮಸ್ಯೆ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ ಸಾಧ್ಯ ಎಂಬ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ. ಎರಡೂ ಜಿಲ್ಲೆಗಳ ಸರ್ಕಾರಿ ಹೆರಿಗೆ ಆಸ್ಪತ್ರೆಗಳಲ್ಲಿ ಈ ಯೋಜನೆ ಜಾರಿಗೆ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದೆ.



ಜನ್ಮಜಾತ ಸಮಸ್ಯೆ ಪತ್ತೆಗೆ ಸಂಬಂಧಿಸಿ ವೈದ್ಯರಿಗೆ ತರಬೇತಿ ಒದಗಿಸಲಾಗುತ್ತಿದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಪ್ರಾಣಾಪಾಯದಿಂದ ಪಾರು ಮಾಡಬಹುದು
ಡಾ. ಸಂಜಯ್ ಕೆ.ಎಸ್., ಐಜಿಐಸಿಎಚ್ ನಿರ್ದೇಶಕ



ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಹಾಗೂ ವಾಣಿವಿಲಾಸ ಆಸ್ಪತ್ರೆಯನ್ನು ಪರೀಕ್ಷಾ ಕೇಂದ್ರಗಳಾಗಿ ಗುರುತಿಸಲಾಗಿದೆ. ಇಲ್ಲಿ ಜನ್ಮಜಾತ ಅನಾರೋಗ್ಯ ಸಮಸ್ಯೆ ಪತ್ತೆಗೆ ಪ್ರಯೋಗಾಲಯ ವ್ಯವಸ್ಥೆಯಿದೆ. ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಹೆರಿಗೆಯಾಗುವ ಎಲ್ಲ ನವಜಾತ ಶಿಶುಗಳನ್ನು ರೋಗ ಪತ್ತೆ ತಪಾಸಣೆಗೆ ಒಳಪಡಿಸಲಾಗುತ್ತದೆ. ಸಮಸ್ಯೆಯ ಸಂದೇಹ ಇರುವ ಮಗುವಿನ ರಕ್ತದ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಲಾಗುತ್ತದೆ.

ಐದು ರೋಗ ಪತ್ತೆ: ಯೋಜನೆಯಡಿ 'ಹೈಪೋಥೈರಾಯ್ಡಿಸಮ್', 'ಅಡ್ರಿನಲ್ ಹೈಪರ್‌ಪ್ಲಾಸಿಯಾ' (ಸಿಎಎಚ್), 'ಗ್ಯಾಲಕ್ಟೋಸೆಮಿಯಾ', 'ಫಿನೈಲ್ಕೆಟೋನೂರಿಯಾ' ಮತ್ತು 'ಗ್ಲೂಕೋಸ್-6 ಫಾಸ್ಫೇಟ್ ಡಿಹೈಡ್ರೋಜಿನೇಸ್' (ಜಿ6ಪಿಡಿ) ಕೊರತೆ ಮತ್ತು ಚಯಾಪಚಯ ಅಸ್ವಸ್ಥತೆಗಳ ಪತ್ತೆಗೆ ತಪಾಸಣೆ ಮಾಡಲಾಗುತ್ತದೆ. ರೋಗ ನಿರ್ಣಯದ ಪರೀಕ್ಷೆಗೆ ತಲಾ ₹500 ನಿಗದಿಪಡಿಸಲಾಗಿದೆ. ರೋಗ ಗೊತ್ತುಪಡಿಸಿದ ಬಳಿಕ ಹಾರ್ಮೋನ್‌ಗಳ ಬದಲಾವಣೆ ಸೇರಿ ವಿವಿಧ ಚಿಕಿತ್ಸೆಗಳಿಗೆ ಒಳಪಡಿಸಲಾಗುತ್ತದೆ.

'ಅಪಾಯದಲ್ಲಿರುವ ಶಿಶುಗಳನ್ನು ಗುರುತಿಸಿ, ಚಿಕಿತ್ಸೆ ಒದಗಿಸಲು ಈ ಯೋಜನೆ ಸಹಕಾರಿಯಾಗಲಿದೆ. ಈ ತಪಾಸಣೆ ಹಾಗೂ ಚಿಕಿತ್ಸೆಯಿಂದ ನವಜಾತ ಶಿಶುಗಳ ಮರಣ ಪ್ರಮಾಣವೂ ಇಳಿಕೆಯಾಗಲಿದೆ. ಆರಂಭಿಕ ಹಂತದಲ್ಲಿ ಸಮಸ್ಯೆ ಗುರುತಿಸದಿದ್ದರೆ ಚಿಕಿತ್ಸೆ ದುಬಾರಿಯಾಗುವ ಜತೆಗೆ, ಮಗು ಅಂಗವಿಕಲತೆಗೆ ಒಳಗಾಗುವ ಅಥವಾ ಮೃತಪಡುವ ಸಾಧ್ಯತೆ ಇರುತ್ತದೆ' ಎಂದು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

57 ಸಾವಿರ ಶಿಶುಗಳ ತಪಾಸಣೆ

ಯೋಜನೆಯಡಿ ಪ್ರಾಯೋಗಿಕವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ, 57,350 ನವಜಾತ ಶಿಶುಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಅನುದಾನ ಒದಗಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ) ವ್ಯಾಪ್ತಿಗೆ ಒಳಪಡುವ ತುಮಕೂರು, ಬಳ್ಳಾರಿ, ಚಿತ್ರದುರ್ಗ ಮತ್ತು ವಿಜಯಪುರ ಜಿಲ್ಲೆಗಳ ತಾಲ್ಲೂಕುಗಳಲ್ಲಿನ ಸರ್ಕಾರಿ ಹೆರಿಗೆ ಆಸ್ಪತ್ರೆಗಳಲ್ಲಿ ಈ ತಪಾಸಣೆ ನಡೆಸಲಾಗುತ್ತದೆ.

ರಾಜೀವ್ ಗೌಡ ವಿರುದ್ಧ ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಟ್' ಸಿನಿಮಾ ಪ್ರಚಾರದ ಬ್ಯಾನರ್ ತೆರವುಗೊಳಿಸಿದ್ದಕ್ಕೆ ಕುಪಿತಗೊಂಡು ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಅಮೃತಾಗೌಡ ಅವರಿಗೆ ಮೊಬೈಲ್ ಕರೆ ಮಾಡಿ ಅವಾಚ್ಯವಾಗಿ ನಿಂದಿಸಿದ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್ (ಎನ್‌ಎಫ್‌ಐಡಬ್ಲ್ಯು) ಸರ್ಕಾರವನ್ನು ಆಗ್ರಹಿಸಿದೆ.



ರಾಜೀವ್ ಗೌಡ

ಈ ಸಂಬಂಧ ಹೇಳಿಕೆ ನೀಡಿರುವ ಸಂಘಟನೆ ಅಧ್ಯಕ್ಷೆ ಎ. ಜ್ಯೋತಿ, 'ಅಕ್ರಮಗಳನ್ನು ಪ್ರಶ್ನಿಸುವುದು ಅಧಿಕಾರಿಗಳ ಕರ್ತವ್ಯ. ಹೀಗೆ ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸಿರುವ ವಿಷಯಕ್ಕೆ ಅಧಿಕಾರಿಯನ್ನು ನಿಂದಿಸಿ, ಕಚೇರಿಗೆ ಬೆಂಕಿ ಹಚ್ಚಿ ದಂಗೆ ಎಬ್ಬಿಸುವುದಾಗಿ ಬೆದರಿಕೆ ಹಾಕಿರುವ ರಾಜೀವ್ ಗೌಡ ಕಾನೂನಿನ ಶಿಕ್ಷೆಗೆ ಅರ್ಹರು. ಸರ್ಕಾರ ಯಾವ ಮುಲಾಜಿಗೂ ಒಳಗಾಗದೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ರಾಜೀವ್ ಗೌಡ ಸೌಮ್ಯ ಸ್ವಭಾವದವರು. ಇಷ್ಟೊಂದು ಭಾವೋದ್ವೇಗಕ್ಕೆ ಒಳಗಾಗಬಾರದು ಎಂದು ಕರೆದು ಬುದ್ಧಿ ಹೇಳುತ್ತೇನೆ
ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

ಬೇರೆಯವರನ್ನು ನಿಂದಿಸುವ, ಅವಾಚ್ಯ ಶಬ್ದದಲ್ಲಿ ಮಾತನಾಡುವ ಹಕ್ಕು ಯಾರಿಗೂ ಇಲ್ಲ. ರಾಜೀವ್ ಗೌಡ ಅವರನ್ನು ಸಮರ್ಥನೆ ಮಾಡಿಕೊಳ್ಳುವುದು ತಪ್ಪು
ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

'ರಾಜೀವ್ ಗೌಡ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ. ಮಹಿಳಾ ಅಧಿಕಾರಿಯ ಮೇಲೆ ಇಷ್ಟೊಂದು ದರ್ಪ ತೋರುತ್ತಾರೆಂದರೆ, ಅವರೇನಾದರೂ ಶಾಸಕರಾಗಿ ಚುನಾಯಿತರಾಗಿದ್ದರೆ ಯಾವ ರೀತಿಯಲ್ಲಿ ರಾಜ್ಯದಲ್ಲಿ ದಬ್ಬಾಳಿಕೆ ತೋರುತ್ತಿದ್ದರು ಎನ್ನುವುದು ಅನೂಹ್ಯ. ಆದ್ದರಿಂದ ಕಾಂಗ್ರೆಸ್ ಪಕ್ಷದಿಂದ ಕೂಡಲೇ ಉಚ್ಚಾಟಿಸಬೇಕು' ಎಂದು ಕಾರ್ಯದರ್ಶಿ ಕೆ.ರೇಣುಕಾ, ಉಪಾಧ್ಯಕ್ಷೆ ಪದ್ಮ ಪಾಟೀಲ, ಖಜಾಂಚಿ ವೈ.ಮಹಾದೇವಮ್ಮ, ಸಹ ಕಾರ್ಯದರ್ಶಿ ಪುಷ್ಪ ಮನವಿ ಮಾಡಿದ್ದಾರೆ.

ಪ್ರಕರಣ ದಾಖಲು: (ಶಿಡ್ಲಘಟ್ಟ ವರದಿ): ಶಿಡ್ಲಘಟ್ಟ ಶಾಸಕ ಬಿ.ಎನ್.ರವಿಕುಮಾರ್ ಮತ್ತು ನಗರಸಭೆ ಆಯುಕ್ತೆ ಅಮೃತಾ ಗೌಡ ದೂರು ಆಧರಿಸಿ ಪೊಲೀಸರು ರಾಜೀವ್ ಗೌಡ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಪ್ರಕರಣ ದಾಖಲಾಗುತ್ತಲೇ ರಾಜೀವ್ ಗೌಡ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ ಎಂಬ ವದಂತಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ತಳ್ಳಿ ಹಾಕಿದ್ದಾರೆ. 'ರಾಜೀವ್ ಗೌಡ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ವಿಚಾರಣೆ ನಡೆಯಬೇಕಿದೆ. ಅವರ ಪತ್ತೆಗೆ ಯಾವುದೇ ತಂಡವನ್ನೂ ರಚಿಸಿಲ್ಲ ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಬಂಧನಕ್ಕೆ ಆಗ್ರಹ

ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಅಮೃತ ಗೌಡ ಅವರಿಗೆ ಬೆದರಿಕೆ ಹಾಕಿರುವ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರನ್ನು ಬಂಧಿಸಬೇಕು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಆಗ್ರಹಿಸಿದೆ.

ಅನಧಿಕೃತವಾಗಿ ಅಳವಡಿಸಿದ ಫ್ಲೆಕ್ಸ್ ಅನ್ನು ತೆರವುಗೊಳಿಸಿದ್ದಕ್ಕಾಗಿ ಪೌರಾಯುಕ್ತೆಗೆ ಕರೆ ಮಾಡಿ ಅವಾಚ್ಯವಾಗಿ ನಿಂದಿಸಿ, ಜೀವ ಬೆದರಿಕೆ ಹಾಕಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ ರಾಜೀವ್ ಗೌಡ ವಿರುದ್ಧ ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 79, 132, 352, 194, 54ರ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕೂಡಲೇ ಅವರನ್ನು ಬಂಧಿಸಬೇಕು. ಇಲ್ಲದೇ ಇದ್ದರೆ ಸಂಘವು ಉಗ್ರ ಹೋರಾಟ ಹಮ್ಮಿಕೊಳ್ಳಲಿದೆ ಎಂದು ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ತಿಳಿಸಿದ್ದಾರೆ.

ಕೆಪಿಸಿಸಿಯಿಂದ ಶೋಕಾಸ್ ನೋಟಿಸ್

'ಘಟನೆಯ ಕುರಿತು ಸ್ಪಷ್ಟನೆ ನೀಡುವಂತೆ ರಾಜೀವ್ ಗೌಡ ಅವರಿಗೆ ಕೆಪಿಸಿಸಿ ಶೋಕಾಸ್ ನೋಟಿಸ್ ನೀಡಿದೆ. ಒಂದು ವಾರದ ಒಳಗೆ ಸೂಕ್ತ ಸಮಜಾಯಿಸಿ ನೀಡದಿದ್ದರೆ ಶಿಸ್ತು ಸಮಿತಿ ಮುಂದಿನ ಕ್ರಮ ತೆಗೆದುಕೊಳ್ಳಲಿದೆ' ಎಂದು ನೋಟಿಸ್‌ನಲ್ಲಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಎಚ್ಚರಿಕೆ ನೀಡಿದ್ದಾರೆ.

'ಪೌರಾಯುಕ್ತರೊಂದಿಗೆ ದೂರವಾಣಿ ಸಂಭಾಷಣೆ ನಡೆಸುವಾಗ ವ್ಯಕ್ತಿಗತವಾಗಿ ಕೆಟ್ಟ ಪದಗಳನ್ನು ಉಪಯೋಗಿಸಿ ನಿಂದಿಸಿರುವ ವಿಷಯಗಳು ಮಾಧ್ಯಮಗಳಲ್ಲಿ ಬಿತ್ತರಗೊಂಡಿವೆ. ನಿಮ್ಮ ವರ್ತನೆ ಹಾಗೂ ಪೌರಾಯುಕ್ತರೊಂದಿಗೆ ಆಡಿರುವ ಮಾತು ಪಕ್ಷಕ್ಕೆ ತೀವ್ರ ಮುಜುಗರ ಉಂಟುಮಾಡಿದೆ. ನೀವು ಪಕ್ಷದ ಶಿಸ್ತು ಉಲ್ಲಂಘಿಸಿದ್ದೀರೆಂದು ಈ ಕಾರಣ ಕೇಳಿ ನೋಟಿಸ್ ನೀಡಲಾಗುತ್ತಿದೆ. ಸೂಕ್ತ ಸಮಜಾಯಿಷಿ ನೀಡದಿದ್ದರೆ ಶಿಸ್ತು ಸಮಿತಿಯು ಮುಂದಿನ ಕ್ರಮ ಕೈಗೊಳ್ಳಲಿದೆ' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ತೇಜಸ್ವಿ... ತೇಜಸ್ಸು...

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್



ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲ-ಪುಷ್ಪ ಪ್ರದರ್ಶನದಲ್ಲಿ ಹೂವುಗಳು ಹಾಗೂ ಧಾನ್ಯಗಳಿಂದ ರೂಪಿಸಿರುವ ಪೂರ್ಣಚಂದ್ರ ತೇಜಸ್ವಿ ಅವರ ಪ್ರತಿರೂಪ ಗುರುವಾರ ನೋಡುಗರ ಗಮನ ಸೆಳೆಯಿತು

ಮತ್ತೆ ರಾಜ್ಯ ರಾಜಕಾರಣಕ್ಕೆ ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮತ್ತೆ ಮರಳುವ ಸುಳಿವು ನೀಡಿದ್ದಾರೆ.

ಸಂಕ್ರಾಂತಿಯ ದಿನ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯ ರಾಜಕಾರಣದಿಂದ ದೂರ ಸರಿಯುವುದಿಲ್ಲ. ನಾನು ಎಲ್ಲಿರಬೇಕು ಎನ್ನುವುದನ್ನು ತೀರ್ಮಾನ ಮಾಡುವುದು ರಾಜ್ಯದ ಜನ. ರಾಜ್ಯ ರಾಜಕಾರಣಕ್ಕೆ ಯಾವಾಗ ಬರಬೇಕು ಎನ್ನುವ ಜನರ ಆಶಯದಂತೆ ಮುಂದಿನ ತೀರ್ಮಾನ ಮಾಡುತ್ತೇನೆ' ಎಂದರು.



ಕುಮಾರಸ್ವಾಮಿ

'ರಾಜ್ಯ ರಾಜಕೀಯದಿಂದ ದೂರ ಸರಿಯುತ್ತೇನೆ ಅಂತ ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಪ್ರಧಾನ ಮಂತ್ರಿಯವರು ಒಳ್ಳೆಯ ಜವಾಬ್ದಾರಿ ಕೊಟ್ಟಿದ್ದಾರೆ. ಎರಡು ಇಲಾಖೆಗಳಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಅವಕಾಶ ನೀಡಿದ್ದಾರೆ. ರಾಜ್ಯ ರಾಜಕೀಯಕ್ಕೆ ಮರಳುವ ಕುರಿತು ತೀರ್ಮಾನ ಮಾಡುತ್ತೇನೆ' ಎಂದರು.

'ಜೆಡಿಎಸ್ ಪ್ರಸ್ತುತ ಎನ್‌ಡಿಎ ಭಾಗವಾಗಿದೆ. ಮೈತ್ರಿಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಇರಬಾರದು. ರಾಜ್ಯದಲ್ಲಿ ಉತ್ತಮ ಸರ್ಕಾರ ತರಬೇಕು ಎನ್ನುವುದೇ ನನ್ನ ಆಶಯ. ರಾಜ್ಯದ ಆಡಳಿತ ಹೇಗೆ ನಡೆಯುತ್ತಿದೆ ಎಂದು ನಿರಂತರವಾಗಿ ಗಮನಿಸುತ್ತಿದ್ದೇನೆ. ಒಳ್ಳೆಯ ಸರ್ಕಾರ ಬಂದು ಜನರು ನೆಮ್ಮದಿಯಿಂದ ಇರಬೇಕು. ಅದಕ್ಕಾಗಿ ಜನರ ತೀರ್ಮಾನದಂತೆ ನಡೆಯುತ್ತೇನೆ' ಎಂದು ಹೇಳಿದರು.

'ಸ್ಥಾನಮಾನಕ್ಕಾಗಿ ಕಾನೂನುಬಾಹಿರ ಕೆಲಸ'

ಸರ್ಕಾರ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಕೆಲಸ ಮಾಡಿಸುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರೂ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಕಾನೂನುಬಾಹಿರ ಕೆಲಸ ಮಾಡಿಸುತ್ತಿದ್ದಾರೆ. ಸರ್ಕಾರ ಸರಿ ಇಲ್ಲ. ಚುಕ್ಕಾಣಿ ಹಿಡಿದವರೂ ಸರಿ ಇಲ್ಲ ಎಂದು ಕುಮಾರಸ್ವಾಮಿ ದೂರಿದರು.

ಕೆಲ ಅಧಿಕಾರಿಗಳು ಬಡ್ತಿ, ಉತ್ತಮ ಸ್ಥಳಗಳ ನಿರೀಕ್ಷೆಯಲ್ಲಿ ಕಾನೂನು ಬಾಹಿರ ಕೆಲಸ ಮಾಡಿದಾಗ ಪ್ರತಿಫಲ ಅನುಭವಿಸಬೇಕಾಗುತ್ತದೆ. 'ಪ್ರಜಾವಾಣಿ' ಪತ್ರಿಕೆಯಲ್ಲಿ ಈಚೆಗೆ 'ಕಳಪೆ ಕಾಮಗಾರಿ; ಆರು ಮಂದಿ ಹೊಣೆ' ಎನ್ನುವ ವರದಿ ಓದಿದೆ. ವಿಕಾಸಸೌಧ ನಿರ್ಮಾಣದಲ್ಲಿ ಎಂಜಿನಿಯರುಗಳು ನಡೆಸಿರುವ ಅಕ್ರಮ ಬಯಲಾಗಿದೆ. ಅಧಿಕಾರಿಗಳು ಜನಪ್ರತಿನಿಧಿಗಳ ಒತ್ತಡಕ್ಕೆ ಕೆಲಸ ಮಾಡಬಾರದು. ಕಾನೂನು, ಆತ್ಮಸಾಕ್ಷಿಯಂತೆ ಕೆಲಸ ಮಾಡಬೇಕು' ಎಂದು ಹೇಳಿದರು.

ಸುದ್ದಿ 2 ನಿಮಿಷ

ಅಂಗವಿಕಲ ಉದ್ಯೋಗಿ ಮರು ನೇಮಕ: ಎಸ್‌ಬಿಐಗೆ ಆದೇಶ

ಬೆಂಗಳೂರು: ಪ್ರೊಬೇಷನರಿ ಅವಧಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅಂಗವಿಕಲ ಉದ್ಯೋಗಿಯೊಬ್ಬರನ್ನು ವಜಾಗೊಳಿಸಿದ್ದ ಭಾರತೀಯ ಸ್ಟೇಟ್ ಬ್ಯಾಂಕ್ ಆದೇಶವನ್ನು ರದ್ದುಪಡಿಸಿರುವ ಹೈಕೋರ್ಟ್, 'ಮತ್ತೆ ಉದ್ಯೋಗ ನೀಡಬೇಕು' ಎಂದು ನಿರ್ದೇಶಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ನಗರದ ಸೇಂಟ್ ಮಾರ್ಕ್ಸ್ ರಸ್ತೆಯ ಎಸ್‌ಬಿಐನ ಸಹಾಯಕ ವ್ಯವಸ್ಥಾಪಕ ನಿರ್ದೇಶಕ ಸಲ್ಲಿಸಿದ್ದ ಮೇಲ್ಮನವಿಯನ್ನು (ಡಬ್ಲ್ಯು.ಎ 1880/2025) ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

ಪ್ರಕರಣವೇನು?: ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಕುರುವ ಸೋಮೇಶ್ (29) ಎಸ್‌ಬಿಐನ ಸೇಂಟ್ ಮಾರ್ಕ್ಸ್ ರಸ್ತೆ ಶಾಖೆಯಲ್ಲಿ 2023ರಲ್ಲಿ ಕಿರಿಯ ಸಹಾಯಕರಾಗಿ ನೇಮಕಗೊಂಡಿದ್ದರು. ಒಂಬತ್ತು ತಿಂಗಳ ಉದ್ಯೋಗ ನಿರ್ವಹಿಸಿದ್ದ ಅವರನ್ನು ಕರ್ತವ್ಯ ಲೋಪ ಆರೋಪದಡಿ ವಜಾಗೊಳಿಸಲಾಗಿತ್ತು.

ವಜಾ ಆದೇಶವನ್ನು ಪ್ರಶ್ನಿಸಿ ಸೋಮೇಶ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರನ್ನು ಕೆಲಸಕ್ಕೆ ಮರು ನೇಮಕ ಮಾಡಿಕೊಳ್ಳಬೇಕು' ಎಂದು 2025ರ ಅಕ್ಟೋಬರ್ 16ರಂದು ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಬ್ಯಾಂಕ್ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿತ್ತು.

ಅಂಗವಿಕಲ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಚ್. ಸುನಿಲ್ ಕುಮಾರ್ ಮಂಡಿಸಿದ ವಾದವನ್ನು ಮನ್ನಿಸಿರುವ ವಿಭಾಗೀಯ ನ್ಯಾಯಪೀಠ, 'ಬ್ಯಾಂಕ್ ಈ ಪ್ರಕರಣದಲ್ಲಿ ತನ್ನ ವಿವೇಚನೆಯನ್ನು ಬಳಸಿಲ್ಲ. ಏಕಪಕ್ಷೀಯವಾಗಿ ನಡೆದುಕೊಂಡಿದೆ. ಅರ್ಜಿದಾರರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳೂ ಇಲ್ಲ. ಹಾಗಾಗಿ, ವಜಾ ಆದೇಶ ಕಳಂಕಿತವಾಗಿದ್ದು ಇದನ್ನು ರದ್ದುಪಡಿಸಲಾಗುತ್ತಿದೆ' ಎಂದು ಆದೇಶದಲ್ಲಿ ತಿಳಿಸಿದೆ.



'ಅಮಿತ್ ಶಾ ಕಡಲೆಕಾಯಿ ತಿನ್ನುತ್ತಿದ್ದಾರಾ?'

ಬೆಂಗಳೂರು: 'ಬಾಂಗ್ಲಾ ದೇಶಿಯರು ಕರ್ನಾಟಕಕ್ಕೆ ಹೇಗೆ ಬರುತ್ತಾರೆ? ಕೇಂದ್ರ ಗೃಹ ಸಚಿವ ಅಮಿತ್ ಶಾ ಕಡಲೆಕಾಯಿ ತಿನ್ನುತ್ತಿದ್ದಾರಾ?' ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದೇಶದ ಗಡಿ ಕಾಯುವುದು ರಾಜ್ಯದ ಗೃಹ ಸಚಿವ ಪರಮೇಶ್ವರ ಅವರ ಕೆಲಸವೇ? ಬಿಜೆಪಿ ಅಧಿಕಾರ ಇರುವ ರಾಜ್ಯಗಳನ್ನು ದಾಟಿ ಬಾಂಗ್ಲಾ ದೇಶಿಯರು ಹೇಗೆ ಕರ್ನಾಟಕಕ್ಕೆ ಬರುತ್ತಾರೆ' ಎಂದೂ ಪ್ರಶ್ನಿಸಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮತ್ತೆ ಮರಳುವ ಕುರಿತು ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಅವರು ಪಂಚಾಯತ್ ಚುನಾವಣೆ ಮಾಡುತ್ತಾರಾ ಅಥವಾ ಪಾರ್ಲಿಮೆಂಟ್ ಚುನಾವಣೆ ಮಾಡುತ್ತಾರಾ ಎನ್ನುವುದು ಅವರ ಪಕ್ಷಕ್ಕೆ ಸಂಬಂಧಪಟ್ಟಿದ್ದು. ಅದಕ್ಕೂ ನಮಗೂ ಏನು ಸಂಬಂಧ' ಎಂದರು.

'ಜೆಡಿಎಸ್ ಈಗಾಗಲೇ ನಿರ್ನಾಮದ ಹಾದಿಯಲ್ಲಿದೆ. ಜೆಡಿಎಸ್ ಪಕ್ಷವನ್ನು ಬಿಜೆಪಿಗೆ ಭೋಗ್ಯಕ್ಕೆ ಕೊಟ್ಟು ಬಿಟ್ಟಿದ್ದಾರೆ. ಅವರ ಸಂಬಂಧಿಕರೇ ಹೋಗಿ ಬಿಜೆಪಿ ಟಿಕೆಟ್ ತೆಗೆದುಕೊಂಡು ಚುನಾವಣೆಗೆ ನಿಲ್ಲುತ್ತಾರೆಂದರೆ, ಪಕ್ಷ ಎಷ್ಟರ ಮಟ್ಟಿಗೆ ಬೆಳೆಯುತ್ತಿದೆ ಎಂದು ಯೋಚನೆ ಮಾಡಿ' ಎಂದರು.

ಗಾಂಧಿ ಆತ್ಮಕಥೆ–2ರ ಪತ್ತೆ ಕೋರಿಕೆ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೋಹನದಾಸ್ ಕರಮಚಂದ ಗಾಂಧಿ ಅವರ ಆತ್ಮಕಥೆಯ ಸಂಪುಟ–2ರ ಬಗೆಗಿನ ದಸ್ತಾವೇಜುಗಳು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಬಳಿ 51 ಪೆಟ್ಟಿಗೆಗಳಲ್ಲಿ ಭದ್ರವಾಗಿದ್ದು, ಅವುಗಳನ್ನು ಪತ್ತೆಹಚ್ಚಲು ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಪುನರಾವಲೋಕನ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ, 'ಜಾಗೃತ ಕರ್ನಾಟಕ–ಜಾಗೃತ ಭಾರತ' ಸಂಘಟನೆ ಅಧ್ಯಕ್ಷ ಕೆ.ಎನ್.ಮಂಜುನಾಥ್ ಸಲ್ಲಿಸಿದ್ದ ಪುನರಾವಲೋಕನ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಈ ಅರ್ಜಿಯಲ್ಲಿ ಯಾವುದೇ ಹುರಳಿಲ್ಲ' ಎಂಬ ಅಭಿಪ್ರಾಯದೊಂದಿಗೆ ವಜಾಗೊಳಿಸಿ ಆದೇಶಿಸಿದೆ.

ಸ್ವತಃ ವಾದ ಮಂಡಿಸಿದ ಅರ್ಜಿದಾರ ಕೆ.ಎನ್.ಮಂಜುನಾಥ್ ಮತ್ತು ಪ್ರತಿವಾದಿ ಕೇಂದ್ರ ಸರ್ಕಾರದ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಅವರ ಪ್ರತಿವಾದ ಆಲಿಸಿದ ನ್ಯಾಯಪೀಠ, 'ಒಂದೊಮ್ಮೆ ಅರ್ಜಿದಾರರು ಇತಿಹಾಸದಲ್ಲಿ ಸಂಶೋಧನೆ ಮಾಡುವ ಯಾವುದೇ ಪಾಂಡಿತ್ಯಪೂರ್ಣ ಕೈಂಕರ್ಯಕ್ಕೆ ಮುಂದಾದರೆ ಅದಕ್ಕೆ ಯಾವುದೇ ಅಡಚಣೆ ಇರುವುದಿಲ್ಲ. ಆದಾಗ್ಯೂ, ಅರ್ಜಿದಾರರ ಮನವಿ ಅಸ್ಪಷ್ಟವಾಗಿದ್ದು ಅದಕ್ಕೀಗ ಯಾವುದೇ ಪರಿಹಾರ ನೀಡಲಾಗದು' ಎಂದು ತಿಳಿಸಿದೆ.

'ಅರ್ಜಿದಾರರು ಭಾರತದ ಇತಿಹಾಸದ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ತಮ್ಮ ಕೋರಿಕೆಯ ನಿಟ್ಟಿನಲ್ಲಿ ವಿವಿಧ ಅಧಿಕಾರಿಗಳಿಗೆ ಹಲವಾರು ಪತ್ರಗಳನ್ನೂ ಬರೆದಿರುವುದು ವೇದ್ಯವಾಗಿದೆ. ಅರ್ಜಿದಾರರ ಪ್ರಕಾರ ಇತಿಹಾಸದಲ್ಲಿನ ಅಂತರಗಳ ಬಗ್ಗೆ ಉತ್ತರಿಸಬೇಕಾಗಿದೆ ಎಂಬ ಮನವಿಯನ್ನು ಪರಿಗಣಿಸಿದಾಗ; ಈ ಕುರಿತಂತೆ ಯಾವುದೇ ಸ್ಪಷ್ಟ ಆದೇಶ ಹೊರಡಿಸಲು ಆಗದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಜಾಗೊಳಿಸಿದೆ.

ಏನಿದು ಅರ್ಜಿ?: 'ಗಾಂಧೀಜಿಯವರ ಆತ್ಮಕಥೆಯ 'ನನ್ನ ಸತ್ಯಾನ್ವೇಷಣೆ' (ಮೈ ಎಕ್ಸ್‌ಪೆರಿಮೆಂಟ್ಸ್ ವಿಥ್ ಟ್ರೂಥ್) ಸಂಪುಟ-2ರ ಮೇಲೆ ಬೆಳಕು ಚೆಲ್ಲಲು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸ್ಪೀಕರ್ ಓಂ ಬಿರ್ಲಾ, ರಾಜ್ಯ ಶಿಕ್ಷಣ ಇಲಾಖೆ ಮತ್ತು ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಶನ್‌ಗೆ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಈ ಮೊದಲು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಮನವಿಯನ್ನು ಕಳೆದ ವರ್ಷ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿತ್ತು. ಅರ್ಜಿದಾರರು ಪುನಃ ಆದೇಶ ಪುನರಾವಲೋಕನ ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

'ಗಾಂಧೀಜಿಯವರ ಸದ್ಯದ ಆತ್ಮಚರಿತ್ರೆ 1925ರಲ್ಲಿ ಪ್ರಕಟವಾಗಿದ್ದು ಅದರಲ್ಲಿ ಕೇವಲ ಅವರ ಬಾಲ್ಯ, ಯೌವ್ವನ ಮತ್ತು ಆಫ್ರಿಕಾ ಜೀವನದ ಭಾಗ ಮಾತ್ರ ಇದೆ. ತದನಂತರ ಅವರು ಬರೆದಿರುವ ಸಂಪುಟ–2ರ ಭಾಗವನ್ನು ಸಂಗ್ರಹಾಲಯದಿಂದ ತೆರವುಗೊಳಿಸಲಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಮಮತಾ, ಪಶ್ಚಿಮ ಬಂಗಾಳ ಸರ್ಕಾರಕ್ಕೆ 'ಸುಪ್ರೀಂ' ನೋಟಿಸ್

ಒಂದನೇ ಪುಟದಿಂದ...

'ಯಾವುದೇ ರಾಜಕೀಯ ಪಕ್ಷದ ಚುನಾವಣಾ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಕೇಂದ್ರದ ತನಿಖಾ ಸಂಸ್ಥೆಗೆ ಇಲ್ಲ' ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಇದೇ ಸಂದರ್ಭದಲ್ಲಿ, 'ಯಾವುದೇ ಗಂಭೀರ ಅಪರಾಧ ಪ್ರಕರಣದ ತನಿಖೆಯನ್ನು ಕೇಂದ್ರೀಯ ತನಿಖಾ ಸಂಸ್ಥೆಗಳು ಪ್ರಾಮಾಣಿಕವಾಗಿ ನಡೆಸುತ್ತಿದ್ದರೆ, ಪಕ್ಷಗಳ ಗುರಾಣಿಯ ಅಡಿಯಲ್ಲಿ ಅವುಗಳ ಕಾರ್ಯನಿರ್ವಹಣೆಗೆ ಅಡ್ಡಿಪಡಿಸಬಹುದೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ' ಎಂದು ಹೇಳಿದೆ.

ಮಾನ್ಯತೆಗೆ ನಕಾರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ'ಯಲ್ಲಿ (ಎಸ್‌ಐಆರ್) ಮಾನ್ಯತೆ ಪಡೆದ ದಾಖಲೆಯಾಗಿ 10ನೇ ತರಗತಿಯ ಪ್ರವೇಶ ಪತ್ರವನ್ನು ಪರಿಗಣಿಸುವ ಪ್ರಸ್ತಾವವನ್ನು ಪಶ್ಚಿಮ ಬಂಗಾಳ ಮುಖ್ಯ ಚುನಾವಣಾ ಆಯುಕ್ತರು ತಿರಸ್ಕರಿಸಿದ್ದಾರೆ.

'ಮುಖ್ಯಮಂತ್ರಿಯಾಗಿ ಹೋಗಿಲ್ಲ, ಟಿಎಂಸಿ ಅಧ್ಯಕ್ಷೆಯಾಗಿ ಹೋಗಿದ್ದೆ'

ಒಂದನೇ ಪುಟದಿಂದ...

'ಚುನಾವಣೆ ಹತ್ತಿರದಲ್ಲಿರುವ ಸಂದರ್ಭದಲ್ಲಿಯೇ ಅಧಿಕಾರಿಗಳು ಅಲ್ಲಿಗೆ ಹೋಗುವ ಅಗತ್ಯವಾದರೂ ಏನಿತ್ತು? ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ, 2024ರ ಫೆಬ್ರುವರಿ 24ರಂದು ಕೊನೆಯದಾಗಿ ಹೇಳಿಕೆ ದಾಖಲಿಸಿಕೊಳ್ಳಲಾಗಿತ್ತು. ಅಂದಿನಿಂದ ಅವರು ಏನು ಮಾಡುತ್ತಿದ್ದರು? ಚುನಾವಣೆ ಹತ್ತಿರವಾದ ಸಂದರ್ಭದಲ್ಲೇ ಇಷ್ಟೊಂದು ಉತ್ಸಾಹ ಏಕೆ? ಹೀಗಾದರೆ, ನಾವು ಚುನಾವಣೆ ಎದುರಿಸುವುದು ಹೇಗೆ?' ಎಂದು ನ್ಯಾಯಪೀಠದ ಗಮನ ಸೆಳೆದರು.

'ಟಿಎಂಸಿಯ ಅಧ್ಯಕ್ಷೆಯಾಗಿ ಅವರು (ಮಮತಾ) ಅಲ್ಲಿಗೆ ಹೋಗುವುದು ಹಕ್ಕು' ಎಂದು ಸಿಬಲ್ ಪ್ರತಿಪಾದಿಸಿದರು.

ಅಡ್ಡಿಪಡಿಸಿದ್ದು ಸುಳ್ಳು: 'ದಾಳಿ ವೇಳೆ ಮಮತಾ ಅವರು ಹಸ್ತಕ್ಷೇಪ ನಡೆಸಿ, ಅಡ್ಡಿಪಡಿಸಿದ್ದರು ಎಂಬ ಇ.ಡಿ ಆರೋಪವನ್ನು ಸಾರಾಸಗಟಾಗಿ ತಳ್ಳಿಹಾಕಿದ ಸಿಬಲ್, ಮುಖ್ಯಮಂತ್ರಿ ಅವರು ಕಚೇರಿಗೆ ಭೇಟಿ ನೀಡಿ ಎಲ್ಲ ಉಪಕರಣಗಳನ್ನು ಹೊತ್ತೊಯ್ದಿದ್ದಾರೆ ಎಂಬುದು ಸುಳ್ಳು. ಇ.ಡಿ ಅಧಿಕಾರಿಗಳು ಸಲ್ಲಿಸಿದ ಪಂಚನಾಮದಿಂದ ಎಲ್ಲವೂ ದೃಢೀಕೃತಗೊಂಡಿದೆ. ಇದು ಪೂರ್ವಗ್ರಹದಿಂದ ಸೃಷ್ಟಿಸಲಾಗಿರುವ ಸಂಗತಿ' ಎಂದು ಈ ವೇಳೆ ನ್ಯಾಯಪೀಠದ ಗಮನಸೆಳೆದರು. ಸರ್ಕಾರದ ಪರ ಹಾಜರಾದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ಮುಖ್ಯಮಂತ್ರಿಗಳು 'ಝಡ್‌ಪ್ಲಸ್' ಭದ್ರತೆ ಹೊಂದಿದ್ದು, ಐ-ಪ್ಯಾಕ್ ಕಚೇರಿ ಪ್ರವೇಶಿಸುವ ವೇಳೆ ಡಿಜಿಪಿ ರಾಜೀವ್ ಕುಮಾರ್ ಜೊತೆಗಿರುವುದು ಕರ್ತವ್ಯದ ಭಾಗವಾಗಿದೆ' ಎಂದು ತಿಳಿಸಿದರು.

ಗದ್ದಲ: ಅಸಮಾಧಾನ

ಒಂದನೇ ಪುಟದಿಂದ...

ನಂತರ ನ್ಯಾಯಪೀಠವು ಮೌಖಿಕವಾಗಿ, 'ಎಲ್ಲರೂ ಬನ್ನಿ ಎಂದು ಕರೆಯಲು ಅದು ಜಂತರ್– ಮಂತರ್ ಹೌದೇ' ಎಂದು ಪ್ರಶ್ನಿಸಿತು.

ಇದಕ್ಕೆ ಉತ್ತರಿಸಿದ ಮೆಹ್ತಾ, 'ಹೈಕೋರ್ಟ್ ಅನ್ನು ಜಂತರ್–ಮಂತರ್ ಅಗಿ ಬದಲಾಯಿಸಲಾಗಿತ್ತು. ಬಸ್ ಹಾಗೂ ವಾಹನಗಳ ವ್ಯವಸ್ಥೆ ಮಾಡಲಾಗಿತ್ತು' ಎಂದರು.

'ಹೈಕೋರ್ಟ್‌ನಲ್ಲಿ ನಡೆದ ಘಟನೆಗಳು ತೀವ್ರ ತೊಂದರೆ ಉಂಟುಮಾಡಿದೆ' ಎಂದು ನ್ಯಾಯಪೀಠವು ಅಸಮಾಧಾನ ವ್ಯಕ್ತಪಡಿಸಿತು. ಇದಕ್ಕೆ ಉತ್ತರಿಸಿದ ಮಮತಾ ಪರ ಹಾಜರಾದ ಕಪಿಲ್ ಸಿಬಲ್, 'ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಲಾಗುವುದು' ಎಂದು ಭರವಸೆ ನೀಡಿದರು.

'ದೆಹಲಿಯಲ್ಲಿ ನಾಯಕರ ಭೇಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಶುಕ್ರವಾರ (ಜ.16) ದೆಹಲಿಗೆ ಹೋಗುತ್ತಿದ್ದು, ಪಕ್ಷದ ಎಲ್ಲ ನಾಯಕರನ್ನು ಅಲ್ಲಿ ಭೇಟಿ ಮಾಡುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ಶಿವಕುಮಾರ್

'ರಾಹುಲ್ ಗಾಂಧಿ ಅವರ ಭೇಟಿಗೆ ಸಮಯ ಕೇಳಿದ್ದೀರಾ' ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು ಗುರುವಾರ ಹೀಗೆ ಪ್ರತಿಕ್ರಿಯಿಸಿದರು.

'ರಾಹುಲ್ ಗಾಂಧಿಯನ್ನು ನಾನು ಭೇಟಿ ಮಾಡುವುದು ಹೊಸತೇನೂ ಅಲ್ಲ. ನಮ್ಮ ಪಕ್ಷದ ಅಧ್ಯಕ್ಷರು, ನಾಯಕರನ್ನು ಭೇಟಿ ಮಾಡುವುದು, ಕರೆ ಮಾಡಿ ಅವರ ಜೊತೆ ಚರ್ಚಿಸುವುದು ಸಹಜ ಪ್ರಕ್ರಿಯೆ. ಅವುಗಳನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದಿಲ್ಲ' ಎಂದರು.

'ರಾಹುಲ್ ಗಾಂಧಿ ಅವರನ್ನು ನೀವು ಭೇಟಿ ನಂತರ ನಿಮ್ಮ ಬೆಂಬಲಿಗ ಶಾಸಕರು ಸಂತೋಷವಾಗಿದ್ದಾರೆ. ಅವರ ಅಪೇಕ್ಷೆಯನ್ನು ರಾಹುಲ್ ಬಳಿ ಹೇಳಿಕೊಳ್ಳುತ್ತೀರಾ' ಎಂದು ಕೇಳಿದಾಗ, 'ಅವರು ನಮ್ಮ ಪಕ್ಷದ ನಾಯಕರು. ನಿಮ್ಮ (ಮಾಧ್ಯಮಗಳ) ಬಯಕೆಯನ್ನು ಅವರ ಮುಂದೆ ಪ್ರಸ್ತಾಪಿಸುತ್ತೇನೆ' ಎಂದರು.

ಬೇರೆ ರೀತಿ ವ್ಯಾಖ್ಯಾನಕ್ಕೆ ಅರ್ಥವಿಲ್ಲ: 'ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ' ಎಂದು ನಾನು ಬುಧವಾರ ಮಾಡಿದ್ದ 'ಎಕ್ಸ್'ಅನ್ನು ಕೆಲವು ಮಾಧ್ಯಮಗಳು ವಿವಿಧ ರೀತಿ ವ್ಯಾಖ್ಯಾನಿಸಿವೆ. ಕಾವೇರಿ ಆರತಿಯ ಪ್ರಾರ್ಥನೆಗೆ ನ್ಯಾಯಾಲಯ ನಮ್ಮ ಪರ ತೀರ್ಪು ನೀಡಿದೆ. ಮೇಕೆದಾಟು ಯೋಜನೆಯ ತಾಂತ್ರಿಕ ಅಂಶವನ್ನು ಕೇಂದ್ರ ಜಲ ಆಯೋಗವೇ ತೀರ್ಮಾನ ಮಾಡಬೇಕೆಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಈ ಹಿನ್ನೆಲೆಯಲ್ಲಿ ನಾನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದೇನೆ. ಅದನ್ನು ಬೇರೆ ರೀತಿ ವ್ಯಾಖ್ಯಾನಿಸುವುದರಲ್ಲಿ ಅರ್ಥವಿಲ್ಲ' ಎಂದರು.

'ದಲಿತ ಸಿ.ಎಂ ಆಗದಿರುವುದಕ್ಕೆ ನೋವಿದೆ'

ಬೆಂಗಳೂರು: 'ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಆಗದಿರುವುದಕ್ಕೆ ನೋವಿದೆ. ಹೈಕಮಾಂಡ್ ಮನಸ್ಸು ಮಾಡಿದರೆ ಎಲ್ಲವೂ ಆಗುತ್ತದೆ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಮಲ್ಲಿಕಾರ್ಜುನ ಖರ್ಗೆ ಕಾಲದಲ್ಲೇ ದಲಿತ ಮುಖ್ಯಮಂತ್ರಿ ಆಗಬೇಕು ಎಂದು ಇತ್ತು. ಯಾವಾಗ, ಏನು ಆಗಬೇಕು ಎನ್ನುವುದು ಹೈಕಮಾಂಡ್‌ಗೆ ಗೊತ್ತಿದೆ. ಮುಖ್ಯಮಂತ್ರಿ ಮಾಡುವ ಸ್ಥಾನದಲ್ಲಿ ಖರ್ಗೆ ಇದ್ದಾರೆ. ನಾವು ಇನ್ನೇನು ಮಾತನಾಡುವುದು' ಎಂದರು.

'ಶೇ 25ರಷ್ಟು ಇರುವ ಸಮುದಾಯ ಶೇ 75ರಷ್ಟು ಮತಗಳನ್ನು ಕಾಂಗ್ರೆಸ್‌ಗೆ ಹಾಕುತ್ತಿದೆ. ಇದೆಲ್ಲವನ್ನೂ ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. 2028ಕ್ಕೆ ಮತ್ತೆ ಅಧಿಕಾರಕ್ಕೆ ಬರುವುದು ನಮ್ಮ ಗುರಿ' ಎಂದರು.

ಯಾರ ಪರನೂ ಇಲ್ಲ: ರಾಹುಲ್ ಗಾಂಧಿಯನ್ನು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಭೇಟಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರಾಹುಲ್ ಗಾಂಧಿ ಇಬ್ಬರ ಜೊತೆಗೂ ಮಾತನಾಡಿದ್ದಾರೆ. ಇದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ನಾನು ಯಾರ ಪರವೂ ಅಲ್ಲ' ಎಂದರು.

'ಕರ್ನಾಟಕ ರಾಜ್ಯ ವಕೀಲರ ಪರಿಷತ್' ನಿರ್ಧಾರ

ಸನ್ನದು ಅಮಾನತು ನಿರ್ಣಯ ವಾಪಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೀಲ್ಸ್ ಮೂಲಕ ಸಾರ್ವಜನಿಕರಿಗೆ ಕಾನೂನು ಸಲಹೆ ನೀಡುವ ನೆಪದಲ್ಲಿ ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಮತ್ತು ವೃತ್ತಿ ಘನತೆಗೆ ಅಪಚಾರ ಎಸಗಿದ್ದಾರೆ' ಎಂಬ ಆರೋಪದಡಿ ಒಬ್ಬ ಮಹಿಳೆ ಸೇರಿದಂತೆ ಐವರು ವಕೀಲರ ಸನ್ನದು ಅಮಾನತುಗೊಳಿಸಿದ್ದ ಆದೇಶವನ್ನು 'ಕರ್ನಾಟಕ ರಾಜ್ಯ ವಕೀಲರ ಪರಿಷತ್' (ಕೆಎಸ್‌ಬಿಸಿ) ಹಿಂಪಡೆದಿದೆ.

'ಈ ಕುರಿತಂತೆ ಕೆಎಸ್‌ಬಿಸಿ ನಡೆಸಿದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ' ಎಂದು ಪರಿಷತ್ ಅಧ್ಯಕ್ಷ ವಿ.ಡಿ.ಕಾಮರಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಂತೆಯೇ, 'ಪರಿಷತ್ ವಿರುದ್ಧ ಮತ್ತು ರೀಲ್ಸ್ ವಿಚಾರದ ಕುರಿತಂತೆ ಯಾವುದೇ ವಕೀಲರು ಪರ-ವಿರೋಧದ ಆರೋಪ ಮಾಡಲು ಸಾಮಾಜಿಕ ಮಾಧ್ಯಮಗಳನ್ನು ಬಳಕೆ ಮಾಡಕೂಡದು. ಈ ಆದೇಶ ಉಲ್ಲಂಘಿಸುವವರ ವಿರುದ್ಧ ಸೂಕ್ತ ಮತ್ತು ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮಾಡಿದ ಆರೋಪದಡಿ ಬೆಂಗಳೂರಿನ ವಿನಯ್ ಕುಮಾರ್, ಜಿ.ಮಂಜುನಾಥ್ ಮತ್ತು ರೇಣುಕಾ ದೇವಿ ಅಲಿಯಾಸ್ ರೇಣುಕಾ ಹಿರೇಮಠ, ಮೈಸೂರಿನ ವಿ.ರವಿಕುಮಾರ್ ಮತ್ತು ಹುಣಸೂರಿನ ಎನ್.ಪುಟ್ಟೇಗೌಡ ಅವರ ಸನ್ನದು ಅಮಾನತುಗೊಳಿಸಿ ಪರಿಷತ್ ಇತ್ತೀಚೆಗೆ ನಿರ್ಣಯ ಕೈಗೊಂಡಿತ್ತು. ಈ ನಿರ್ಣಯವನ್ನು ವಿರೋಧಿಸಿ ಮೈಸೂರಿನ ಯುವ ವಕೀಲ ಮತ್ತು 'ಕಬಿನಿ ಉಳಿಸಿ' ಹೋರಾಟಗಾರ ವಿ.ರವಿಕುಮಾರ್ ಅವರು ರಾಜ್ಯ ವಕೀಲರ ಪರಿಷತ್ ಸದಸ್ಯರೂ ಆದ ಪದಾಂಕಿತ ಹಿರಿಯ ವಕೀಲರೊಬ್ಬರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ವಾಗ್ದಾಳಿ ನಡೆಸಿ ವಿರೋಧ ವ್ಯಕ್ತಪಡಿಸಿದ್ದರು.

ಸಹೋದರಿ ವಿರುದ್ಧ ಕಾರುಣ್ಯ ದೂರು

ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಹಾಕಿದವರ ಹೆಸರು ದೂರಿನಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿದ್ದ ಚಿನ್ನವನ್ನು ಕೊಂಡೊಯ್ದು ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ಸಹೋದರಿ ಸಮೃದ್ಧಿ ರಾಮ್ ಅವರ ವಿರುದ್ಧ ನಟಿ, ‘ಬಿಗ್‌ಬಾಸ್’ ರಿಯಾಲಿಟಿ ಶೋ ಮಾಜಿ ಸ್ಪರ್ಧಿ ಕಾರುಣ್ಯ ರಾಮ್ ಅವರು ಸಿಸಿಬಿ ಪೊಲೀಸರಿಗೆ ದೂರು ನೀಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನಿಂದನೆ ಮಾಡಿದ್ದವರ ವಿರುದ್ದವೂ ನಟಿ ದೂರು ದಾಖಲಿಸಿದ್ದಾರೆ.

‘ಸಹೋದರಿ ಸಮೃದ್ಧಿ ರಾಮ್ ಹಾಗೂ ಪ್ರತಿಭಾ, ಕಪಿಲ್, ಪ್ರಜ್ವಲ್, ರಕ್ಷಿತ್, ಸಾಗರ್ ಎಂಬುವವರ ವಿರುದ್ಧ ದೂರು ನೀಡಿದ್ದಾರೆ. ತಮ್ಮ ಸಹೋದರಿಗೆ ಸಾಲ ನೀಡಿದವರ ಪೈಕಿ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲವಾಗಿ ಸಂದೇಶ ಕಳುಹಿಸಿದ್ದರು ಎಂಬುದಾಗಿ ಕಾರುಣ್ಯ ತಿಳಿಸಿದ್ದಾರೆ. ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ತಂದೆ-ತಾಯಿ, ಸಹೋದರಿ ಜತೆಗೆ ಕಾರುಣ್ಯ ಅವರು ಆರ್‌.ಆರ್‌.ನಗರದಲ್ಲಿ ವಾಸವಿದ್ದರು. ಸಹೋದರಿ ಸಮೃದ್ಧಿ ರಾಮ್ ವಿರುದ್ಧ 2023ರಲ್ಲಿ ಆರ್‌.ಆರ್‌.ನಗರ ಪೊಲೀಸ್ ಠಾಣೆಯಲ್ಲಿ ನಟಿ ದೂರು ದಾಖಲಿಸಿದ್ದರು. ಆಗ ಎನ್‌ಸಿಆರ್ ದಾಖಲಾಗಿತ್ತು. ಮನೆಯಲ್ಲಿದ್ದ ಸುಮಾರು ₹25 ಲಕ್ಷ ಮೌಲ್ಯದ ಚಿನ್ನ ಹಾಗೂ ಹಣವನ್ನು ಯಾರಿಗೂ ತಿಳಿಸದೇ ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂಬುದಾಗಿ ಮತ್ತೆ ದೂರು ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಸಮೃದ್ಧಿ ಅವರು ಬೊಟಿಕ್ ವ್ಯವಹಾರದಲ್ಲಿ ನಷ್ಟ ಅನುಭವಿಸಿದ್ದರು. ಅಲ್ಲದೇ ಬೆಟ್ಟಿಂಗ್‌ನಲ್ಲೂ ₹25 ಲಕ್ಷ ಕಳೆದುಕೊಂಡಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಕುಟುಂಬದಿಂದ ಸಮೃದ್ಧಿ ಪ್ರತ್ಯೇಕವಾಗಿದ್ದರು. ಸಮೃದ್ಧಿಗೆ ಸಾಲ ನೀಡಿದವರು ನನ್ನ ಬಳಿ ಕೇಳುತ್ತಿದ್ದಾರೆ. ಮನೆಯ ಬಳಿಗೂ ಬಂದು ಗಲಾಟೆ ಮಾಡುತ್ತಿದ್ದಾರೆ. ಅಲ್ಲದೇ ಸಾಮಾಜಿಕ ಜಾಲತಾಣದಲ್ಲೂ ಅಶ್ಲೀಲವಾಗಿ ನಿಂದನೆ ಮಾಡುತ್ತಿದ್ದಾರೆ’ ಎಂದು ನಟಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಕಾರುಣ್ಯ ರಾಮ್ ಹಾಗೂ ಸಮೃದ್ಧಿ ರಾಮ್

‘ವಾಟ್ಸ್‌ಆ್ಯಪ್‌ನಲ್ಲಿ ಅಶ್ಲೀಲವಾಗಿ ಸಂದೇಶ ಕಳುಹಿಸಿದ್ದರು. ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವ ಫೋಟೊಗಳಿಗೂ ಕೆಟ್ಟದಾಗಿ ಪ್ರತಿಕ್ರಿಯೆ ಹಾಕಿದ್ದಾರೆ. ಎಲ್ಲ ವಿವರಗಳನ್ನೂ ಕಾರುಣ್ಯ ನೀಡಿದ್ದಾರೆ. ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕಾರುಣ್ಯ ರಾಮ್ ಅವರು ವಜ್ರಕಾಯ, ಕಿರಗೂರಿನ ಗಯ್ಯಾಳಿಗಳು, ಪೆಟ್ರೊಮ್ಯಾಕ್ಸ್ ಸೇರಿದಂತೆ ಹಲವು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದರು. ಸಮೃದ್ಧಿ ಅವರು ಧಾರಾವಾಹಿಗಳಲ್ಲಿ ನಟಿಸಿದ್ದರು. ಬಳಿಕ ಬೊಟಿಕ್ ಉದ್ಯಮ ಆರಂಭಿಸಿದ್ದರು.

‘ಬೆಟ್ಟಿಂಗ್ ಆ್ಯಪ್‌ನಿಂದ ತಂಗಿ ದೂರವಾಗಿದ್ದಾಳೆ’

‘ಬೆಟ್ಟಿಂಗ್ ಆ್ಯಪ್ ಯಾರೂ ಬಳಸಬೇಡಿ. ಬಳಸುವಂತೆಯೂ ಪ್ರೋತ್ಸಾಹಿಸಬೇಡಿ. ಈ ಆ್ಯಪ್‌ಗಳಿಂದ ಎಷ್ಟೋ ಕುಟುಂಬಗಳು ಬೀದಿಗೆ ಬಂದಿವೆ. ನಮ್ಮ ಕುಟುಂಬವು ಮಾನಸಿಕವಾಗಿ ಕುಗ್ಗಿದೆ. ಜನರ ಮುಗ್ಧತೆಯನ್ನು ಬಳಸಿಕೊಂಡು ಕುಟುಂಬಗಳನ್ನೇ ನಾಶಪಡಿಸಲಾಗುತ್ತಿದೆ. ನನ್ನ ಸಹೋದರಿ ಮೂರು ವರ್ಷದಿಂದ ಬೇರೆಯಾಗಿ ನೆಲಸಿದ್ದಾಳೆ. ಮಾನಸಿಕವಾಗಿ ಕುಗ್ಗಿಸುವ ಕೆಲಸ ಮಾಡಿದ್ದರಿಂದ ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದೇನೆ. ರಾಜ್ಯ ಸರ್ಕಾರವು ಬೆಟ್ಟಿಂಗ್ ಆ್ಯಪ್ ನಿಷೇಧಿಸಬೇಕು’ ಎಂದು ಕಾರುಣ್ಯ ರಾಮ್ ಅವರು ಪ್ರತಿಕ್ರಿಯಿಸಿದ್ದಾರೆ.

₹2.18 ಕೋಟಿ ಮೌಲ್ಯದ ಹೈಡ್ರೊ ಗಾಂಜಾ ಜಪ್ತಿ

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ಕಾರ್ಯಾಚರಣೆ ನಡೆಸಿದ ಕಸ್ಟಮ್ಸ್ ಅಧಿಕಾರಿಗಳು, ವಿಮಾನದ ಮೂಲಕ ವಿದೇಶದಿಂದ ತರುತ್ತಿದ್ದ ₹2.18 ಕೋಟಿ ಮೌಲ್ಯದ ಹೈಡ್ರೊಗಾಂಜಾವನ್ನು ಜಪ್ತಿ ಮಾಡಿದ್ದಾರೆ.

ಬ್ಯಾಂಕಾಕ್‌ನ ಇಬ್ಬರನ್ನು ಬಂಧಿಸಲಾಗಿದೆ. ಖಚಿತ ಮಾಹಿತಿ ಆಧರಿಸಿ ಟರ್ಮಿನಲ್-2ರಲ್ಲಿ ಕಾರ್ಯಾಚರಣೆ ನಡೆಸಿ, 6.24 ಕೆ.ಜಿ ಹೈಡ್ರೊಗಾಂಜಾ ಜಪ್ತಿ ಮಾಡಲಾಗಿದೆ.

ಆರೋಪಿಗಳ ವಿರುದ್ಧ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆಯಡಿ (ಎನ್‌ಡಿಪಿಎಸ್) ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಕಳೆದ ವಾರ ಕಾರ್ಯಾಚರಣೆ ನಡೆದಿದ್ದ ಸ್ಥಳದಲ್ಲೇ ಅವಘಡ

ಬೆಂಕಿ: ಗೋದಾಮು, ಶೆಡ್‌ಗಳಿಗೆ ಹಾನಿ

ಬೆಂಗಳೂರು: ಹೊರವಲಯದ ಬೇಗೂರಿನ ಅಕ್ಷಯ್‌ನಗರದಲ್ಲಿ ಗುಜರಿ ಸಂಗ್ರಹಿಸಿಡುವ ಗೋದಾಮಿನಲ್ಲಿ ಗುರುವಾರ ನಸುಕಿನ ವೇಳೆ ಬೆಂಕಿ ಅವಘಡ ಸಂಭವಿಸಿದೆ. ಗೋದಾಮಿನಲ್ಲಿದ್ದ ವಸ್ತುಗಳು ಹಾಗೂ ಪಕ್ಕದಲ್ಲಿದ್ದ ಐದು ಶೆಡ್‌ಗಳು ಸುಟ್ಟು ಹೋಗಿವೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಶೆಡ್‌ನಲ್ಲಿ ಇದ್ದವರು ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಓಡಿ ಹೋಗಿ ಅಪಾಯದಿಂದ ಪಾರಾಗಿದ್ದಾರೆ. ತಕ್ಷಣವೇ ಅಗ್ನಿಶಾಮಕ ದಳದ ನಾಲ್ಕು ವಾಹನಗಳು ಹಾಗೂ 20ಕ್ಕೂ ಹೆಚ್ಚು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಿದರು ಎಂದು ಮೂಲಗಳು ಹೇಳಿವೆ.

ಗೋದಾಮಿನಲ್ಲಿ ಸಂಗ್ರಹಿಸಿದ್ದ ಹಳೆಯ ಪ್ಲಾಸ್ಟಿಕ್ ವಸ್ತುಗಳು ಧಗಧಗನೆ ಹೊತ್ತಿ ಉರಿದಿದ್ದು, ಇಡೀ ಪ್ರದೇಶದಲ್ಲಿ ಆತಂಕದ ವಾತಾವರಣ ನಿರ್ಮಾಣ ಆಗಿತ್ತು. ಅಗ್ನಿ ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ. ಸ್ಥಳಕ್ಕೆ ಬೇಗೂರು ಠಾಣೆ ಪೊಲೀಸರು ತೆರಳಿ ಪರಿಶೀಲಿಸಿದರು.

ಶೆಡ್‌ಗಳಲ್ಲಿ ಬಾಂಗ್ಲಾದೇಶದ ಅಕ್ರಮ ವಲಸಿಗರು ನೆಲಸಿದ್ದಾರೆ ಎನ್ನುವ ಶಂಕೆಯ ಮೇಲೆ ಕಳೆದ ವಾರ ಕಾರ್ಯಾಚರಣೆ ನಡೆಸಲಾಗಿತ್ತು. ಕಾರ್ಯಾಚರಣೆ ವೇಳೆ ಶೆಡ್‌ನಲ್ಲಿ ನೆಲಸಿದ್ದವರು ಪರಾರಿ ಆಗಿದ್ದರು. ಎರಡು ದಿನಗಳ ಹಿಂದೆ ಕೆಲವರು ಮತ್ತೆ ಅದೇ ಶೆಡ್‌ಗೆ ಬಂದು ನೆಲಸಿದ್ದರು. ಗುರುವಾರ ನಸುಕಿನ ವೇಳೆ ಒಂದು ಶೆಡ್‌ನಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಕಾಣಿಸಿಕೊಂಡು ಅದು ವ್ಯಾಪಿಸಿತ್ತು ಎಂದು ಹೇಳಲಾಗಿದೆ. ಗೋದಾಮಿನಲ್ಲಿಯೇ ಮೊದಲಿಗೆ ಬೆಂಕಿ ಕಾಣಿಸಿಕೊಂಡು ಶೆಡ್‌ಗಳಿಗೂ ವ್ಯಾಪಿಸಿತು ಎಂದು ಇನ್ನೂ ಕೆಲವರು ಮಾಹಿತಿ ನೀಡಿದ್ದಾರೆ. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



ಹೊತ್ತಿ ಉರಿದ ಗೋದಾಮು ಹಾಗೂ ಶೆಡ್

ಪ್ರತ್ಯೇಕ ಅಪಘಾತ: ಚಿನ್ನಾಭರಣ ಅಂಗಡಿ ಮಾಲೀಕ, ಬಾಲಕಿ ಸಾವು

ಬೆಂಗಳೂರು: ಹಲಸೂರು ಗೇಟ್ ಹಾಗೂ ವಿಜಯನಗರ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಗುರುವಾರ ಬೆಳಿಗ್ಗೆ ಹಾಗೂ ಬುಧವಾರ ಸಂಜೆ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನೃಪತುಂಗ ರಸ್ತೆಯಲ್ಲಿ ಖಾಸಗಿ ಬಸ್ ಹಾಗೂ ಸ್ಕೂಟರ್ ನಡುವೆ ಗುರುವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಚಿನ್ನಾಭರಣ ಅಂಗಡಿ ಮಾಲೀಕ, ನಗರ್ತಪೇಟೆಯ ನಿವಾಸಿ ಪಾರಸ್ಮಲ್ ಪಿ. ಜೈನ್ (70) ಮೃತಪಟ್ಟಿದ್ದಾರೆ.

ಕೆಲಸದ ನಿಮಿತ್ತ ಪಾರಸ್ಮಲ್ ಅವರು ಗುರುವಾರ ಬೆಳಿಗ್ಗೆ 10 ಗಂಟೆಯ ಸುಮಾರಿಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ನೃಪತುಂಗ ರಸ್ತೆಯ ಬಸ್ ತಂಗುದಾಣದ ಬಳಿ ವೇಗವಾಗಿ ಬಂದ ಖಾಸಗಿ ಬಸ್, ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಸ್ಕೂಟರ್‌ನಿಂದ ಬಿದ್ದ ಪಾರಸ್ಮಲ್ ಪಿ. ಜೈನ್ ಅವರು ಗಂಭೀರ ಗಾಯಗೊಂಡಿದ್ದರು. ಸ್ಥಳದಲ್ಲಿ ಇದ್ದವರು ಅವರನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು. ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಾಲಕಿ ಸಾವು: ವಿಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಶಿವನಹಳ್ಳಿ ಡೌನ್ ರ‍್ಯಾಂಪ್ ಬಳಿ ದ್ವಿಚಕ್ರ ವಾಹನದಿಂದ ಬಿದ್ದು ಬಾಲಕಿ ಹಾರಿಕಾ (6) ಮೃತಪಟ್ಟಿದ್ದಾಳೆ. ಮೃತ ಬಾಲಕಿ ನಂದಿನಿ ಲೇಔಟ್ ನಿವಾಸಿ ಪರಮೇಶ್ವರ್ ಅವರ ಪುತ್ರಿ.

ಹಾರಿಕಾ ತಂದೆಯ ಜತೆಗೆ ಬುಧವಾರ ಸಂಜೆ ಬೈಕ್‌ನಲ್ಲಿ ತೆರಳುತ್ತಿದ್ದಳು. ಶಿವನಹಳ್ಳಿ ಡೌನ್ ರ‍್ಯಾಂಪ್ ಬಳಿ ಬ್ರೇಕ್ ಹಾಕಿದಾಗ ನಿಯಂತ್ರಣ ತಪ್ಪಿ ಬಾಲಕಿ ಕೆಳಕ್ಕೆ ಬಿದ್ದಿದ್ದಳು. ಬಿದ್ದ ರಭಸಕ್ಕೆ ಗಂಭೀರವಾಗಿ ಗಾಯಗೊಂಡಿದ್ದಳು. ಬಾಲಕಿಯನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆಗೆ ದಾಖಲಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾಳೆ ಎಂದು ಸಂಚಾರ ಪೊಲೀಸರು ಹೇಳಿದರು.

ರೌಡಿ ಕೊಲೆ: ಇಬ್ಬರು ವಶಕ್ಕೆ

ಅಪರಾಧ ಸುದ್ದಿ

ಬೆಂಗಳೂರು: ರೌಡಿ ಸೈಯದ್ ಶಬ್ಬೀರ್ (30) ಅವರನ್ನು ಕೊಲೆ ಮಾಡಿದ್ದ ಪ್ರಕರಣದಲ್ಲಿ ಇಬ್ಬರು ಶಂಕಿತರನ್ನು ಬಂಡೇಪಾಳ್ಯ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಬಂಡೇಪಾಳ್ಯದ ಮಂಗಮ್ಮನಪಾಳ್ಯದಲ್ಲಿ ಮಂಗಳವಾರ ರಾತ್ರಿ ಸೈಯದ್ ಅವರ ಮುಖದ ಮೇಲೆ ಖಾರದ ಪುಡಿ ಎರಚಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ, ಆರೋಪಿಗಳು ಪರಾರಿ ಆಗಿದ್ದರು. ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯ, ಮೊಬೈಲ್ ಕರೆಗಳ ವಿವರ ಆಧರಿಸಿ ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಶಬ್ಬೀರ್ ಸ್ನೇಹಿತರೊಂದಿಗೆ ಆಟೊದಲ್ಲಿ ಮಂಗಮ್ಮನಪಾಳ್ಯಕ್ಕೆ ತೆರಳುತ್ತಿದ್ದರು. ಆಗ ದುಷ್ಕರ್ಮಿಗಳ ತಂಡವು ಆಟೊ ಅಡ್ಡಗಟ್ಟಿ ಕೊಲೆ ಮಾಡಿತ್ತು. ಕೃತ್ಯ ಎಸಗಲು ಹಳೆ ದ್ವೇಷ ಕಾರಣ ಎಂದು ಕಂಡುಬಂದಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.



ಚಂದ್ರಾ ಲೇಔಟ್‌ನಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಬಿಡಿಎ ವತಿಯಿಂದ ತೆರವುಗೊಳಿಸಲಾಯಿತು.

₹82 ಕೋಟಿ ಮೌಲ್ಯದ ಸ್ವತ್ತು ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ಚಂದ್ರಾ ಲೇಔಟ್‌ನಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಿ, ₹82 ಕೋಟಿ ಮೌಲ್ಯದ ಆಸ್ತಿ ವಶಪಡಿಸಿಕೊಂಡಿದೆ.

ಉತ್ತರ ತಾಲ್ಲೂಕಿನ ಕಸಬಾ ಹೋಬಳಿಯ ಕೆಂಪಾಪುರ ಅಗ್ರಹಾರ ಗ್ರಾಮದ ಸರ್ವೆ ನಂಬರ್ 501/7, 501/9, 501/10 ಮತ್ತು 389/4ರಲ್ಲಿ (ಚಂದ್ರಾ ಲೇಔಟ್ ವ್ಯಾಪ್ತಿ) ಅಕ್ರಮವಾಗಿ ನಿರ್ಮಿಸಿದ್ದ ಶೆಡ್, ಗ್ಯಾರೇಜ್, ಗೋದಾಮುಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು. ಬಳಿಕ 33 ಗುಂಟೆ ಜಾಗವನ್ನು ಪ್ರಾಧಿಕಾರ ವಶಕ್ಕೆ ಪಡೆಯಿತು. ಬಿಡಿಎ ಕಾರ್ಯಪಡೆಯ ಎಸ್‌ಪಿ, ಎಂಜಿನಿಯರ್ ಅಧಿಕಾರಿ–1, ಪಶ್ಚಿಮ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನೇತೃತ್ವದಲ್ಲಿ ಪೊಲೀಸರ ಸಹಕಾರದಿಂದ ಕಾರ್ಯಾಚರಣೆ ನಡೆಯಿತು.

ನೀಟ್ ಪಿಜಿ ಮಾನದಂಡ ಸಡಿಲ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ಪಿಜಿ 2025ರ ಕಟ್–ಆಫ್ ಅಂಕಗಳನ್ನು ಇಳಿಸಿರುವ ರಾಷ್ಟ್ರೀಯ ಪರೀಕ್ಷಾ ಮಂಡಳಿ ಕ್ರಮವನ್ನು ಎಐಡಿಎಸ್‌ಒ ಖಂಡಿಸಿದೆ.

‘ಈ ಕ್ರಮ ಸ್ನಾತಕೋತ್ತರ ವೈದ್ಯಕೀಯ ಪ್ರವೇಶ ನಿರ್ವಹಿಸುವಲ್ಲಿ ಆಡಳಿತದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಅರ್ಹತಾ ಮಾನದಂಡ ಸಡಿಲಗೊಳಿಸಿರುವುದು ಶೈಕ್ಷಣಿಕ ಗುಣಮಟ್ಟವನ್ನು ದುರ್ಬಲವಾಗಿಸಲಿದೆ. ಭವಿಷ್ಯದಲ್ಲಿ ಆರೋಗ್ಯ ವ್ಯವಸ್ಥೆಯ ಗುಣಮಟ್ಟ ಕುಂದಿಸಲಿದೆ’ ಎಂದು ಸಂಘಟನೆ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

‘ಅಸಮರ್ಪಕವಾಗಿ ಸ್ನಾತಕೋತ್ತರ ಸೀಟುಗಳ ಹಂಚಿಕೆ, ಶೈಕ್ಷಣಿಕ ಮೂಲಸೌಕರ್ಯಗಳ ಕೊರತೆ, ಕೌನ್ಸೆಲಿಂಗ್ ವಿಳಂಬ ಮುಂತಾದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವ ಬದಲು, ಸರ್ಕಾರ ಅರ್ಹತಾ ಮಾನದಂಡಗಳನ್ನೇ ದುರ್ಬಲಗೊಳಿಸಲು ಮುಂದಾಗಿದೆ. ವೈದ್ಯಕೀಯ ಶಿಕ್ಷಣ ಸಾರ್ವಜನಿಕ ಆರೋಗ್ಯದ ಮೇಲೆ ನೇರ ಪರಿಣಾಮ ಬೀರಲಿದ್ದು, ಅರ್ಹತಾ ಮಾನದಂಡಗಳಲ್ಲಿ ರಾಜಿ ಮಾಡಿಕೊಳ್ಳುವುದು ಸರಿಯಲ್ಲ’ ಎಂದು ಹೇಳಿದ್ದಾರೆ.

ಹೊಯ್ಸಳ ಗಸ್ತು ಹೆಚ್ಚಳದಿಂದ ಕಡಿಮೆಯಾದ ರಸ್ತೆ ಅಪರಾಧ ಪ್ರಕರಣಗಳು

ದರೋಡೆ, ಸುಲಿಗೆ, ವಾಹನ ಕಳ್ಳತನ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳಲ್ಲಿ ನಡೆಯುತ್ತಿದ್ದ ಅಪರಾಧ ಪ್ರಕರಣಗಳು ಹಿಂದಿನ ಎರಡು ವರ್ಷಕ್ಕೆ ಹೋಲಿಸಿದರೆ, 2025ರಲ್ಲಿ ಕಡಿಮೆ ಆಗಿರುವುದು ಕಂಡುಬಂದಿದೆ.

2023 ಹಾಗೂ 2024ಕ್ಕೆ ಹೋಲಿಸಿದರೆ, ಕಳೆದ ವರ್ಷ (2025) ದರೋಡೆ ಪ್ರಕರಣಗಳಲ್ಲಿ ಶೇ 47, ಚಿನ್ನದ ಸರ ಕಳ್ಳತನ ಶೇ 53, ಸುಲಿಗೆ ಶೇ 21 ಹಾಗೂ ವಾಹನ ಕಳ್ಳತನ ಪ್ರಕರಣಗಳು ಶೇ 19ರಷ್ಟು ಇಳಿಕೆಯಾಗಿವೆ. ರಸ್ತೆಯಲ್ಲಿ ನಡೆಯುವ ಅಪರಾಧ ಪ್ರಕರಣಗಳು ಇಳಿಕೆ ಆಗಿರುವುದು ಪೊಲೀಸ್ ಇಲಾಖೆಯ ಅಂಕಿಅಂಶದಿಂದ ಗೊತ್ತಾಗಿದೆ.

‘ರಸ್ತೆಯಲ್ಲಿ ನಡೆಯುವ ಅಪರಾಧ ಪ್ರಕರಣಗಳನ್ನು ಕಡಿಮೆಗೊಳಿಸಿ, ಸುರಕ್ಷಿತ ನಗರವಾಗಿ ರೂಪಿಸಲು ಪ್ರಯತ್ನಿಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. ನಗರದಲ್ಲಿ 2023ರಲ್ಲಿ 217, 2024ರಲ್ಲಿ 185 ಹಾಗೂ 2025ರಲ್ಲಿ 191 ಕೊಲೆಗಳು ನಡೆದಿವೆ.

‘ಕಳೆದ ಮೂರು ವರ್ಷಗಳಲ್ಲಿ ನಗರದ ರಸ್ತೆಗಳಲ್ಲಿ ನಡೆದಿದ್ದ ಅಪರಾಧ ಪ್ರಕರಣಗಳನ್ನು ವಿಶ್ಲೇಷಿಸಲಾಗಿದೆ. ಇದರಿಂದ ದರೋಡೆ, ಸುಲಿಗೆ, ವಾಹನ ಕಳ್ಳತನ ಪ್ರಕರಣಗಳು ಇಳಿಕೆ ಆಗಿರುವುದು ಕಂಡುಬಂದಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಹೊಯ್ಸಳ ಗಸ್ತು ವ್ಯವಸ್ಥೆ ಹೆಚ್ಚಿಸಲಾಗಿದೆ. ಹೆಚ್ಚಿನ ಅಪರಾಧ ಕೃತ್ಯಗಳು ನಡೆಯುವ ಸ್ಥಳ ಹಾಗೂ ರಸ್ತೆಗಳಲ್ಲಿ ಹೊಯ್ಸಳ ಗಸ್ತು ಸಿಬ್ಬಂದಿ ನಿಯೋಜನೆ ಮಾಡಲಾಗುತ್ತಿದೆ. ಇದರಿಂದ ರಸ್ತೆಯಲ್ಲಿ ನಡೆಯುತ್ತಿದ್ದ ಅಪರಾಧ ಪ್ರಕರಣಗಳು ಇಳಿಕೆಯಾಗಿವೆ’ ಎಂದು ಪೊಲೀಸರು ಹೇಳುತ್ತಾರೆ.

ಮುಖ್ಯಾಂಶಗಳು

- ಹಿಂದಿನ ಎರಡು ವರ್ಷದ ಅಪರಾಧ ಪ್ರಕರಣಗಳ ಹೋಲಿಕೆ
- ಮೂರು ವರ್ಷಗಳ ಅಪಘಾತ ಪ್ರಕರಣಗಳ ವಿಶ್ಲೇಷಣೆ

ಸಿ.ಸಿ ಟಿ.ವಿ ಕ್ಯಾಮೆರಾಗಳ ಪ್ರಮುಖ ಪಾತ್ರ

ನಗರದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳ ಸಂಖ್ಯೆ ಹೆಚ್ಚಿಸಿರುವುದು ಹಾಗೂ ಕ್ಯಾಮೆರಾಗಳಿಗೆ ಜಿಯೊಟ್ಯಾಗ್ ಅಳವಡಿಕೆಯು ಅಪರಾಧಗಳನ್ನು ತಡೆಯುವಲ್ಲಿ ಪರಿಣಾಮಕಾರಿ ಪಾತ್ರವಹಿಸಿದೆ ಎಂದು ತಿಳಿಸಿದ್ದಾರೆ.

‘ನಗರದಲ್ಲಿ 2,32,711 ಸಿ.ಸಿ.ಟಿ.ವಿ ಕ್ಯಾಮೆರಾಗಳು ಇದ್ದವು. 2024ರ ಜೂನ್ 20ರ ವೇಳೆಗೆ ಒಟ್ಟು 5.35 ಲಕ್ಷ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿತ್ತು. ಎಲ್ಲಾ ಕ್ಯಾಮೆರಾಗಳಿಗೂ ಜಿಯೊ ಟ್ಯಾಗ್ ವ್ಯವಸ್ಥೆ ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ನಿರಂತರವಾಗಿ ಅಳವಡಿಸುವ ಮೂಲಕ ಅಪರಾಧ ಪ್ರಕರಣ ತಡೆಗಟ್ಟಲು ಕ್ರಮ ವಹಿಸಲಾಗುತ್ತಿದೆ. ಈ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳ ಆಧಾರದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಸಿವಿಲ್ ವ್ಯಾಜ್ಯ, ವೈಯಕ್ತಿಕ ಕಾರಣ, ಕೌಟುಂಬಿಕ ಕಲಹದಂತಹ ಸಂದರ್ಭದಲ್ಲಿ ಆಗಾಗ್ಗೆ ಕೊಲೆಗಳು ನಡೆದಿವೆ. ಕಳೆದ ನಾಲ್ಕು ವರ್ಷದಲ್ಲಿ ನಡೆದಿರುವ ಕೊಲೆಗಳ ಸಂಖ್ಯೆ 200ರ ಆಸುಪಾಸಿನಲ್ಲೇ ಇದೆ. ಈ ಅವಧಿಯಲ್ಲಿ ನಗರದ ಜನಸಂಖ್ಯೆ ಹೆಚ್ಚಿದ್ದರೂ ಕೊಲೆಯಂತಹ ಕೃತ್ಯಗಳು ಹೆಚ್ಚು ನಡೆದಿಲ್ಲ’ ಎಂದು ಅಧಿಕಾರಿ ಹೇಳುತ್ತಾರೆ.

ಎಳ್ಳು–ಬೆಲ್ಲ ವಿತರಣೆ

ರಾಜರಾಜೇಶ್ವರಿನಗರ: ಸಂಕ್ರಾಂತಿ ಹಬ್ಬದ ಪ್ರಯುಕ್ತ ಮಾಳಗಾಳದಲ್ಲಿ ಹಮ್ಮಿಕೊಂಡಿದ್ದ ಸಂಕ್ರಾಂತಿ ಉತ್ಸವದಲ್ಲಿ ಕೆಪಿಸಿಸಿ ವಕ್ತಾರೆ ಎಚ್‌.ಕುಸುಮಾ ಅವರು ಗೋಪೂಜೆ ನೆರವೇರಿಸಿ, 15 ಸಾವಿರ ಕುಟುಂಬಗಳಿಗೆ ಎಳ್ಳು–ಬೆಲ್ಲ, ಕಡಲೆಕಾಯಿ, ಗೆಣಸು, ಅವರೆಕಾಯಿ, ಕಬ್ಬನ್ನು ವಿತರಿಸಿದರು.

ಬಮೂಲ್‌ ಅಧ್ಯಕ್ಷ ಡಿ.ಕೆ. ಸುರೇಶ್‌ ಅವರು ದವಸ, ಧಾನ್ಯಗಳ ರಾಶಿಗೆ ಪೂಜೆ ನೆರವೇರಿಸಿದರು. ಕಾಂಗ್ರೆಸ್‌ ಬೆಂಗಳೂರು ಪಶ್ಚಿಮ ಜಿಲ್ಲಾ ಘಟಕದ ಅಧ್ಯಕ್ಷ ಹನುಮಂತರಾಯಪ್ಪ, ಕಾಂಗ್ರೆಸ್‌ ಮುಖಂಡ ಎನ್‌.ಶೇಖರ್‌ ಇದ್ದರು.



ಸಂಕ್ರಾಂತಿ ಹಬ್ಬದ ಪ್ರಯುಕ್ತ ಜ್ಞಾನಗಂಗಾ ನಗರದಲ್ಲಿ ಜನರು ಜಾನುವಾರುಗಳನ್ನು ಕಿಚ್ಚು ಹಾಯಿಸಿದರು –ಚಿತ್ರ: ಪುಷ್ಕರ್‌ ವಿ

ಸಡಗರದ ಸಂಕ್ರಾಂತಿ ಆಚರಣೆ

ನಗರದ ದೇವಸ್ಥಾನಗಳಲ್ಲಿ ವಿಶೇಷ ಪೂಜೆ
ಗಮನಸೆಳೆದ ರಂಗೋಲಿ, ಕಿಚ್ಚು ಹಾಯಿಸುವಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷದ ಪ್ರಥಮ ಹಬ್ಬವಾದ ಸಂಕ್ರಾಂತಿಯನ್ನು ನಗರದೆಲ್ಲೆಡೆ ಸಂಭ್ರಮ ಸಡಗರದಿಂದ ಗುರುವಾರ ಆಚರಿಸಲಾಯಿತು.

ಹಬ್ಬದ ಅಂಗವಾಗಿ ಮನೆ ಮನೆಗಳೂ ತಳಿರು ತೋರಣಗಳಿಂದ ಸಿಂಗಾರಗೊಂಡಿದ್ದವು. ಚಿಣ್ಣರು, ಮಹಿಳೆಯರು ಹೊಸ ಬಟ್ಟೆ ತೊಟ್ಟು, ಎಳ್ಳು–ಬೆಲ್ಲ ಮತ್ತು ಕಬ್ಬಿನ ಜಲ್ಲೆಯನ್ನು ಹಂಚಿ ಸಂಭ್ರಮಿಸಿದರು. ಮನೆಗಳಲ್ಲಿ ಪೊಂಗಲ್‌ ತಯಾರಿಸಿ, ಕುಟುಂಬದ ಸದಸ್ಯರು ಒಟ್ಟಾಗಿ ಸವಿದರು. ನಗರದ ಮೈದಾನಗಳಲ್ಲಿ ನಡೆದ ರಾಸುಗಳಿಗೆ ಕಿಚ್ಚು ಹಾಯಿಸುವ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಧಾನ್ಯಗಳ ರಾಶಿ ಪೂಜೆಗಳು ಹಬ್ಬದ ಸಂಭ್ರಮ ಹೆಚ್ಚಿಸಿದವು.

ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನ, ಮಲ್ಲೇಶ್ವರದ ಲಕ್ಷ್ಮಿ ನರಸಿಂಹ ದೇವಸ್ಥಾನ, ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನ, ಕೆ.ಆರ್‌.ಮಾರುಕಟ್ಟೆಯ ಕೋಟೆ ಪ್ರಸನ್ನ ವೆಂಕಟರಮಣ ದೇವಸ್ಥಾನ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಯಶವಂತಪುರ ಸರ್ಕಲ್‌ನ ಗಾಯತ್ರಿ ದೇವಸ್ಥಾನ, ಜೆ.ಪಿ.ನಗರದ ರಾಗಿಗುಡ್ಡ ಆಂಜನೇಯ ದೇವಸ್ಥಾನ, ಬನಶಂಕರಿಯ ದೇವಗಿರಿ ವೆಂಕಟೇಶ್ವರ ದೇವಾಲಯ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನಡೆದವು.

ಪ್ರಸಾದ ವಿತರಣೆ: ದೇವರ ದರ್ಶನಕ್ಕೆ ಸರದಿಯಲ್ಲಿ ಜನರು ನಿಂತಿರುವ ದೃಶ್ಯ ಎಲ್ಲೆಡೆ ಸಾಮಾನ್ಯವಾಗಿತ್ತು. ಭಕ್ತರಿಗೆ ಪೊಂಗಲ್‌ ಮತ್ತು ಕೋಸಂಬರಿ ಪ್ರಸಾದ ನೀಡಲಾಯಿತು. ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳಲ್ಲಿ ಕೆಲವೆಡೆ ಎಳ್ಳು–ಬೆಲ್ಲದ ಮಿಶ್ರಣವನ್ನು ವಿತರಿಸಲಾಯಿತು.

ಹಬ್ಬದ ಪ್ರಯುಕ್ತ ಕೆ.ಆರ್‌. ಮಾರುಕಟ್ಟೆ, ಜಯನಗರ, ಮಲ್ಲೇಶ್ವರ ಮಾರುಕಟ್ಟೆಗಳಲ್ಲಿ ಕಬ್ಬಿನ ಜಲ್ಲೆ, ಹೂವು, ಹಣ್ಣುಗಳಿಗೆ ಹೆಚ್ಚಿನ ಬೇಡಿಕೆಯಿತ್ತು. ರಾಜರಾಜೇಶ್ವರಿನಗರ, ಮಲ್ಲೇಶ್ವರ, ಮತ್ತಿಕೆರೆ, ಯಶವಂತಪುರ, ಯಲಹಂಕ ಉಪನಗರ, ಪದ್ಮನಾಭ ನಗರದಲ್ಲಿ ವಿವಿಧ ಸಂಸ್ಥೆಗಳು ರಾಸುಗಳನ್ನು ಕಿಚ್ಚು ಹಾಯಿಸುವ ಆಚರಣೆ ನಡೆಸಿದವು.

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ರಾಜ್ಯಪಾಲ ಥಾವರಚಂದ್‌ ಗೆಹಲೋತ್‌ ಅವರು ಲೋಕಭವನದಲ್ಲಿ ಗೋವುಗಳಿಗೆ ಪೂಜೆ ಸಲ್ಲಿಸಿದರು. ಕನ್ನಡ ಯುವಜನ ಸಂಘವು 'ಸಂಕ್ರಾಂತಿ; ಪುಣ್ಯ ಕಾಲದ ಆರಂಭ' ವಿಷಯದ ಮೇಲೆ ಉಪನ್ಯಾಸ ಹಮ್ಮಿಕೊಂಡಿತ್ತು. ಚಿಂತಕ ಅಜನೀಶ್‌ ನಾಗೇಶ್‌ ಕಡಬ ಉಪನ್ಯಾಸ ನೀಡಿದರು.



ಸುಧಾಮನಗರದ ಕೆ.ಎಸ್‌.ಗಾರ್ಡನ್‌ನಲ್ಲಿ ತಮಿಳು ಭಾಷಿಕರು ಪೊಂಗಲ್‌ ತಯಾರಿಸಿ ಸಂಭ್ರಮಿಸಿದರು –ಚಿತ್ರ; ಕೃಷ್ಣಕುಮಾರ್‌ ಪಿ.ಎಸ್‌.

ಸೌಹಾರ್ದ ಸುಗ್ಗಿ ಆಚರಣೆ

ಬೊಮ್ಮನಹಳ್ಳಿ: ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಬೊಮ್ಮನಹಳ್ಳಿಯ ಮಂಗಮ್ಮನಪಾಳ್ಯದಲ್ಲಿ ವಿವಿಧ ಧರ್ಮೀಯರು ಒಂದೆಡೆ ಸೇರಿ ಸೌಹಾರ್ದ ಸುಗ್ಗಿಯನ್ನು ಸಂಭ್ರಮದಿಂದ ಆಚರಿಸಿದರು. ಪರಸ್ಪರ ಎಳ್ಳು–ಬೆಲ್ಲ ಹಂಚಿ, ಸ್ಥಳದಲ್ಲೇ ಪೊಂಗಲ್‌ ತಯಾರಿಸಿ ಸವಿದರು.

ಆಚರಣೆಯಲ್ಲಿ ಭಾಗವಹಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ಹಿಂದೆ ಸಂಕ್ರಾಂತಿ ದಿನದಂದು ರಾಸುಗಳಿಗೆ ಸಿಂಗರಿಸಿ, ಕಿಚ್ಚು ಹಾಯಿಸುತ್ತಿದ್ದೆವು. ಬೆಂಗಳೂರು ನಗರೀಕರಣಗೊಂಡ ನಂತರ ಸುಗ್ಗಿ ಹಬ್ಬ ಅಪರೂಪವಾಗುತ್ತಿದೆ. ಇಂತಹ ಆಚರಣೆಗಳ ಮೂಲಕ ಸುಗ್ಗಿ ಹಬ್ಬವನ್ನು ಮುಂದುವರಿಸಬೇಕು. ಯಾವುದೇ ಭೇದ ಭಾವವಿಲ್ಲದೆ ಎಲ್ಲರೂ ಒಟ್ಟಾಗಿ ಬದುಕನ್ನು ಸಾಗಿಸಬೇಕು. ಹಬ್ಬಗಳ ಮೂಲಕ ಭವಿಷ್ಯದ ಪೀಳಿಗೆಗೆ ಉತ್ತಮ ಸಂದೇಶವನ್ನು ತಲುಪಿಸಬೇಕು ಎಂದರು.

ದನಕರುಗಳ ಮೆರವಣಿಗೆ

ಕೆ.ಆರ್‌.ಪುರ: ಕೆ.ಆರ್‌. ಪುರದ ಮಹಾಬಲೇಶ್ವರ ದೇವಸ್ಥಾನದ ಬಳಿ ಮಕರ ಸಂಕ್ರಾಂತಿ ಹಬ್ಬದ ನಿಮಿತ್ತ ದನಕರುಗಳ ಮೆರವಣಿಗೆ ಹಾಗೂ ವಿವಿಧ ಕಾರ್ಯಕ್ರಮಗಳು ನಡೆದವು.

ದನಕರುಗಳ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ರಾಸುಗಳಿಗೆ ಮೊದಲನೇ ಬಹುಮಾನ ₹10 ಸಾವಿರ, ಎರಡನೇ ಬಹುಮಾನ ₹5 ಸಾವಿರ, ಮೂರನೇ ಬಹುಮಾನ ₹3 ಸಾವಿರ ಮತ್ತು ಟ್ರೋಫಿ ವಿತರಿಸಲಾಯಿತು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲ ದನಕರುಗಳಿಗೆ ಸಮಾಧಾನಕರ ನಗದು ಬಹುಮಾನ ವಿತರಿಸಲಾಯಿತು

'ನಮ್ಮ ಪೂರ್ವಿಕರು ಹಬ್ಬ ಹರಿದಿನಗಳನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಆಚರಿಸುತ್ತಾ ಬಂದಿದ್ದಾರೆ. ಅವುಗಳನ್ನು ಮುಂದಿನ ಪೀಳಿಗೆಯೂ ಆಚರಿಸುವಂತೆ ನೋಡಿಕೊಳ್ಳಬೇಕಿದೆ' ಎಂದು ಸಮಾಜಸೇವಕ ಕೆ. ಹೇಮಂತ್‌ ಚಿನ್ನಿ ಹೇಳಿದರು.



'ಆಚಾರ–ವಿಚಾರಗಳಲ್ಲಿ ಒಗ್ಗಟ್ಟಾಗಬೇಕು'

ಯಲಹಂಕ: 'ಭಾರತೀಯರಾದ ನಾವೆಲ್ಲರೂ ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಆಚಾರ-ವಿಚಾರಗಳ ಮೂಲಕ ಒಗ್ಗಟ್ಟಾಗಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ವಿದ್ಯಾರಣ್ಯಪುರದ ಎನ್‌.ಟಿ.ಐ ಮೈದಾನದಲ್ಲಿ ಬಿಜೆಪಿ ಮುಖಂಡ ಎ.ರವಿ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ನಾಲ್ಕು ದಿನಗಳ ಸಂಕ್ರಾಂತಿ ಸಂಭ್ರಮ, ಅವರೆಬೇಳೆ ಮೇಳ ಹಾಗೂ ದೇಸಿ ಕ್ರೀಡೆಗಳ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ಸಂಕ್ರಾಂತಿ ವಿಶೇಷವಾಗಿ ರೈತರ ಹಬ್ಬವಾಗಿದೆ. ಬೆಳೆದ ಬೆಳೆಯನ್ನು ರಾಶಿಮಾಡಿ ಸಂಭ್ರಮಿಸುವ ಸಂದರ್ಭವಾಗಿದೆ' ಎಂದರು.

ವಿಧಾನ ಪರಿಷತ್‌ ಸದಸ್ಯ ಸಿ.ಟಿ.ರವಿ, ಶಾಸಕ ಎಸ್‌.ಆರ್‌.ವಿಶ್ವನಾಥ್‌ ಮಾತನಾಡಿದರು. ರಾಶಿಪೂಜೆ, ಎತ್ತು ಮತ್ತು ಹಸುಗಳ ಪ್ರದರ್ಶನ, ಎತ್ತಿನಬಂಡಿ ಸವಾರಿ, ವಸ್ತುಪ್ರದರ್ಶನ, ಶಾಲಾ ಮಕ್ಕಳು ಹಾಗೂ ಸಾರ್ವಜನಿಕರಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಭಜನಾ ಮೆರವಣಿಗೆ

ಯಲಹಂಕ: ಕೋಗಿಲು ಗ್ರಾಮದ ವೇಣುಗೋಪಾಲಸ್ವಾಮಿ ಭಜನಾ ಮಂಡಳಿ ವತಿಯಿಂದ ಧನುರ್ಮಾಸದ ಭಜನಾ ಮೆರವಣಿಗೆ ನಡೆಸಲಾಯಿತು. ಬೆಳಿಗ್ಗೆ 5.30ಕ್ಕೆ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ಆರಂಭವಾದ ಮೆರವಣಿಗೆ, ಗ್ರಾಮದ ಪ್ರಮುಖ ಬೀದಿಗಳು ಹಾಗೂ ಸುತ್ತಮುತ್ತಲ ಬಡಾವಣೆಗಳಲ್ಲಿ ಸಂಚರಿಸಿತು.

ಗರುಡುಗಂಬದ ಸಮೇತ ವಾದ್ಯಗಳನ್ನು ನುಡಿಸಿಕೊಂಡು ದೇವರ ನಾಮಗಳನ್ನು ಹಾಡುವುದರೊಂದಿಗೆ, ಮಕ್ಕಳು, ಯುವಕರು, ಮಹಿಳೆಯರು ಹಾಗೂ ಹಿರಿಯರು ಮೆರವಣಿಗೆಯಲ್ಲಿ ಸಾಗಿದರು. ಅನ್ನಪೂರ್ಣೇಶ್ವರಿ, ಮಾರಮ್ಮ, ಪಿಳ್ಳೇಕಮ್ಮ ಹಾಗೂ ಗ್ರಾಮದೇವತೆ ಪೂಜಾ ಮಹಾಲಕ್ಷ್ಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು.

ವೇಣುಗೋಪಾಲಸ್ವಾಮಿ ದೇವಸ್ಥಾನದ ಬಳಿ ಗೋಪೂಜೆ ಮಾಡಲಾಯಿತು.

ಯೋಜನೆ ವಿಭಾಗ ಕಚೇರಿ ಸ್ಥಳಾಂತರ

ಬೆಂಗಳೂರು: ಬೊಮ್ಮನಹಳ್ಳಿ ವಲಯ-2 ನಗರ ಯೋಜನೆ ವಿಭಾಗದ ಉಪ ನಿರ್ದೇಶಕರ ಕಚೇರಿಯನ್ನು ತಾತ್ಕಾಲಿಕವಾಗಿ ಎಚ್‌ಎಸ್‌ಆರ್‌ ಬಡಾವಣೆಯ ಬಿಡಿಎ ವಾಣಿಜ್ಯ ಸಂಕೀರ್ಣದ 2ನೇ ಮಹಡಿಗೆ ಸ್ಥಳಾಂತರಿಸಲಾಗಿದೆ.

ಬಿಟಿಎಂ ಲೇಔಟ್‌ನ ಆರ್‌ಟಿಒ ಕಚೇರಿ ಎದುರು ಇದ್ದ ಕಟ್ಟಡದಲ್ಲಿ ಇಲ್ಲಿಯವರೆಗೆ ಕಾರ್ಯನಿರ್ವಹಿಸುತ್ತಿತ್ತು. ಈ ಕಚೇರಿಯ ವ್ಯಾಪ್ತಿಗೆ ಬೊಮ್ಮನಹಳ್ಳಿ, ಬಿ.ಟಿ.ಎಂ ಲೇಔಟ್‌ ಮತ್ತು ಮಹದೇವಪುರ ವಿಧಾನಸಭಾದ ಭಾಗಶಃ ಪ್ರದೇಶ ಒಳಗೊಂಡಂತೆ 18 ವಾರ್ಡ್‌ಗಳು ಬರುತ್ತಿದ್ದು, ಸಾರ್ವಜನಿಕರ ಭೇಟಿಗೆ ಅನುವಾಗುವಂತೆ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಸಮೀಪದಲ್ಲಿ ಇರುವಂತಹ ಕಟ್ಟಡಕ್ಕೆ ಕಚೇರಿ ಸ್ಥಳಾಂತರ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇಗುಲದಲ್ಲಿ ಮುಗಿಲು ಮುಟ್ಟಿದ ಭಕ್ತರ ಹರ್ಷ

'ಗಂಗಾಧರ'ನಿಗೆ ಸೂರ್ಯ ರಶ್ಮಿ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕರ ಸಂಕ್ರಾಂತಿಯ ದಿನವಾದ ಗುರುವಾರ ಸಂಜೆ ಸೂರ್ಯನ ಕಿರಣಗಳು ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇಗುಲದ ಶಿವಲಿಂಗವನ್ನು ಸ್ಪರ್ಶಿಸುತ್ತಿದ್ದಂತೆ ಭಕ್ತರಲ್ಲಿ ಹರ್ಷದ ಹೊನಲು ಹರಿಯಿತು.

ಸೂರ್ಯರಶ್ಮಿ 6 ಸೆಕೆಂಡ್‌ಗಳವರೆಗೆ ಶಿವಲಿಂಗದ ಮೇಲೆ ಪೂರ್ಣವಾಗಿ ಆವರಿಸಿಕೊಂಡಿತ್ತು. ಈ ಕ್ಷಣಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು. ದೇಗುಲದ ಬಲಭಾಗದ ಕಿಂಡಿಯಿಂದ ಸಂಜೆ 5.17ರ ವೇಳೆಗೆ ನೇಸರನ ಕಿರಣಪ್ರವೇಶಿಸಿತು. ಮೊದಲು ಗವಿಗಂಗಾಧರೇಶ್ವರ ದೇವರ ಪಾದ ಸ್ಪರ್ಶಿಸಿತು. ಬಳಿಕ ನಂದಿ ವಿಗ್ರಹದ ಮೂಲಕ ಹಾದುಹೋಗಿ ಇಡೀ ಶಿವಲಿಂಗವನ್ನು ಆವರಿಸಿತು. ಈ ಪ್ರಕ್ರಿಯೆ ಸುಮಾರು 6 ನಿಮಿಷಗಳ ಅವಧಿಯಲ್ಲಿ ನಡೆದಿದ್ದು, ಬಳಿಕ ಸೂರ್ಯ ಉತ್ತರಾಯಣಕ್ಕೆ ಪಥ ಬದಲಿಸಿದನು. ಸೂರ್ಯ ರಶ್ಮಿ ಪ್ರವೇಶದ ಅವಧಿಯಲ್ಲಿ ದೇವರಿಗೆ ನಿರಂತರ ಅಭಿಷೇಕ ನಡೆಸಲಾಯಿತು.



ಶಿವಲಿಂಗಕ್ಕೆ ಸೂರ್ಯ ರಶ್ಮಿ ಸ್ಪರ್ಶದ ಕ್ಷಣ

ಭಾಸ್ಕರನ ಎಳೆ ಕಿರಣಗಳು ಮರೆಯಾದ ನಂತರ ಮತ್ತೊಮ್ಮೆ ದೇವರಿಗೆ ಅಭಿಷೇಕ ಮಾಡಿ, ಪೂಜೆ ಸಲ್ಲಿಸಲಾಯಿತು. ಸೂರ್ಯರಶ್ಮಿ ಶಿವಲಿಂಗವನ್ನು ಸ್ಪರ್ಶಿಸುವ ಅವಧಿಯಲ್ಲಿ ಭಕ್ತರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ದೇವಾಲಯದ ಹೊರಗಡೆ ವಿಶೇಷ ಎಲ್‌ಇಡಿ ಪರದೆಯಲ್ಲಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು. ಗಂಗಾಜಲವನ್ನು ಪ್ರೋಕ್ಷಣೆ ಮಾಡಿ, ದೇವರಿಗೆ ವಿಶೇಷ ಅಲಂಕಾರ ಮಾಡಲಾಯಿತು. ಬಳಿಕಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.

ನಗರದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಬಂದಿದ್ದರು. ಸೂರ್ಯನ ಕಿರಣಗಳು ಶಿವಲಿಂಗದ ಮೇಲೆ ಬೀಳುವಾಗ ಶಿವನಾಮ ಪಠಿಸಿದರು. ಬಳಿಕ ಸರತಿ ಸಾಲಿನಲ್ಲಿ ಶಿವಲಿಂಗದ ದರ್ಶನ ಪಡೆದರು.

ಸಂಕ್ರಾಂತಿ ಹಬ್ಬದ ಪ್ರಯುಕ್ತ ಮುಂಜಾನೆಯೇ ಗವಿಗಂಗಾಧರೇಶ್ವರ ದೇವಾಲಯದಲ್ಲಿ ಭಕ್ತರ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಬಂದಿತ್ತು. ಜನರು ಸರದಿಯಲ್ಲಿ ನಿಂತು, ಗಂಗಾಧರೇಶ್ವರನ ದರ್ಶನ ಪಡೆದರು. ಮುಂಜಾನೆ 5ರಿಂದ ಮಧ್ಯಾಹ್ನ 12ರವರೆಗೆ ಭಕ್ತರಿಗೆ ಸುಗಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

'ಗಂಗಾಧರೇಶ್ವರ ತೃಪ್ತಿಯಾಗಿದ್ದಾನೆ'

'ಶಿವಲಿಂಗಕ್ಕೆ ಹಾಲಿನ ಅಭಿಷೇಕ ಮಾಡುವಾಗ ಸೂರ್ಯನ ರಶ್ಮಿಗಳು ಪೂರ್ಣವಾಗಿ ಶಿವಲಿಂಗವನ್ನು ಆವರಿಸಿಕೊಂಡಿದ್ದವು. ಎಲ್ಲಿಯೂ ಕಪ್ಪು ಚುಕ್ಕೆ ಕಾಣಿಸಿಕೊಂಡಿಲ್ಲ. ಇದರಿಂದ ಆನಂದ ಉಂಟಾಗಿದೆ. ಸಾಮಾನ್ಯವಾಗಿ ಸೂರ್ಯ ನಿಂತು ಕೊಳ್ಳುವುದಿಲ್ಲ. ಆದರೆ, ಈ ಬಾರಿ ನಂದಿ ಭಾಗದಿಂದ ಪ್ರವೇಶಿಸಿದ ಸೂರ್ಯನ ಕಿರಣಗಳು, ಶಿವಲಿಂಗವನ್ನು ಆರು ಸೆಕೆಂಡ್‌ ಆವರಿಸಿಕೊಂಡಿದ್ದವು. ಇದು ಬಹಳ ವಿಶೇಷವಾಗಿದ್ದು, ಶುಭದ ಸಂಕೇತವಾಗಿದೆ. ಒಂದು–ಎರಡು ಸೆಕೆಂಡ್‌ ಮಾತ್ರ ಆವರಿಸಿ ಕೊಂಡಿದ್ದರೆ, ಅನಾಹುತದ ಮುನ್ಸೂಚನೆ ಇರುತ್ತಿತ್ತು. 6 ಸೆಕೆಂಡ್‌ಗಳ ಸ್ಪರ್ಶದಿಂದ ಗಂಗಾಧರೇಶ್ವರ ತೃಪ್ತಿಯಾಗಿದ್ದಾನೆ' ಎಂದು ಗವಿಗಂಗಾಧರೇಶ್ವರ ದೇಗುಲದ ಪ್ರಧಾನ ಅರ್ಚಕ ಸೋಮಸುಂದರ ದೀಕ್ಷಿತ್‌ ಹೇಳಿದರು.

ಶಾಂತಿಯನ್ನು ಸಾರುವುದೇ ನಿಜವಾದ ಧರ್ಮ: ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ


ಯಡಿಯೂರಪ್ಪ

ಕೆಂಗೇರಿ: 'ಧರ್ಮವನ್ನು ಸೀಮಿತ ಚೌಕಟ್ಟಿನಲ್ಲಿ ಅರ್ಥೈಸಲಾಗುವುದಿಲ್ಲ. ಶಾಂತಿ ಸಾರುವ ಹಾಗೂ ಸೌಹಾರ್ದ ಬೆಸೆಯುವ ಬಂಧವೇ ನಿಜವಾದ ಧರ್ಮ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಭಿಪ್ರಾಯಪಟ್ಟರು.

ಸೋಂಪುರದ ಬಸವೇಶ್ವರಸ್ವಾಮಿ ರಥೋತ್ಸವ ಮತ್ತು ಕಡಲೆಕಾಯಿ ಪರಿಷೆಯ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಪ್ರತಿಯೊಬ್ಬರೂ ಶ್ರೀರಾಮನ ದರ್ಶನ ಮಾಡಿ ದೈವಕೃಪೆಗೆ ಪಾತ್ರರಾಗಬೇಕು. ಪ್ರಕೃತಿ ಹಾಗೂ ಮನುಜನ ನಡುವಿನ ಸಂಬಂಧದ ಸಾಂಕೇತಿಕವಾಗಿ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ. ಇಂತಹ ಕಾರ್ಯಕ್ರಮಗಳ ಮೂಲಕ ನಾಡಿನ ಸಂಸ್ಕೃತಿ, ಸಂಪ್ರದಾಯಗಳು ಮತ್ತಷ್ಟು ಶ್ರೀಮಂತವಾಗಲಿವೆ' ಎಂದರು.

ಬಸವಣ್ಣದೇವರ ಸೇವಾ ಸಮಿತಿಯ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಪೀಠಾಧಿಪತಿ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, 'ಪ್ರಗತಿಪರರು ಹಾಗೂ ಚಿಂತಕರ ಹೆಸರಿನಲ್ಲಿ ಹಿಂದೂ ಧರ್ಮವನ್ನು ಹಳಿಯುವ ಒಂದು ವರ್ಗ ಸಕ್ರಿಯವಾಗಿದೆ. ಇಂತಹ ಸ್ವಯಂಘೋಷಿತ ಬುದ್ಧಿ ಜೀವಿಗಳಿಂದ ಧರ್ಮದ ಉಳಿವು ಸಾಧ್ಯವೇ' ಎಂದು ಪ್ರಶ್ನಿಸಿದರು.

ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಎಂ.ರುದ್ರೇಶ್ ಮಾತನಾಡಿ, 'ಸನಾತನ ಧರ್ಮದಲ್ಲಿ ದೇವಾಲಯಗಳ ಪಾತ್ರ ಹಿರಿದಾಗಿದ್ದು, ನೆಲಮೂಲ ಸಂಸ್ಕೃತಿಯ ಕೊಂಡಿಗಳೆನಿಸಿವೆ. ಹೀಗಾಗಿ ಧಾರ್ಮಿಕ ಕಾರ್ಯ ಹಾಗೂ ಧರ್ಮ ರಕ್ಷಣೆಯಲ್ಲಿ ತೊಡಗಿರುವ ಕೆಂಗೇರಿ ಹೋಬಳಿ ಸುತ್ತಮುತ್ತಲ ಗ್ರಾಮಗಳು ಸೇರಿದಂತೆ ನಗರ ವ್ಯಾಪ್ತಿಯ ಐನೂರಕ್ಕೂ ಹೆಚ್ಚು ಅರ್ಚಕ ದಂಪತಿಗೆ ಗೌರವ ಸಮರ್ಪಣೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಮುಖಂಡರಾದ ಮೋಹನ್ ಕುಮಾರ್, ಶಶಿಕುಮಾರ್ ಹಾಗೂ ಬಸವಣ್ಣ ದೇವರ ಸೇವಾ ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು.


ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿಯು ಎನ್‌ಆರ್ ಕಾಲೊನಿಯ ಪತ್ತಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಕವಿ ಲಕ್ಷ್ಮೀಶರ ಜೈಮಿನಿ ಭಾರತ' ಉಪನ್ಯಾಸ ಮಾಲಿಕೆಯಲ್ಲಿ ಹರಿಹರಪುರ ಮಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ, ಧಾರ್ಮಿಕ ಪ್ರವಚನಕಾರ ಪಾವಗಡ ಪ್ರಕಾಶರಾವ್ ಹಾಗೂ ಡಾ.ಎಚ್‌.ಆರ್‌. ನಂದಿನಿ ದೇವಿ ಉಪಸ್ಥಿತರಿದ್ದರು
– ಪ್ರಜಾವಾಣಿ ಚಿತ್ರ

ಸೋಂಪುರ ರಥೋತ್ಸವಕ್ಕೆ ಜನಸಾಗರ

ಮಧ್ಯರಾತ್ರಿಯಿಂದಲೇ ಧಾರ್ಮಿಕ ಕಾರ್ಯಕ್ರಮ, ಗ್ರಾಮ ದೇವತೆಯರ ಮೆರವಣಿಗೆ • ಸಂಭ್ರಮದ ಕಡಲೆಕಾಯಿ ಪರಿಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಂಪುರ ಚನ್ನಯ್ಯನ ಪಾಳ್ಯದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಅತ್ಯಂತ ಸಂಭ್ರಮ, ಅದ್ದೂರಿಯಿಂದ ಕಡಲೆಕಾಯಿ ಪರಿಷೆ, ಬಸವೇಶ್ವರ ಸ್ವಾಮಿ ದೇವರ ರಥೋತ್ಸವ ನಡೆಯಿತು. ಸುತ್ತ-ಮುತ್ತಲಿನ 30ಕ್ಕೂ ಅಧಿಕ ಹಳ್ಳಿಗಳ ಸಾವಿರಾರು ಗ್ರಾಮಸ್ಥರು ಜಾತ್ರಾ ಮಹೋತ್ಸವಕ್ಕೆ ಸಾಕ್ಷಿಯಾದರು.

ಬಸವಣ್ಣದೇವರ ಸೇವಾ ಸಮಿತಿಯ (ಬಸವೇಶ್ವರ ಭಕ್ತ ಮಂಡಳಿ) ಮುಖಂಡ ಹಾಗೂ ಬಿಜೆಪಿ ರೈತ ಮೋರ್ಚಾದ ರಾಜ್ಯ ಘಟಕದ ಉಪಾಧ್ಯಕ್ಷರೂ ಆದ ಎಂ.ರುದ್ರೇಶ್ ನೇತೃತ್ವದಲ್ಲಿ 19ನೇ ವರ್ಷದ ರಥೋತ್ಸವ ಗುರುವಾರ ಭಕ್ತಿ, ಶ್ರದ್ಧೆ ಹಾಗೂ ಸಂಪ್ರದಾಯ ಬದ್ಧವಾಗಿ ನಡೆಯಿತು.

ಮರಳೆಗವಿಮಠದ ಮುಮ್ಮನಿರ್ವಾಣ ಸ್ವಾಮೀಜಿ, ಕೃಷ್ಣಯಾದವನಂದ ಸ್ವಾಮೀಜಿ, ಬೇಬಿಮಠದ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಪೂಜೆ ಸಲ್ಲಿಸುವ ಮೂಲಕ ರಥೋತ್ಸವ ಮತ್ತು ಕಡಲೆ ಕಾಯಿ ಪರಿಷೆಗೆ ಚಾಲನೆ ನೀಡುತ್ತಿದ್ದಂತೆ ಭಕ್ತರ ಹರ್ಷಘೋಷ ಮುಗಿಲು ಮುಟ್ಟಿತು. ಕೆಂಗೇರಿ, ಸೋಂಪುರ, ಗೊಲ್ಲಹಳ್ಳಿ, ಹೆಮ್ಮಿಗೆಪುರ, ಕಂಬಿಪುರ, ಚೂಡಹಳ್ಳಿ, ಶ್ರೀನಿವಾಸಪುರ, ಕರಿಯನ ಪಾಳ್ಯ ಸೇರಿ ಹಲವು ಗ್ರಾಮಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ, ದೇವರ ದರ್ಶನ ಪಡೆದು ಕಣ್ತುಂಬಿಕೊಂಡರು.

ವಿಶೇಷವೆಂದರೆ ಕೇವಲ ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ ಸೀಮಿತವಾಗದೆ, ಹೆಮ್ಮಿಗೆಪುರದ ಮಾರಮ್ಮ, ಗಟ್ಟಿಗೆರೆ ಪಾಳ್ಯದ ಶ್ರೀ ಕಬ್ಬಾಳಮ್ಮ, ಚನ್ನವೀರಯ್ಯನ ಪಾಳ್ಯದ ಮಾರಮ್ಮ, ಎಚ್. ಗೊಲ್ಲಹಳ್ಳಿಯ ಕಬ್ಬಾಳಮ್ಮ ಸೇರಿ 26 ಹಳ್ಳಿಗಳ ಗ್ರಾಮದೇವತೆಯರ ಮೆರವಣಿಗೆಯೂ ಜರುಗಿತು.



ಸೋಂಪುರ ಚನ್ನಯ್ಯನಪಾಳ್ಯದ ಬಸವೇಶ್ವರ ಸ್ವಾಮಿ ದೇವರ ರಥೋತ್ಸವದಲ್ಲಿ ಮುಖಂಡ ಎಂ.ರುದ್ರೇಶ್ ಹಾಗೂ ಸ್ವಾಮೀಜಿಗಳು ಭಕ್ತರಿಗೆ ಕಡಲೆ ಕಾಯಿ ವಿತರಿಸಿದರು (ಎಡಚಿತ್ರ) ಪಾಲ್ಗೊಂಡಿದ್ದ ಭಕ್ತರು

ಗಿಣ್ಣಿನ ಹಾಲಿನ ಅಭಿಷೇಕ

ಚೋಳರ ಕಾಲದಲ್ಲಿ ನಿರ್ಮಾಣಗೊಂಡ ಬಸವೇಶ್ವರ ದೇವಸ್ಥಾನವನ್ನು 2006ರಲ್ಲಿ ಜೀರ್ಣೋದ್ಧಾರಗೊಳಿಸಲಾಯಿತು. ಇಲ್ಲಿ ನಂದಿ ಮೂರ್ತಿ ಪ್ರತಿಷ್ಠಾಪನೆಗೊಂಡಿದೆ. ಜಾನುವಾರುಗಳಿಗೆ ಬಾವು, ಕಾಲುಬಾಯಿ ಜ್ವರ ಮತ್ತಿತರ ಕಾಯಿಲೆ ಕಾಣಿಸಿಕೊಂಡರೆ, ಇಲ್ಲಿನ ದೇವರಿಗೆ ಹರಕೆ ಹೊತ್ತರೆ ಅಂಥ ಜಾನುವಾರುಗಳು ಗುಣಮುಖವಾಗುತ್ತವೆ ಎಂಬುದು ಸ್ಥಳೀಯರ ನಂಬಿಕೆ.

ಹೈನುಗಾರಿಕೆಯೇ ಜೀವನಾಧಾರವಾಗಿರುವ ಸ್ಥಳೀಯರ ಪಾಲಿಗೆ ಬಸವೇಶ್ವರ ದೇವರೆಂದರೆ ಅಪಾರ ಭಕ್ತಿ. ಸುತ್ತಮುತ್ತಲಿನ ಹಳ್ಳಿಗಳ ಆರಾಧ್ಯ ದೈವವೆನಿಸಿರುವ ಬಸವೇಶ್ವರ ದೇವರ ಮೂರ್ತಿಗೆ ಗಿಣ್ಣಿನ ಹಾಲಿನ ಅಭಿಷೇಕ ಮಾಡುವುದು ವಿಶೇಷ.

ಬುಧವಾರ ಮಧ್ಯರಾತ್ರಿಯಿಂದಲೇ ದೇವಾಲಯಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡವು. ಪರಿಷೆಗೆ ಬಂದ ಭಕ್ತರಿಗೆ ಉಚಿತವಾಗಿ ತಲಾ ಒಂದು ಜಲ್ಲೆ ಕಬ್ಬು ಮತ್ತು ಎರಡು ಸೇರು ಕಡಲೆಕಾಯಿಯನ್ನು ವಿತರಿಸಲಾಯಿತು. ಇದಕ್ಕಾಗಿ ಡೆಂಕಣಿಕೋಟೆ, ಧರ್ಮಪುರಿ, ಪಾವಗಡ, ಗೌರಿಬಿದನೂರು ಕನಕಪುರ, ಮಾಗಡಿ ಮತ್ತಿತರ ಭಾಗಗಳಿಂದ ನೂರಾರು ಕ್ವಿಂಟಲ್ ಕಡಲೆಕಾಯಿ ಹಾಗೂ ರಾಜ್ಯದ ಹಲವು ಭಾಗಗಳಿಂದ ಲೋಡುಗಟ್ಟಲೆ ಕಬ್ಬು ತರಿಸಲಾಗಿತ್ತು.

ಮಹಿಳೆಯರು ಹೂವು, ತಂಬಿಟ್ಟಿನ ಆರತಿಯೊಂದಿಗೆ ಮೆರವಣಿಗೆ ಮೂಲಕ ದೇವಾಲಯಕ್ಕೆ ಬಂದು ಜಾತ್ರಾ ಮಹೋತ್ಸವದಲ್ಲಿ ಭಾಗಿಯಾದರು. ಪೂಜಾ ಕುಣಿತ, ಪಠದ ಕುಣಿತ, ಡೊಳ್ಳು ಕುಣಿತ, ನಂದಿಧ್ವಜ, ಗೊರವನ ಕುಣಿತ, ವೀರಭದ್ರ ಕುಣಿತ, ನಗಾರಿವಾದ್ಯ ಮಹಿಳೆಯರ ವೀರಗಾಸೆ, ಕಂಸಾಳೆ, ಕರಡಿ ಕುಣಿತ ಸಂಕ್ರಾಂತಿ ಉತ್ಸವದೊಂದಿಗೆ ಗ್ರಾಮೀಣ ಹಬ್ಬಕ್ಕೆ ಮೆರುಗು ನೀಡಿದವು.

ಗ್ರಾಮೀಣ ಕ್ರೀಡೆಗಳು, ರಂಗೋಲಿ ಸ್ಪರ್ಧೆ ಸೇರಿ ನಾನಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವಾಗ್ಮಿ ಹಾರಿಕಾ ಮಂಜುನಾಥ್ ಅವರು ಹಿಂದುತ್ವ ಜಾಗೃತಿ ಕಾರ್ಯಕ್ರಮ ನಡೆಸಿಕೊಟ್ಟರೆ, ಗಾಯಕ ಹನುಮಂತ ಮತ್ತು ಶಿವಾನಿ ತಂಡದವರ ಸಾಂಸ್ಕೃತಿಕ ಕಾರ್ಯಕ್ರಮ ಪ್ರೇಕ್ಷಕರನ್ನು ರಂಜಿಸಿತು.

ಸಂಜೆ ಸುಗ್ಗಿ ಸಂಭ್ರಮದ ಅಂಗವಾಗಿ ರಾಸುಗಳನ್ನು ಕಿಚ್ಚು ಹಾಯಿಸಲಾಯಿತು. ನಾನಾ ಗ್ರಾಮಗಳ ರೈತರು ತಾವು ಸಾಕಿರುವ ಹಸು, ಎಮ್ಮೆ, ಎತ್ತುಗಳನ್ನು ಕರೆತಂದು ಕಿಚ್ಚು ಹಾಯಿಸಿದರು.

ಪುಷ್ಪ ಹಾಗೂ ದೀಪಾಲಂಕಾರದಿಂದ ದೇವಸ್ಥಾನ ಕಂಗೊಳಿಸುತ್ತಿತ್ತು. ಆಟಿಕೆಗಳು, ಆಲಂಕಾರಿಕ ವಸ್ತುಗಳು, ಗೃಹೋಪಯೋಗಿ ವಸ್ತುಗಳು, ತಿನಿಸು, ಬಟ್ಟೆ ಮಾರಾಟ ಮಳಿಗೆಗಳಲ್ಲಿ ವ್ಯಾಪಾರ ಜೋರಾಗಿತ್ತು. ಕುಡಿಯುವ ನೀರು ಪೂರೈಕೆ, ಮೊಬೈಲ್ ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿತ್ತು. ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ ಪರೀಕ್ಷೆ ಮಾಡಲಾಯಿತು.

ಇದೇ ವೇಳೆ ನಾನಾ ದೇವಾಲಯಗಳಲ್ಲಿ ಪೂಜೆ ಮಾಡುವ ಅರ್ಚಕ ದಂಪತಿ ಸೇರಿ ಬ್ರಾಹ್ಮಣ ಸಮುದಾಯದ ಮಂದಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

'2006ರಿಂದ ಆರಂಭವಾದ ಈ ಪರಿಷೆಗೆ ತನ್ನದೇ ಆದ ಮಹತ್ವ, ಹಿನ್ನೆಲೆಯಿದ್ದು ಕಾಲಕ್ರಮೇಣ ಖ್ಯಾತಿ ಪಡೆದುಕೊಂಡಿದೆ. ಧರ್ಮ ರಕ್ಷಣೆಯೊಂದಿಗೆ ಗ್ರಾಮೀಣ ಸೊಗಡು ಇಂದಿನ ಪೀಳಿಗೆಗೆ ತಲುಪಬೇಕೆನ್ನುವ ಸಾಮಾಜಿಕ ಕಾಳಜಿಯೊಂದಿಗೆ ಈ ಕಾರ್ಯಕ್ರಮ ವ್ಯವಸ್ಥೆ ಮಾಡಲಾಗುತ್ತಿದೆ. ಸೋಂಪುರ, ವರಾಹಸಂದ್ರ ಸೇರಿ ಕೆಂಗೇರಿ ಸುತ್ತಲಿನ ಗ್ರಾಮಗಳ ಜನರು ಸಂಭ್ರಮದಿಂದ ಈ ಹಬ್ಬವನ್ನು ಆಚರಿಸುತ್ತಾರೆ' ಎಂದು ಸ್ಥಳೀಯ ನಿವಾಸಿ ಮಹೇಶ್ ಹೇಳಿದರು.

ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಶ್ರೀರಂಗಪಟ್ಟಣದ ಬೇಬಿಮಠ ಮತ್ತು ಚಂದ್ರವನ ಆಶ್ರಮದ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಕೆಂಗೇರಿ ಉಪನಗರದ ಏಕದಳ ಬಿಲ್ವ ಬಂಡೇ ಮಠದ ಸಚ್ಚಿದಾನಂದ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಬಿ.ವೈ. ರಾಘವೇಂದ್ರ, ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಡಲೆಗೆ ಬೆಂಬಲ ಬೆಲೆ: ಕೇಂದ್ರಕ್ಕೆ ಸಿ.ಎಂ ಪತ್ರ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರುಕಟ್ಟೆಯಲ್ಲಿ ದರ ಕುಸಿತದಿಂದ ಸಂಕಷ್ಟದಲ್ಲಿರುವ ಕಡಲೆ ಬೆಳೆಗಾರರ ನೆರವಿಗಾಗಿ ಕೂಡಲೇ ಬೆಂಬಲ ಬೆಲೆಯಡಿ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.


'ಕರ್ನಾಟಕದ ಪ್ರಮುಖ ದ್ವಿದಳ ಧಾನ್ಯ ಬೆಳೆಗಳಲ್ಲಿ ಕಡಲೆ ಒಂದಾಗಿದೆ. 9.24 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದ್ದು, 6.27 ಲಕ್ಷ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಧಾರವಾಡ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಬಾಗಲಕೋಟೆ, ದಾವಣಗೆರೆ, ಚಿಕ್ಕಮಗಳೂರು ಮುಂತಾದ ಪ್ರದೇಶಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಇದು ಆದಾಯದ ಮೂಲವಾಗಿದೆ. ಅನಿಶ್ಚಿತ ಹವಾಮಾನ ಪರಿಸ್ಥಿತಿಗಳ ಬಳಿಕವೂ ಅನೇಕ ತಿಂಗಳ ಕಠಿಣ ಪರಿಶ್ರಮದ ಮೂಲಕ ಕಡಲೆ ಫಸಲು ರೈತರ ಕೈ ಸೇರುತ್ತಿದೆ. ಆದರೆ, ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾಗಿ ರೈತರಿಗೆ ಅನ್ಯಾಯವಾಗುತ್ತಿದೆ' ಎಂದು ಪತ್ರದಲ್ಲಿ ಅವರು ವಿವರಿಸಿದ್ದಾರೆ.

78 ಸ್ಟೇಷನ್‌ಗಳಲ್ಲಿ ಎಐ ಆಧಾರಿತ 'ಐಪಂಪ್‌ನೆಟ್' ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ತನ್ನ 78 ಪಂಪಿಂಗ್ ಸ್ಟೇಷನ್‌ಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಪಂಪ್ ಮಾನಿಟರಿಂಗ್ ಹಾಗೂ ಆಪ್ಟಿಮೈಸೇಷನ್ ತಂತ್ರಜ್ಞಾನ 'ಐಪಂಪ್‌ನೆಟ್' ಅಳವಡಿಸಿಕೊಂಡಿದೆ.

ವಾರ್ಷಿಕವಾಗಿ ₹40 ಕೋಟಿಗೂ ಹೆಚ್ಚು ವಿದ್ಯುತ್ ವೆಚ್ಚವನ್ನು ಉಳಿತಾಯ ಮಾಡುವಂಥ ಹೊಸ ತಂತ್ರಜ್ಞಾನ ಇದಾಗಿದೆ. ಇಂಥ ತಂತ್ರಜ್ಞಾನ ಅಳವಡಿಸಿಕೊಂಡಿರುವ ವಿಶ್ವದ ಮೊದಲ ನೀರು ಸರಬರಾಜು ಸಂಸ್ಥೆ ಎನ್ನುವ ಹೆಗ್ಗಳಿಕೆಗೆ ಮಂಡಳಿ ಪಾತ್ರವಾಗಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷರಾದ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.



'ಐಪಂಪ್‌ನೆಟ್' ಎನ್ನುವುದು ರಿಯಲ್-ಟೈಮ್ ಸೆನ್ಸರ್, ಕೃತಕ ಬುದ್ಧಿಮತ್ತೆ ಮತ್ತು ಮುನ್ಸೂಚನೆ ನೀಡುವ ತಂತ್ರಜ್ಞಾನಗಳ ಸಮ್ಮಿಲನವಾಗಿದೆ. ಸಾಂಪ್ರದಾಯಿಕ ವಿಧಾನಗಳಿಗಿಂತ ಭಿನ್ನವಾಗಿ, ಈ ವ್ಯವಸ್ಥೆಯು ಪಂಪ್‌ಗಳ ಕಾರ್ಯಕ್ಷಮತೆಯನ್ನು ನಿರಂತರವಾಗಿ ಪರಿಶೀಲಿಸುತ್ತದೆ. ಕಣ್ಣಿಗೆ ಕಾಣದ ನಷ್ಟವನ್ನು ಪತ್ತೆ ಹಚ್ಚುತ್ತದೆ. ಈಗಾಗಲೇ ಈ ವ್ಯವಸ್ಥೆಯು ನಿಗದಿಗಿಂತ ಹೆಚ್ಚು ವಿದ್ಯುತ್ ಬಳಸುತ್ತಿರುವ ಹಲವಾರು ಪಂಪ್‌ಗಳನ್ನು ಗುರುತಿಸಿದೆ. ಈ ಮಾಹಿತಿಯ ಆಧಾರದ ಮೇಲೆ, ಜಲಮಂಡಳಿಯು ಇಂಥ ಪಂಪ್‌ಗಳನ್ನು ಬದಲಾಯಿಸಿ, ಅಧಿಕ ದಕ್ಷತೆಯ ಪಂಪ್‌ಗಳನ್ನು ಅಳವಡಿಸುವ ಕಾರ್ಯವನ್ನು ಆರಂಭಿಸಿದೆ ಎಂದು ಮಾಹಿತಿ ನೀಡಿದ್ದಾರೆ. ಆರ್ಥಿಕ ಲಾಭ ಮಾತ್ರವಲ್ಲದೆ, ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಿ ಬೆಂಗಳೂರಿನ ಪರಿಸರ ಸುಸ್ಥಿರತೆಗೂ ಇದು ಕೊಡುಗೆ ನೀಡುತ್ತಿದೆ ಎಂದು ಹೇಳಿದ್ದಾರೆ.

ಸಿನಿಮಾ ರಂಜನೆ

'ಜವಾಬ್ದಾರಿಯುತ ಸ್ವಾತಂತ್ರ್ಯ' ಅತಿಮುಖ್ಯ

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಅಪರಿಚಿತೆ ಸಿನಿಮಾದ ಹಾಡು ಬಿಡುಗಡೆ ಕಾರ್ಯಕ್ರಮದಲ್ಲಿ ಕೃಪಾನಿಧಿ ಸಂಸ್ಥೆಯ ಮುಖ್ಯಸ್ಥೆ ಗೀತಾಪ್ರಿಯಾ ಅಭಿಮತ

ಬೆಂಗಳೂರು: ಸಾಮಾಜಿಕವಾಗಿ ಯುವಜನರಿಗೆ ಸಾಕಷ್ಟು ಹೆಚ್ಚಿನ ಸ್ವಾತಂತ್ರ್ಯವಿದ್ದು, ಸರಿಯಾದ ದಿಕ್ಕಿನಲ್ಲಿ ಬಳಸುವಂಥಹಾ ಜವಾಬ್ದಾರಿಯನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕೆಂದು ಕೃಪಾನಿಧಿ ಸಂಸ್ಥೆಯ ಮುಖ್ಯಸ್ಥೆ ಗೀತಾಪ್ರಿಯಾ ತಿಳಿಸಿದರು.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಅಪರಿಚಿತೆ ಸಿನಿಮಾದ ಹಾಡು ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕಾಲಬದಲಾದಂತೆ ಯುವಸಮುದಾಯಕ್ಕೆ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗುತ್ತಿವೆ. ಆದರೆ, ಸಿಗುವ ಅವಕಾಶಗಳನ್ನು, ಸೌಕರ್ಯಗಳನ್ನು ಯಾವ ರೀತಿ, ಯಾವ ದಿಕ್ಕಿನೆಡೆಗೆ ಬಳಸುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಪೋಷಕರು ನೀಡುವ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಳ್ಳುವಂತಾಗಬಾರದು. ಕೃಪಾನಿಧಿ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದ್ದು, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿನಿಯರಿಗೆ ಉಚಿತ ಪ್ರವೇಶ ನೀಡಲಾಗುತ್ತಿದೆ. ಅಪರಿಚಿತೆ ಸಿನಿಮಾದಲ್ಲಿ ಸ್ವತಃ ಒಂದು ಹಾಡಿಗೆ ಗಾಯನ ಮಾಡಿದ್ದು, ಸಿನಿಮಾ ಜನವರಿ ಅಂತ್ಯಕ್ಕೆ ಬಿಡುಗಡೆ ಕಾಣಲಿದೆ ಎಂದು ಮಾಹಿತಿ ನೀಡಿದರು.

ಗೀತಾಪ್ರಿಯ ಗಾಯನ: ಕೃಪಾನಿಧಿ ಸಂಸ್ಥೆಯ ಮುಖ್ಯಸ್ಥೆ ಗೀತಾಪ್ರಿಯರವರು 'ಅಪರಿಚಿತೆ' ಸಿನಿಮಾದ ಭಾಗವಾಗಿದ್ದಾರೆ. ಸಿನಿಮಾದಲ್ಲಿ ಹಾಡಿಗೆ ದನಿಯಾಗಿರುವ ಅವರು, ಅವರ ಅನುಭವವನ್ನು ಕಾರ್ಯಕ್ರಮದಲ್ಲಿ ಹಂಚಿಕೊಂಡರು. ಮಹಿಳಾ ವಲಯಕ್ಕೆ ಸಂಬಂಧಿಸಿದ ಅಂಶಗಳನ್ನೊಳಗೊಂಡ ಸಿನಿಮಾದಲ್ಲಿ ಹಾಡು ಹಾಡಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಸಿನಿಮಾ ಜನವರಿ ಅಂತ್ಯಕ್ಕೆ ಬಿಡುಗಡೆಗೆ ಸಜ್ಜಾಗಿದ್ದು, ಎಲ್ಲರಿಗೂ ಇಷ್ಟವಾಗಲಿದೆ ಎಂದರು.



ಕಾರ್ಯಕ್ರಮದಲ್ಲಿ ಸಿನಿಮಾ ನಾಯಕ ನಟಿ ಆರ್‌ಜೆ ನಿಖಿತಾ ನಿರೂಪಣೆಯೊಂದಿಗೆ ಎಲ್ಲರ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಅತ್ಯಾಕರ್ಷಕ ಫ್ಯಾಷನ್‌ಶೋ ಆಯೋಜನೆ ಮಾಡಲಾಗಿತ್ತು. ಪ್ರಸ್ತುತ ಸನ್ನಿವೇಶದಲ್ಲಿ ಮಹಿಳಾ ಕ್ಷೇತ್ರದಲ್ಲಾಗುವ ಬೆಳವಣಿಗೆಗಳು, ಮಹಿಳಾ ಸಬಲೀಕರಣದ ಸಂದೇಶ ಸಾರುವ ನಿಟ್ಟಿನಲ್ಲಿ ಫ್ಯಾಷನ್‌ಶೋ ಎಲ್ಲರ ಗಮನ ಸೆಳೆಯಿತು. ವಿಶೇಷವಾಗಿ ವಿದ್ಯಾರ್ಥಿಗಳು ಈ ಫ್ಯಾಷನ್‌ಶೋ ಕಾರ್ಯಕ್ರಮಕ್ಕೆ ಅತ್ಯಂತ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಿನಿ ನಿರ್ದೇಶಕ ವಿಶ್ವನಾಥ್, ನಟಿ ಆರ್ ಜೆ ನಿಖಿತಾ ಹಾಜರಿದ್ದರು.



ಫ್ಯಾಷನ್‌ಶೋನಲ್ಲಿ ಗೀತಾಪ್ರಿಯರವರು ಪಾಲ್ಗೊಂಡಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ದುನಿಯಾ ವಿಜಯ್ ನಟನೆಯ 'ಲ್ಯಾಂಡ್‌ಲಾರ್ಡ್' ಚಿತ್ರ ಮುಂದಿನ ವಾರ ತೆರೆ ಕಾಣುತ್ತಿದೆ. ಈ ಚಿತ್ರ ಹಾಗೂ ಅದರಲ್ಲಿನ ತಮ್ಮ ಪಾತ್ರ ಕುರಿತು ಅವರು ಮಾತನಾಡಿದ್ದಾರೆ.



ವಿಜಯ್

'ಸಿನಿಮಾ ಯಶಸ್ಸಿಗೆ ಪ್ರತಿಭಾವಂತರು ಒಂದಾಗಲಿ'

• ವಿನಾಯಕ ಕೆ.ಎಸ್.

• ಯಾವ ಜಾನರ್‌ನ ಚಿತ್ರ? ಅದರಲ್ಲಿ ನಿಮ್ಮ ಪಾತ್ರವೇನು?

ನನ್ನದು ಬಡ ರೈತನ ಪಾತ್ರ. ಯಾವಾಗಲೂ ಸರ್ವರಿಗೂ, ಎಲ್ಲ ವರ್ಗದವರಿಗೂ ಸಮಾನತೆ ಬೇಕು ಎಂಬ ವಿಷಯ ಹೊಂದಿರುವ ಕಥೆ. 1975–80ರ ಅವಧಿಯಲ್ಲಿ ನಡೆದ ಒಂದಷ್ಟು ಘಟನೆಗಳ ಆಧಾರಿತ ಕಥೆ ಎನ್ನಬಹುದು. ಆಗ ಅಮಾಯಕ ರೈತರಿದ್ದರು. ಭೂಮಿ ಮತ್ತು ಬದುಕಿಗಾಗಿ ಅವರ ಹೋರಾಟ ಏನಿತ್ತು ಎಂದು ಹೇಳುವಂಥ ವಿಷಯ. ಹಳ್ಳಿ, ಹಳ್ಳಿಗೂ, ಸಮಾನತೆ ಬರಬೇಕು, ಸಂವಿಧಾನದ ಆಶಯಗಳು ಈಡೇರಬೇಕು ಎಂದು ವಿನಂತಿ ಮಾಡಿಕೊಳ್ಳುವ ಸಿನಿಮಾ.

• ಈ ಚಿತ್ರದ ನಿರ್ದೇಶಕ ಜಡೇಶ್ 'ಕಾಟೇರ' ಸಿನಿಮಾದ ಬರಹಗಾರರಾಗಿದ್ದರು. ಅಲ್ಲಿ ಕಾಗೋಡು ಹೋರಾಟದ ಕಥೆಯಿತ್ತು. ಇಲ್ಲಿಯೂ ಅದೇ ಕಥೆ ಮುಂದುವರಿಯುತ್ತದೆಯಾ?'

ಇದು ಜಡೇಶ್ ಅವರು ಆಯ್ಕೆ ಮಾಡಿದ ಕಥೆ. ಹಾಗಂತ 'ಕಾಟೇರ'ದ ಮುಂದಿನ ಕಥೆಯಲ್ಲ. ಇದು ಒಂದು ವರ್ಗಕ್ಕೆ, ಜಾತಿಗೆ ಸಂಬಂಧಿತ ವಿಷಯವಲ್ಲ. ಎಲ್ಲ ವರ್ಗದವರ ಕಥೆ. ಸಮಾಜದಲ್ಲಿ ಸಮಾನತೆ ಬೇಕು, ಎಲ್ಲರಿಗೂ ಒಳ್ಳೆಯದಾಗಬೇಕು ಎಂಬ ಉದ್ದೇಶವಿರುವ ಕಥಾವಸ್ತು.

• ಹಾಗಿದ್ದರೆ ಇದು ಆ್ಯಕ್ಷನ್, ಮಾಸ್ ಸಿನಿಮಾವೇ?

ನನ್ನ ಸಿನಿಮಾ ಅಂದಾಗ ಆ್ಯಕ್ಷನ್ ಇರಲೇಬೇಕು. ಗಟ್ಟಿಯಾದ ಕಥಾವಸ್ತುವಿನ ಜತೆಗೆ ಆ್ಯಕ್ಷನ್, ಮನರಂಜನೆ ಇರುವ ಸಿನಿಮಾ. ಪ್ರೀತಿ, ಕುಟುಂಬಗಳ ಸಂಬಂಧ, ನಗು, ಅಳು ಎಲ್ಲವೂ ಇದೆ. ಮುಖ್ಯವಾಗಿ ಕೌಟುಂಬಿಕ ಕಥಾಹಂದರದ ಚಿತ್ರ.

• ಮಾಸ್, ಆ್ಯಕ್ಷನ್ ಸಿನಿಮಾಗಳ ಪರಿಭಾಷೆ ಬದಲಾಗುತ್ತಿದೆಯಾ?

ಆ್ಯಕ್ಷನ್, ಮಾಸ್‌ಗೆ ಒಂದು ವರ್ಗ ಖಂಡಿತ ಇದೆ. ಆದರೆ ಬರೀ ಹೊಡೆದಾಟ, ಮೆರೆದಾಟ ಇದ್ದರೆ ಜನ ಒಪ್ಪುವುದಿಲ್ಲ. ಕಂಟೆಂಟ್ ಆಧಾರಿತ ಸಿನಿಮಾ ಮಾಡುವುದು ಸರಿ ಮತ್ತು ಆ ರೀತಿ ಸಿನಿಮಾವನ್ನು ಜನ ಎಂದಿಗೂ ಕೈಬಿಡುವುದಿಲ್ಲ. ಕಥೆಯಿಲ್ಲದೆ ಸುಮ್ಮನೆ ದುಡ್ಡು ಸುರಿದರೆ, ಆ್ಯಕ್ಷನ್ ಇಟ್ಟರೆ, ನೋಡಿದವರು ಚೆನ್ನಾಗಿಲ್ಲ ಎಂದು ಹೇಳಿ ಹೋಗುತ್ತಾರೆ. ಅವರಿಗೆ ಆ ಹಕ್ಕಿದೆ. ಅದನ್ನೂ ನಾವು ಗೌರವಿಸಬೇಕು.

• ನಿಮ್ಮ ಹಿಂದಿನ ಎರಡೂ ಸಿನಿಮಾಗಳು ಯಶಸ್ವಿಯಾಗಿವೆ. ಅದಕ್ಕೆ ನೀವೇ ನಿರ್ದೇಶಕರೂ ಕೂಡ. ಈಗ ಬೇರೆ ನಿರ್ದೇಶಕನ ಜತೆ ಮತ್ತೆ ಕೈಜೋಡಿಸಿದ್ದು ಯಾಕೆ?

ತುಂಬ ಒಳ್ಳೆಯ ವಿಚಾರ ಇರುವ, ಎಲ್ಲರೂ ನೋಡಬೇಕಾದ ಸಿನಿಮಾ. ಎಲ್ಲ ರೈತರ ಕುಟುಂಬದವರು ನೋಡಲಿ. ಆವತ್ತು ಏನಿತ್ತು ಎಂದು ಮಕ್ಕಳಿಗೂ ತೋರಿಸಲಿ. ನಾವು ಈ ರೀತಿ ಕಥೆ ಮಾಡದಿದ್ದರೆ ಮುಂದೆ ಯಾರೂ ಮಾಡುವುದಿಲ್ಲ. ಈಗಿನ ಕಾಲದ ಜೆನ್ ಜಿ ಮಕ್ಕಳು ಇದನ್ನೆಲ್ಲ ನೋಡಲು ಆಗುವುದಿಲ್ಲ. ಮುಂದೆ ಬೇರೆ ಏನೋ ಬಂದು ಆವರಿಸಿಕೊಳ್ಳಬಹುದು. ಎಲ್ಲವನ್ನು ಅವರು ನೋಡಲಿ ಎಂಬ ಆಸೆ. ಅದಕ್ಕಾಗಿ ಈ ಸಿನಿಮಾ ಒಪ್ಪಿಕೊಂಡೆ. ಜತೆಗೆ ಜಡೇಶ್ ಬಹಳ ಸೆನ್ಸಿಬಲ್ ನಿರ್ದೇಶಕರು. ಇಲ್ಲಿ ಎಲ್ಲಿಯೂ ಅವರು ಹಿಂಗೆ, ಇವರು ಹಂಗೆ ಎಂದು ತೋರಿಸಿಲ್ಲ. ಆ ಹಕ್ಕೂ ನಮಗಿಲ್ಲ. ಆವತ್ತಿನ ಕಾಲಘಟ್ಟದಲ್ಲಿ ವಸ್ತುಸ್ಥಿತಿ ಹೀಗಿತ್ತು ಎಂದಷ್ಟೆ ತೋರಿಸಿದ್ದೇವೆ.

• ಈ ಸಿನಿಮಾ ಬಿಡುಗಡೆ ಸಾಕಷ್ಟು ಸಲ ಮುಂದಕ್ಕೆ ಹೋಗಿದ್ದು ಯಾಕೆ?

ದೊಡ್ಡ ಪ್ರಮಾಣದ ಸಿನಿಮಾ. ಹೀಗಾಗಿ ಸಿದ್ಧತೆ ಮತ್ತು ಆರ್ಥಿಕವಾಗಿ ತಯಾರಿ ಹೆಚ್ಚಿತ್ತು. ಸಿನಿಮಾ ಮಾಡುತ್ತ ಮತ್ತೇನೋ ಬೇಕು ಅನ್ನಿಸುತ್ತೆ. ಅಡುಗೆ ಚೆನ್ನಾಗಿ ಆಗಲಿ ಎಂಬ ಆಸೆ. ಅದರ ತಯಾರಿಯಿಂದ ತಡವಾಯ್ತು.

• ನಿಮ್ಮ ನಿರ್ದೇಶನದ 'ಸಿಟಿ ಲೈಟ್ಸ್' ಯಾವ ಹಂತದಲ್ಲಿದೆ? ಅದರಲ್ಲಿಯೂ ನಟಿಸಿದ್ದೀರಾ?

ಚಿತ್ರೀಕರಣ ಬಹುತೇಕ ಮುಗಿದಿದೆ. ಲ್ಯಾಂಡ್‌ಲಾರ್ಡ್ ನಂತರ ಅದನ್ನು ಕೈಗೆತ್ತಿಕೊಳ್ಳುವೆ. ಈ ವರ್ಷವೇ ಆ ಸಿನಿಮಾವೂ ತೆರೆಗೆ ಬರಲಿದೆ. ನಾನು ಅದರಲ್ಲಿ ಪಾತ್ರ ಮಾಡಿದ್ದೇನೋ ಇಲ್ಲವೋ ಎಂದು ಈಗಲೇ ಹೇಳುವುದಿಲ್ಲ.

• ಮುಂದಿನ ಯೋಜನೆಗಳು...

ಎರಡು ಮೂರು ಕಥೆಗಳ ಬರವಣಿಗೆ ನಡೆಯುತ್ತಿದೆ. ಜವಾಬ್ದಾರಿಯಿಂದ ಕಥೆ ಆಯ್ಕೆ ಮಾಡೋಣ, ಇನ್ನಾದರೂ ಎಡವುವುದು ಬೇಡ ಎಂಬ ಆಸೆ. ನನ್ನ ನಿರ್ದೇಶನದ ಬಗ್ಗೆಯೂ ಏನೂ ನಿರ್ಧಾರವಾಗಿಲ್ಲ. ❖

• ನೀವು ನಟನ ಜತೆಗೆ ನಿರ್ದೇಶಕನೂ ಹೌದು. ನಿಮ್ಮ ಪ್ರಕಾರ ಕನ್ನಡ ಚಿತ್ರರಂಗದಲ್ಲಿ ಯಶಸ್ಸಿನ ಪ್ರಮಾಣ ಕಡಿಮೆ ಇರಲು ಕಾರಣ ಏನಿರಬಹುದು?

ಮುಕ್ತವಾಗಿ ಹೇಳಲಾಗದ ಸಾಕಷ್ಟು ಅಂಶಗಳಿವೆ. ಸಿನಿಮಾಕ್ಕೆ ಬೇಕಾದ ವಿದ್ಯಾವಂತರ ಕೊರತೆಯಿದೆ ಅನ್ನಿಸುತ್ತದೆ. ಇದಕ್ಕೆ ಆದ ಒಂದು ವಿದ್ಯೆ ಬೇಕು. ಅದನ್ನು ಕಲಿತವರು, ಬರವಣಿಗೆ, ಓದಿಕೊಂಡುವವರು ಎಲ್ಲವೂ ಬೇಕು. ಈ ಎಲ್ಲ ಅಂಶಗಳು ಒಟ್ಟಿಗೆ ಸೇರಿದರೆ ಒಳ್ಳೆಯ ಸಿನಿಮಾ ಆಗುತ್ತದೆ. ಕೇರಳದಲ್ಲೊಂದು ಕ್ರಾಂತಿ ಆಯಿತು. ಅದೇ ರೀತಿ ಕ್ರಾಂತಿಯನ್ನು ನಾವು ಮಾಡಬಹುದು. ಪ್ರತಿಭಾವಂತರು ಒಂದಾಗಬೇಕು.

ಫೆ.6ಕ್ಕೆ 'ಬಯಕೆಗಳು ಬೇರೂರಿದಾಗ'



ಚಿತ್ರದ ಪೋಸ್ಟರ್

ವಿವಾಹೇತರ ಸಂಬಂಧಗಳ ಕುರಿತು ಭಾವನಾತ್ಮಕ ಕಥೆಯನ್ನು ಹೊಂದಿರುವ 'ಬಯಕೆಗಳು ಬೇರೂರಿದಾಗ' ಚಿತ್ರ ಫೆಬ್ರುವರಿ 6ರಂದು ತೆರೆ ಕಾಣಲಿದೆ. ಆಕರ್ಷ್ ಆದಿತ್ಯ ಅವರ ಕಾದಂಬರಿ ಆಧಾರಿತ ಚಿತ್ರಕ್ಕೆ ಎನ್. ಜ್ಯೋತಿಲಕ್ಷ್ಮಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಮಹಿಳಾ ಪ್ರಧಾನ ಕಥೆಯನ್ನು ಹೊಂದಿರುವ ಚಿತ್ರ ಈಗಾಗಲೇ ಸಾಕಷ್ಟು ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪಡೆದಿದೆ.

'ಮದುವೆ ಸ್ವರ್ಗದಲ್ಲಿ ನಿಶ್ಚಯ' ಎನ್ನುವ ನಂಬಿಕೆ ಇದೆ. ಆದರೆ ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಲ್ಲಿ 1.7 ಲಕ್ಷ ವಿಚ್ಛೇದನ ಪ್ರಕರಣಗಳು ದಾಖಲಾಗಿವೆ. ವಿವಾಹೇತರ ಸಂಬಂಧ ಕೂಡ ಇದಕ್ಕೆ ಮುಖ್ಯ ಕಾರಣ. ಸಂಸ್ಕಾರ, ಸಾಮಾಜಿಕ ಒತ್ತಡಗಳ ನಡುವೆ ಸಂವಾದ, ತಾಳ್ಮೆ, ಹೊಂದಾಣಿಕೆಯ ಮೌಲ್ಯಗಳು ಹಿಂದೆ ಸರಿಯುತ್ತಿವೆ. ಈ ಎಲ್ಲ ಅಂಶಗಳನ್ನು ಹೊಂದಿರುವ ಚಿತ್ರ' ಎನ್ನುತ್ತಾರೆ ನಿರ್ದೇಶಕಿ.

ಚಿತ್ರಕ್ಕೆ ಎನ್.ಸುದರ್ಶನ್ ಬಂಡವಾಳ ಹೂಡಿದ್ದಾರೆ. ಅರೋನ್ ಕಾರ್ತೀಕ್ ಸಂಗೀತ, ಜೈ ಮಾರುತಿ ಛಾಯಾಚಿತ್ರಗ್ರಹಣವಿದೆ. ❖

'ಡಿಯರ್ ಹಸ್ಬೆಂಡ್'ಗೆ ಸುದೀಪ್ ಸಾಥ್

ಗುರುರಾಜ ಕುಲಕರ್ಣಿ (ನಾಡಗೌಡ) ನಿರ್ದೇಶನದ ಚಿತ್ರಕ್ಕೆ 'ಡಿಯರ್ ಹಸ್ಬೆಂಡ್' ಎಂದು ಹೆಸರಿಡಲಾಗಿದೆ. ನಟ ಸುದೀಪ್ ಇತ್ತೀಚೆಗಷ್ಟೇ ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ನಟರಾದ ಕುಮಾರ್ ಬಂಗಾರಪ್ಪ, ಪ್ರವೀಣ್ ತೇಜ್, ಸಂಗೀತ ನಿರ್ದೇಶಕ ವಿ. ಹರಿಕೃಷ್ಣ, ನಿರ್ದೇಶಕರಾದ ಶಶಾಂಕ್, ಎ.ಪಿ.ಅರ್ಜುನ್ ಸೇರಿದಂತೆ ಅನೇಕ ಖ್ಯಾತರು ಸಮಾರಂಭದಲ್ಲಿ ಹಾಜರಿದ್ದರು.

'ನಾವು ಹೊಸಬರಾಗಿ ಬಂದಾಗ, ಅನೇಕ ಹಿರಿಯರು ನಮಗೆ ಪ್ರೋತ್ಸಾಹಿಸಿ, ಬೆನ್ನು ತಟ್ಟಿದ್ದರು. ಅದೇ ಕೆಲಸವನ್ನು ನಾವು ಈಗ ಹೊಸಬರಿಗೆ ಮಾಡುತ್ತಿದ್ದೇವೆ. ಅಂತಿಮವಾಗಿ ಕನ್ನಡ ಚಿತ್ರರಂಗ ಬೆಳೆಯಬೇಕು. ಇಡೀ ಚಿತ್ರತಂಡಕ್ಕೆ ಶುಭವಾಗಲಿ. ಹೊಸಬರ ತಂಡದ ಮೂಲಕ ಖಂಡಿತವಾಗಿಯೂ ಹೊಸಥರದ ಸಿನಿಮಾ ಬರಲಿದೆ' ಎಂದರು ಸುದೀಪ್.

ಜಿ9 ಕಮ್ಯುನಿಕೇಶನ್ ಆ್ಯಂಡ್ ಮೀಡಿಯಾ ಹಾಗೂ ನಿರಂತರ ಪ್ರೊಡಕ್ಷನ್ಸ್ ಸಹಯೋಗದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರದಲ್ಲಿ ಸೂರಜ್ ಗೌಡ, ಶರಣ್ಯಾ ಶೆಟ್ಟಿ ಹಾಗೂ ಪ್ರವೀಣ್ ಮುಖ್ಯಭೂಮಿಕೆಯಲ್ಲಿದ್ದಾರೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಸಿನಿಮಾವಿದು.

'ಸುಮಾರು ಒಂದೂವರೆ ವರ್ಷಗಳಿಂದ ನಾವೆಲ್ಲರೂ ಸೇರಿ ಕಾಣುತ್ತಿದ್ದ ಕನಸು, ಈಗ ಸಿನಿಮಾವಾಗಿ ತೆರೆಗೆ ಬರುತ್ತಿದೆ. ಇಂದಿನ ಯುವಕರು ಇಷ್ಟಪಡುವಂಥ ಕಥೆಯೊಂದನ್ನು ಈ ಸಿನಿಮಾ ಮೂಲಕ ಪ್ರೇಕ್ಷಕರ ಮುಂದೆ ತರುತ್ತಿದ್ದೇವೆ. ಚಿತ್ರದ ಬಹುತೇಕ ಪ್ರೀ-ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದ್ದು, ಇದೇ ತಿಂಗಳಾಂತ್ಯದಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. ಬೆಂಗಳೂರು, ಗೋವಾ ಮತ್ತಿತರ ಕಡೆಗಳಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ' ಎಂದರು ಗುರುರಾಜ ಕುಲಕರ್ಣಿ.

'ಇದೊಂದು ಇಂದಿನ ಜನರೇಶನ್‌ಗೆ ಕನೆಕ್ಟ್ ಆಗುವಂಥ ಸಿನಿಮಾ. ಇದರಲ್ಲಿ ನಾನು ವಾಸಂತಿ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಇಂಥದ್ದೊಂದು ವಿಭಿನ್ನ ಕಥೆ ಕಲಾವಿದರಿಗೆ ಸಿಗುವುದು ಬಹಳ ಅಪರೂಪ' ಎಂದರು ಶರಣ್ಯಾ ಶೆಟ್ಟಿ.

ಚಿತ್ರದ ಟೈಟಲ್ ಟೀಸರ್‌ಗೆ ಸಚಿನ್ ಬಸ್ರೂರು ಹಿನ್ನೆಲೆ ಸಂಗೀತವಿದ್ದು, ಚಿತ್ರದ ಹಾಡುಗಳಿಗೆ ವೀರ್ ಸಮರ್ಥ್ ಸಂಗೀತ ಸಂಯೋಜಿಸುತ್ತಿದ್ದಾರೆ. ಪ್ರಮೋದ್ ಮರವಂತೆ ಸಾಹಿತ್ಯ, ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕಿದೆ. ಹರ್ಷಕುಮಾರ್ ಗೌಡ ಛಾಯಾಚಿತ್ರಗ್ರಹಣ, ಬಿ.ಎಸ್.ಕೆಂಪರಾಜ್ ಸಂಕಲನವಿರಲಿದೆ. ❖



ಸೂರಜ್, ಶರಣ್ಯಾ ಶೆಟ್ಟಿ

ಚಿತ್ರೀಕರಣ ಪೂರ್ಣ



ಕಾರ್ತಿಕ್ ಮಹೇಶ್

ಬಿಗ್‌ಬಾಸ್ ಖ್ಯಾತಿಯ ಕಾರ್ತಿಕ್ ಮಹೇಶ್ ನಟಿಸಿರುತ್ತಿರುವ 'ರಾಮರಸ' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಚಿತ್ರಕ್ಕೆ ಬಿ.ಎಂ.ಗಿರಿರಾಜ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ನಮ್ಮ ನೆಲದ ಸೊಗಡಿನ ಕಥೆಯನ್ನು ಹೊಂದಿರುವ ಚಿತ್ರ. ಚಿತ್ರೀಕರಣ ಮುಗಿದು ಪೋಸ್ಟ್‌ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಈ ವರ್ಷ ಮೊದಲಾರ್ಧದಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ' ಎನ್ನುತ್ತಾರೆ ನಿರ್ದೇಶಕ.

ಕಾರ್ತಿಕ್ ನಟರಾಜನ ಭಂಗಿಯಲ್ಲಿ ನೃತ್ಯ ಮಾಡುತ್ತಿರುವ ಪೋಸ್ಟರ್ ಅನ್ನು ಚಿತ್ರತಂಡ ಈ ಹಿಂದೆ ಬಿಡುಗಡೆಗೊಳಿಸಿತ್ತು. ಚಿತ್ರದಲ್ಲಿ ಬಾಲಾಜಿ ಮನೋಹರ್ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದು, ರಂಗಭೂಮಿಯ ಹದಿನಾರು ಹೊಸ ಕಲಾವಿದರು ಇದರೊಂದಿಗೆ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ.

ಚಿತ್ರಕ್ಕೆ ಗುರು ದೇಶಪಾಂಡ, ನಾಮದೇವ ಭಟ್ಟರ್ ಬಂಡವಾಳ ಹೂಡಿದ್ದಾರೆ. ಭರತ್ ಬಿ. ಜೆ. ಸಂಗೀತ, ಕೆ.ಕೆ. ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

ಈ ವಾರ 'ಸೂರ್ಯ' ತೆರೆಗೆ

ಸಂಕ್ರಾಂತಿ ಸಮಯದಲ್ಲಿಯೂ ಕನ್ನಡ ಚಿತ್ರಗಳೇ ಇಲ್ಲ ಎಂಬ ಹೊತ್ತಿನಲ್ಲಿ 'ಸೂರ್ಯ' ಚಿತ್ರ ಇಂದು (ಜ.16) ತೆರೆ ಕಾಣುತ್ತಿದೆ. ಉತ್ತರ ಕರ್ನಾಟಕದ ಕಥೆ ಹೊಂದಿರುವ ಚಿತ್ರಕ್ಕೆ ಸಾಗರ್ ದಾಸ್ ನಿರ್ದೇಶನವಿದೆ. ಬಸವರಾಜ ಬೆಣ್ಣೆ ಹಾಗೂ ರವಿ ಬೆಣ್ಣೆ ಸಹೋದರರು ನಂದಿ ಸಿನಿಮಾಸ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ.

'ಸ್ಲಂನಲ್ಲಿ ಬೆಳೆದ ಯುವಕನೊಬ್ಬ ತನ್ನ ಪ್ರೀತಿಯನ್ನು ಪಡೆದುಕೊಳ್ಳಲು ಏನೆಲ್ಲ ಹೋರಾಟ, ಸಾಹಸ ಮಾಡುತ್ತಾನೆ, ಆತನಿಗೆ ಯಾರೆಲ್ಲ ಸಹಾಯ ಮಾಡುತ್ತಾರೆ ಎಂಬುದು ಚಿತ್ರದ ಒಟ್ಟಾರೆ ಕಥೆ. ಉತ್ತರ ಕರ್ನಾಟಕ, ಬೆಂಗಳೂರು ಸುತ್ತಮುತ್ತ ಹಾಗೂ ಪುಣೆಯಲ್ಲಿ ಚಿತ್ರದ ಚಿತ್ರೀಕರಣ ನಡೆಸಿದ್ದೇವೆ' ಎಂದಿದ್ದಾರೆ ನಿರ್ದೇಶಕ.

ಪ್ರಶಾಂತ್‌ಗೆ ಹರ್ಷಿತಾ ಜೋಡಿಯಾಗಿದ್ದಾರೆ. ಪ್ರಮೋದ್ ಶೆಟ್ಟಿ, ಶ್ರುತಿ, ರವಿಶಂಕರ್, ಟಿ.ಎಸ್.ನಾಗಾಭರಣ, ಬಲ ರಾಜವಾಡಿ, ಭಜರಂಗಿ ಪ್ರಸನ್ನ ಮುಂತಾದವರು ಚಿತ್ರದಲ್ಲಿದ್ದಾರೆ.

ಐದು ಹಾಡುಗಳಿಗೆ ಶ್ರೀ ಶಾಸ್ತ ಅವರು ಸಂಗೀತ ಸಂಯೋಜನೆ ಮಾಡಿದ್ದು, ಬಹದ್ದೂರ್ ಚೇತನ್, ಯೋಗರಾಜ ಭಟ್ ಸಾಹಿತ್ಯವಿದೆ. ಮನುರಾಜ್ ಛಾಯಾಚಿತ್ರಗ್ರಹಣವಿದೆ. ❖



ಹರ್ಷಿತಾ, ಪ್ರಶಾಂತ್

'ಪೀಕಬೂ'ಗೆ ಶ್ರೀರಾಮ್ ನಾಯಕ

ಮಂಜು ಸ್ವರಾಜ್ ನಿರ್ದೇಶನದಲ್ಲಿ ಅಮೂಲ್ಯ ನಾಯಕಿಯಾಗಿ ನಟಿಸುತ್ತಿರುವ 'ಪೀಕಬೂ' ಚಿತ್ರಕ್ಕೆ ಶ್ರೀರಾಮ್ ನಾಯಕನಾಗಿ ಆಯ್ಕೆಯಾಗಿದ್ದಾರೆ. ಜತೆಗೆ ಅವರು ತಮ್ಮ ಹೆಸರನ್ನು ಶ್ರೀಮಾದೇವ್ ಇಂದ ಶ್ರೀರಾಮ್ ಎಂದು ಬದಲಿಸಿಕೊಂಡಿದ್ದಾರೆ. ನಾಯಕನ ಪಾತ್ರ ಪರಿಚಯಿಸುವ ಟೀಸರ್ ಅನ್ನು ಚಿತ್ರತಂಡ ಇತ್ತೀಚೆಗಷ್ಟೇ ಬಿಡುಗಡೆಗೊಳಿಸಿದೆ.

ಕಿರುತೆರೆಯಿಂದ ಗುರುತಿಸಿಕೊಂಡ ಶ್ರೀಮಾದೇವ್ 'ಇರುವುದೆಲ್ಲವ ಬಿಟ್ಟು', 'ಹೊಂದಿಸಿಬರೆಯಿರಿ' ಸೇರಿದಂತೆ ಹಲವು ಚಿತ್ರಗಳಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದರು. ಮಂಜು ಸ್ವರಾಜ್ ಈ ಹಿಂದೆ 'ಶ್ರಾವಣಿ ಸುಬ್ರಮಣ್ಯ'ಕ್ಕೆ ಆ್ಯಕ್ಷನ್ ಕಟ್ ಹೇಳಿದ್ದರು. ಗಣೇಶ್–ಅಮೂಲ್ಯ ಜೋಡಿಯ ಈ ಚಿತ್ರ ಸೂಪರ್ ಹಿಟ್ ಆಗಿತ್ತು.

ಶ್ರೀ ಕೆಂಚಾಂಬ ಸಿನಿಮಾ ಬ್ಯಾನರ್‌ನಡಿಯಲ್ಲಿ ಗಣೇಶ್ ಕೆಂಚಾಂಬ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಈಗಾಗಲೇ ಶೇಕಡ 60ರಷ್ಟು ಚಿತ್ರೀಕರಣ ಮುಗಿದಿದೆ ಎಂದು ಚಿತ್ರತಂಡ ಹೇಳಿದೆ. ಸುರೇಶ್ ಬಾಬು ಛಾಯಾಚಿತ್ರಗ್ರಹಣ, ವೀರ್ ಸಮರ್ಥ್, ಶ್ರೀಧರ್ ಕಶ್ಯಪ್ ಸಂಗೀತ, ಎನ್.ಎಂ ವಿಶ್ವ ಸಂಕಲನ ಈ ಚಿತ್ರಕ್ಕಿದೆ. ❖



ಶ್ರೀರಾಮ್



ಅಮೂಲ್ಯ

ಆನೆ ಕಾರ್ಯಪಡೆ: 15 ಹುದ್ದೆ, 11 ಖಾಲಿ

ಆನೆಗಳನ್ನು ಓಡಿಸುವ ತಂಡಕ್ಕೆ ಬೇಕಿದೆ ಸಿಬ್ಬಂದಿಯ ಬಲ, ಮೂಲಸೌಕರ್ಯ

• ಜಾನೇಕೆರೆ ಆರ್.ಪರಮೇಶ್



ಮುಖ್ಯಾಂಶಗಳು
- ಕಾರ್ಯಪಡೆಗೆ ಬಲ ತುಂಬುವ ಕೆಲಸವಾಗಲಿ
- ಬಾಧಿತ ಜಿಲ್ಲೆಯೆಡೆಗೆ ಕಾಳಜಿ ಹರಿಸಲಿ

ಸಕಲೇಶಪುರ (ಹಾಸನ ಜಿಲ್ಲೆ): ಜಿಲ್ಲೆಯಲ್ಲಿ ಕಾಡಾನೆಗಳ ನಿಯಂತ್ರಣಕ್ಕಾಗಿ ರಚಿಸಿರುವ ಆನೆ ಕಾರ್ಯಪಡೆಗೇ ಬಲವಿಲ್ಲದಂತಾಗಿದೆ.

ಮಂಜೂರಾಗಿರುವ 15 ಹುದ್ದೆಗಳಲ್ಲಿ 11 ಖಾಲಿ ಇವೆ. ಪ್ರಮುಖವಾಗಿರುವ ಡಿಸಿಎಫ್ ಹುದ್ದೆಯ ಜೊತೆಗೆ ವಲಯ ಅರಣ್ಯಾಧಿಕಾರಿ ಹುದ್ದೆಯೂ ಖಾಲಿ ಇದೆ. ಎಸಿಎಫ್ 2025ರ ಸೆಪ್ಟೆಂಬರ್‌ನಿಂದ ನಿರಂತರ ರಜೆಯಲ್ಲಿದ್ದಾರೆ. ಉಪ ವಲಯ ಅರಣ್ಯಾಧಿಕಾರಿಗಳ ನಾಲ್ಕು ಹುದ್ದೆ ಪೈಕಿ ಒಂದು ಖಾಲಿ ಇದೆ. 8 ಅರಣ್ಯ ರಕ್ಷಕರಿರಬೇಕಾದ ಕಾರ್ಯಪಡೆಯಲ್ಲಿ ಒಬ್ಬರಷ್ಟೇ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ, ವಾಹನ ಚಾಲಕರು ಹಾಗೂ ಆನೆ ಓಡಿಸಲು ಬೇಕಾದ ಅಗತ್ಯ ಸೌಕರ್ಯಗಳೇ ಇಲ್ಲ.

ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ಎರಡು ವರ್ಷಗಳಲ್ಲಿ ನಾಲ್ಕು ಬಾರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಪಡೆ ಮುಖ್ಯಸ್ಥರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಪತ್ರಗಳನ್ನು ಬರೆದಿದ್ದಾರೆ.

‘ಎರಡೂವರೆ ದಶಕಗಳಿಂದ ಜೀವಂತವಾಗಿರುವ ಕಾಡಾನೆ ಸಮಸ್ಯೆಯನ್ನು ಯಾವುದೇ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ’ ಎಂಬ ಜನರ ಆರೋಪವೂ ನಿರಂತರವಾಗಿದೆ.

‘ಗ್ರಾಮಗಳಲ್ಲಿ ಕಾಡಾನೆಗಳಿವೆ ಎಂಬ ಎಚ್ಚರಿಕೆಯನ್ನಷ್ಟೇ ನಾವು ನೀಡಬಹುದು. ಆನೆಗಳು ಎದುರಾದರೆ, ಜನರಷ್ಟೇ ಅಲ್ಲ, ನಮಗೂ ದಿಕ್ಕು ತೋಚದಂತಾಗುತ್ತದೆ’ ಎಂಬುದು ಅರಣ್ಯ ಇಲಾಖೆಯ ಸಿಬ್ಬಂದಿಯ ಅಳಲು.

ಜನರ ಆಕ್ರೋಶ: ಕಾಡಾನೆಗಳಿಂದ ಜೀವಕ್ಕೆ ಹಾನಿಯಾದಾಗ, ಕುಟುಂಬದವರು, ಹೋರಾಟಗಾರರು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುವುದು ಸಾಮಾನ್ಯವಾಗಿದೆ.

‘ಸರ್ಕಾರದ ವಿರುದ್ಧ ಘೋಷಣೆ ಕೂಗಿ, ತಮ್ಮವರನ್ನು ಕಳೆದುಕೊಂಡ ದುಃಖ, ನೋವನ್ನು ಹೊರ ಹಾಕುತ್ತಾರೆ. ಅಧಿಕಾರಿಗಳು, ಜನಪ್ರತಿನಿಧಿಗಳು ಬಂದು ಪರಿಹಾರದ ಚೆಕ್ ವಿತರಿಸಿ, ಭರವಸೆ ನೀಡಿ ಹೋಗುವುದು ವಾಡಿಕೆಯಂತಾಗಿದೆ’ ಎನ್ನುತ್ತಾರೆ ಇಲ್ಲಿನ ಜನ.



ಅಗತ್ಯ ಸಿಬ್ಬಂದಿ, ಸೌಕರ್ಯ ಕಲ್ಪಿಸುವಂತೆ ಅಧಿವೇಶನದಲ್ಲೂ ಪ್ರಸ್ತಾಪಿಸಿದ್ದೇನೆ. ಸಕಲೇಶಪುರಕ್ಕೆ ಬರಲಿರುವ ಅರಣ್ಯ ಸಚಿವರಿಗೆ ಮತ್ತೊಮ್ಮೆ ಮನವರಿಕೆ ಮಾಡುತ್ತೇನೆ
ಸಿಮೆಂಟ್ ಮಂಜು, ಶಾಸಕ



ಕಾರ್ಯಪಡೆಗೆ ಹೊರಗುತ್ತಿಗೆ ಆಧಾರದಲ್ಲಿ ಅಗತ್ಯ ಸಿಬ್ಬಂದಿಯ ನೇಮಕಾತಿ ಮಾಡಲಾಗಿದೆ. ಶೀಘ್ರದಲ್ಲಿ ಉಳಿದ ಹುದ್ದೆಗಳಿಗೆ ನೇಮಕಾತಿ ಆಗಲಿದೆ.
ಏಡುಕೊಂಡಲು, ಸಿಸಿಎಫ್

‘ಹುದ್ದೆಗಳ ಭರ್ತಿಗೆ ಒತ್ತಡ ಹೇರಿ’

‘ಹುದ್ದೆಗಳನ್ನು ಭರ್ತಿ ಮಾಡುವಂತೆ ಹೋರಾಟಗಾರರು ಸರ್ಕಾರದ ಮೇಲೆ ಒತ್ತಡ ತರಬೇಕು. ಅದನ್ನು ಬಿಟ್ಟು ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೆ ಆಕ್ರೋಶ ಹೊರಹಾಕುವುದು ಎಷ್ಟು ಸರಿ’ ಎಂದು ಅರಣ್ಯ ಇಲಾಖೆ ನೌಕರರೊಬ್ಬರು ಪ್ರಶ್ನಿಸಿದರು.

‘ಸಿಬ್ಬಂದಿ ಕೊರತೆ ನಡುವೆಯೂ ಮರಗಳ್ಳತನ, ಬೇಟೆ ತಡೆಯುತ್ತೇವೆ. ಕಾಡ್ಗಿಚ್ಚು ನಂದಿಸುತ್ತೇವೆ. ಅತಿವೃಷ್ಟಿ, ಅನಾವೃಷ್ಟಿಯಲ್ಲಿ ಆಡಳಿತದೊಂದಿಗೆ ಕೈಜೋಡಿಸುತ್ತೇವೆ. ಹೆದ್ದಾರಿಯಲ್ಲಿ ಮಣ್ಣು ಕುಸಿದರೆ, ಮರ ಬಿದ್ದರೆ ಧಾವಿಸುತ್ತೇವೆ. ಜೊತೆಗೆ ಕಾಡಾನೆಗಳ ಕಾರ್ಯಾಚರಣೆಯಲ್ಲೂ ಕೆಲಸ ಮಾಡಬೇಕು. ಕೆಲವು ದಿನ 24X7 ಕೆಲಸ ಮಾಡಿದ್ದೇವೆ. ಆದರೆ, ಅವಘಡ ಸಂಭವಿಸಿದಾಗ ನಮ್ಮನ್ನೇ ಗುರಿ ಮಾಡಲಾಗುತ್ತಿದೆ’ ಎಂದು ವನಪಾಲಕರೊಬ್ಬರು ಹೇಳಿದರು.

ನೀರಿನಲ್ಲಿ ಮುಳುಗಿ ಆರು ಸಾವು

ಉತ್ತರ ಕರ್ನಾಟಕದ ವಿವಿಧೆಡೆ ನಡೆದ ಪ್ರತ್ಯೇಕ ಘಟನೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ/ಹಾವೇರಿ/ದಾಂಡೇಲಿ/ಮಾನ್ವಿ/ಕಲಬುರಗಿ: ಉತ್ತರ ಕರ್ನಾಟಕದ ವಿವಿಧೆಡೆ ಗುರುವಾರ ಸಂಭವಿಸಿದ ಪ್ರತ್ಯೇಕ ಘಟನೆಗಳಲ್ಲಿ ಆರು ಮಂದಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಲೋಕಾಪುರ ಸಮೀಪದ ಜಾಲಿಕಟ್ಟಿ ಕೆ.ಡಿ. ಗ್ರಾಮದ ಸಹೋದರ ಸಂಬಂಧಿಗಳಾದ ಪ್ರಮೋದ ಮಹಾಂತೇಶ ಬಡಿಗೇರ (18), ಮನೋಜ ಮಂಜುನಾಥ ಬಡಿಗೇರ (18) ಮೃತಪಟ್ಟಿದ್ದಾರೆ.

‘ಗಣೇಶನಿಕ ವೇಳೆ ತೋಡಲಾಗಿದ್ದ ಆಳವಾದ ತಗ್ಗಿನಲ್ಲಿ ನೀರು ಶೇಖರಣೆ ಆಗಿತ್ತು. ಅದರ ಬದಿಯಲ್ಲಿ ನಿಂತು ಸ್ನಾನ ಮಾಡುತ್ತಿದ್ದ ವೇಳೆ ತಗ್ಗಿನಲ್ಲಿ ಜಾರಿ ಬಿದ್ದು ಮೃತಪಟ್ಟಿದ್ದಾರೆ’ ಎಂದು ಲೋಕಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಹಾವೇರಿ ತಾಲ್ಲೂಕಿನ ಮಣ್ಣೂರು ಗ್ರಾಮದ ಬಳಿ ವರದಾ ನದಿಯಲ್ಲಿ ಮುಳುಗಿ ಬಸವರಾಜ ಅಂಗಡಿ (22) ಎಂಬುವವರು ಮೃತಪಟ್ಟಿದ್ದಾರೆ. ಎತ್ತುಗಳ ಮೈತೊಳೆಯಲು ಹೋಗಿದ್ದ ವೇಳೆ ದುರ್ಘಟನೆ ನಡೆದಿದೆ ಎಂದು ಗುತ್ತಲ ಠಾಣೆ ಪೊಲೀಸರು ತಿಳಿಸಿದರು.



ಪ್ರಮೋದ



ಮನೋಜ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಮೌಳಂಗಿ ಸಮೀಪದ ಕಾಳಿ ನದಿಯ ಸಂಗಮ ಪ್ರದೇಶದಲ್ಲಿ ಗೆಳೆಯರೊಂದಿಗೆ ಸ್ನಾನಕ್ಕೆ ತೆರಳಿದ್ದ ನವಾಜ್ ನಾಯ್ಕ (18) ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚೀಕಲಪರ್ವಿ ಗ್ರಾಮದಲ್ಲಿ ಗುರುವಾರ ಸಂಕ್ರಾಂತಿ ಹಬ್ಬದ ನಿಮಿತ್ತ ಪುಣ್ಯಸ್ನಾನಕ್ಕಾಗಿ ತುಂಗಭದ್ರಾ ನದಿಗೆ ಇಳಿದಿದ್ದ ಯುವಕ ನೀರುಪಾಲಾಗಿದ್ದಾರೆ.

ಮೃತ ಯುವಕನನ್ನು ಮಾನ್ವಿ ಪಟ್ಟಣದ ವಂಶಿ ರೆಡ್ಡಿ ರಾಜಲಬಂಡ (28) ಎಂದು ಗುರುತಿಸಲಾಗಿದೆ. ವಂಶಿ ರೆಡ್ಡಿ ಅವರು ಸ್ನಾನಕ್ಕಾಗಿ ನೀರಿಗೆ ಇಳಿದಾಗ ಮುಳುಗಿ ಮೃತಪಟ್ಟಿದ್ದಾರೆ ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿದರು.

ಬಾಲಕ ಸಾವು

ಕಲಬುರಗಿ ಜಿಲ್ಲೆಯ ಶಹಾಬಾದ್‌ನಲ್ಲಿ ಸಂಕ್ರಾಂತಿ ಹಬ್ಬದ ಅಂಗವಾಗಿ ಕಾಗಿಣಾ ನದಿಯಲ್ಲಿ ಈಜಲು ಹೋದ ಹನುಮಾನ ನಗರದ ನಿವಾಸಿ ವೆಂಕಟೇಶ (16) ಮೃತಪಟ್ಟಿದ್ದಾನೆ.

ಅಗ್ನಿಶಾಮಕ ದಳ ಮತ್ತು ಪೊಲೀಸರು ಧಾವಿಸಿ ಬಾಲಕನ ಮೃತದೇಹವನ್ನು ಶಹಾಬಾದ್ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದ್ದಾರೆ. ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡ ಅವರ ತಂದೆ-ತಾಯಿ ನೀರಿನಂತೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

‘ಹಂಪಿ ಉತ್ಸವದಲ್ಲಿ ಡ್ರೋನ್ ಶೋ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಹಂಪಿಯಲ್ಲಿ ಫೆಬ್ರುವರಿ 13ರಿಂದ 15ರವರೆಗೆ ನಡೆಯುವ ಹಂಪಿ ಉತ್ಸವದಲ್ಲಿ ಮೂರು ಸಾವಿರ ಡ್ರೋನ್ ಬಳಸಿ ಡ್ರೋನ್ ಶೋ ಪ್ರದರ್ಶಿಸಲಾಗುವುದು. ಗಾಳಿಪಟ ಉತ್ಸವ ಕೂಡ ನಡೆಸಲಾಗುವುದು. ಎರಡೂ ಕಡೆ ಇದೇ ಮೊದಲ ಬಾರಿಗೆ ಆಯೋಜಿಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

‘ಕಳೆದ ಸಲ ಮೈಸೂರು ದಸರಾದಲ್ಲಿ ಡ್ರೋನ್ ಶೋ ಜನಪ್ರಿಯತೆ ಗಳಿಸಿತ್ತು. ಅದಕ್ಕೆ ಹಂಪಿ ಇದೇ ಮೊದಲ ಬಾರಿಗೆ ದಕ್ಷಿಣಯಿಂದ ಈ ಪ್ರದರ್ಶನ ಆಯೋಜಿಸುವವರನ್ನು ಕರೆಸಲಾಗುತ್ತಿದೆ. ಹೆಲಿಕಾಪ್ಟರ್ ಹಾರಾಟ, ಸಾಹಸ ಕ್ರೀಡೆಗಳು, ದೋಣಿವಿಹಾರ, ಶ್ವಾನ, ಕುರಿ ಪ್ರದರ್ಶನಗಳು ಈ ಬಾರಿಯೂ ಇರಲಿವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಚಿಟಿಕೆ ಸುದ್ದಿ

ಬಾಲಕನಿಗೆ ಲೈಂಗಿಕ ದೌರ್ಜನ್ಯ: ಶಿಕ್ಷಕನ ಬಂಧನ

ಮೂಡುಬಿದಿರೆ (ದಕ್ಷಿಣ ಕನ್ನಡ): ವಿಶೇಷ ತರಗತಿಯ ನೆಪದಲ್ಲಿ ವಿದ್ಯಾರ್ಥಿಯೊಬ್ಬನನ್ನು ತನ್ನ ರೂಮ್‌ಗೆ ಕರೆದೊಯ್ದು ನಗ್ನ ವಿಡಿಯೊ ಚಿತ್ರೀಕರಿಸಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇರೆಗೆ ಶಿಕ್ಷಕನನ್ನು ಮೂಡುಬಿದಿರೆ ಪೊಲೀಸರು ಬಂಧಿಸಿದ್ದಾರೆ.

ಶಿಕ್ಷಕ ಅಲ್ತಾಫ್ ಬಂಧಿತ ಆರೋಪಿ. ಗ್ರಾಮದ ಶಾಲೆಯೊಂದರಲ್ಲಿ ಸಂತ್ರಸ್ತ ಬಾಲಕ 10ನೇ ತರಗತಿಯಲ್ಲಿ ಓದುತ್ತಿದ್ದು, ಗಣಿತ ವಿಷಯದಲ್ಲಿ ಹೆಚ್ಚು ಅಂಕ ಕೊಡಿಸುವುದಾಗಿ ನಂಬಿಸಿದ ಶಿಕ್ಷಕ ಅಲ್ತಾಫ್, ಬಾಲಕನನ್ನು ತನ್ನ ಕೊಠಡಿಗೆ ಕರೆಸಿಕೊಂಡು ಈ ಕೃತ್ಯವೆಸಗಿದ್ದಾನೆ. ಬಾಲಕ ಪ್ರತಿರೋಧಿಸಿದಾಗ ವಿಷಯ ಯಾರಿಗಾದರೂ ತಿಳಿಸಿದರೆ ಪರೀಕ್ಷೆ ಬರೆಯಲು ಬಿಡುವುದಿಲ್ಲ ಮತ್ತು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ, ಬೆಲ್ಟ್‌ನಿಂದ ಹಲ್ಲೆ ನಡೆಸಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಲವು ದಿನಗಳಿಂದ ಬಾಲಕನ ಮಾನಸಿಕ ಹಾಗೂ ದೈಹಿಕ ಆರೋಗ್ಯದಲ್ಲಿ ಏರುಪೇರಾದಾಗ ಅನುಮಾನಗೊಂಡ ಪೋಷಕರು ಆಸ್ಪತ್ರೆಗೆ ದಾಖಲಿಸಿದ್ದರು. ವೈದ್ಯರು ಮತ್ತು ಪೋಷಕರ ವಿಚಾರಣೆ ವೇಳೆ ಬಾಲಕನು ನಡೆದ ಘಟನೆಯನ್ನು ಬಾಯಿಬಿಟ್ಟಿದ್ದಾನೆ. ಮೂಡುಬಿದಿರೆ ಪೊಲೀಸರು ಆರೋಪಿ ಶಿಕ್ಷಕನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಿದ್ದಾರೆ.

‘17ರಂದು ಸಮಾವೇಶ’

ಬಳ್ಳಾರಿ: ‘ಜನವರಿ 10ರಂದು ಬಳ್ಳಾರಿಯಲ್ಲಿ ನಡೆದಿದ್ದ ಘರ್ಷಣೆ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜನವರಿ 17ರಂದು ಎಪಿಎಂಸಿ ಆವರಣದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ನಡೆಸಲಾಗುವುದು’ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್ ತಿಳಿಸಿದರು.



ರವಿಕುಮಾರ್

‘ಶಾಸಕ ಭರತ್ ರೆಡ್ಡಿ ಅವರನ್ನು ಬಂಧಿಸುವಂತೆ ಸಮಾವೇಶದಲ್ಲಿ ಆಗ್ರಹಿಸಲಾಗುವುದು. ಇದರ ಬಳಿಕ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದು’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಹೋರಾಟದ ಭಾಗವಾಗಿ ಪಾದಯಾತ್ರೆ ಆಯೋಜಿಸುವ ಬಗ್ಗೆಯೂ ಚಿಂತನೆ ನಿರ್ಧರಿಸಲಾಗುವುದು. ಇದರ ಬಗ್ಗೆ ಪಕ್ಷದ ಮುಖಂಡರ ಜೊತೆ ಚರ್ಚಿಸಲಾಗುವುದು’ ಎಂದು ಶಾಸಕ ಜನಾರ್ದನ ರೆಡ್ಡಿ ತಿಳಿಸಿದರು.

ನಿಧನ ವಾರ್ತೆ

ಶಾಂತವೀರಶ್ರೀ



ತಾಳಿಕೋಟೆ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಹಿರೂರು ಗ್ರಾಮದ ಅನ್ನದಾನೇಶ್ವರ ಸಂಸ್ಥಾನ ಹಿರೇಮಠದ 35ನೇ ಪೀಠಾಧಿಪತಿ ಶಾಂತವೀರ ಶಿವಯೋಗಿ ಶಿವಾಚಾರ್ಯರು ಗುರುವಾರ ನಿಧನರಾದರು.

ಶ್ರೀಮಠದ ಆವರಣದಲ್ಲಿ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಶ್ರೀಮಠ ತಿಳಿಸಿದೆ.

1925ರಲ್ಲಿ ಹುನಗುಂದ ತಾಲ್ಲೂಕಿನ ವೀರಾಪುರದಲ್ಲಿ ಜನಿಸಿದ ಶ್ರೀಗಳು, 1945ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿದ್ದರು.

1948ರಲ್ಲಿ ಹಿರೂರು ಮಠದ ಪೀಠಾಧ್ಯಕ್ಷರಾದರು. 331 ಮಠಗಳ ನೇರ ಉಸ್ತುವಾರಿ ಶ್ರೀಮಠದ್ದಾಗಿದೆ.

ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಡ್ಜ್ ಕಾಗಿನೆಲೆ ಕನಕಗುರು ಪೀಠ

ತಿಂಥಣಿ: ಸಿದ್ದರಾಮನಂದ ಸ್ವಾಮೀಜಿ ನಿಧನ

ಪ್ರಜಾವಾಣಿ ವಾರ್ತೆ

ರಾಯಚೂರು: ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಡ್ಜ್ ಕಾಗಿನೆಲೆ ಕನಕ ಗುರುಪೀಠದ ಸಿದ್ದರಾಮನಂದ ಸ್ವಾಮೀಜಿ (49) ಅವರು ಗುರುವಾರ ಬೆಳಗಿನ ಜಾವ ಹೃದಯಾಘಾತದಿಂದಾಗಿ ನಿಧನರಾದರು.



ಸಿದ್ದರಾಮನಂದ ಸ್ವಾಮೀಜಿ

ಬೆಳಗಿನ ಜಾವ 3.40ರ ಸುಮಾರಿಗೆ ಎದೆ ನೋವು ಕಾಣಿಸಿಕೊಂಡ ತಕ್ಷಣವೇ ಸ್ವಾಮೀಜಿ ಅವರನ್ನು ಲಿಂಗಸುಗೂರು ಆಸ್ಪತ್ರೆಗೆ ಕರೆದೊಯ್ದು ಹೋಗಲಾಯಿತು. ಆದರೆ, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಕಲಮರಹಳ್ಳಿಯ ಮಡಿವಾಳಪ್ಪ – ಜಯಮ್ಮ ದಂಪತಿಯ 2ನೇ ಪುತ್ರರಾಗಿದ್ದ ಸಿದ್ದರಾಮನಂದ ಸ್ವಾಮೀಜಿ ಅವರ ಪೂರ್ವಾಶ್ರಮದ ಹೆಸರು ಮೋಹನ್ ಪ್ರಧಾನ.

ಆಧ್ಯಾತ್ಮಿಕ ಹಸಿವಿನಿಂದಾಗಿ 18ನೇ ವಯಸ್ಸಿಗೆ ಮನೆ ಬಿಟ್ಟು ಸಂಚಾರ ಆರಂಭಿಸಿದರು. ಜೈನ, ಕ್ರೈಸ್ತ, ಬ್ರಹ್ಮಕುಮಾರಿ ಪಂಥಗಳ ಪ್ರಭಾವಕ್ಕೆ ಒಳಗಾಗಿದ್ದ ಅವರು, ಶರಣ ಸಾಹಿತ್ಯದ ಜೊತೆಗೆ ಅನೇಕ ಧರ್ಮ ಗ್ರಂಥಗಳ ಅಧ್ಯಯನ ಮಾಡಿದ್ದರು.

ಚಿತ್ರದುರ್ಗದ ಮುರುಘಾಮಠದಲ್ಲಿ ಕೆಲ ಕಾಲ ಅಧ್ಯಯನ ನಡೆಸಿದ ಬಳಿಕ ನಾಲ್ಕು ವರ್ಷ ಸಿಂಧನೂರಿನಲ್ಲಿ ವಾಸ್ತವ್ಯ ಮಾಡಿದರು. ನಂತರ ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಡ್ಜ್ ಹತ್ತಿರ 2011ರಲ್ಲಿ ಕಾಗಿನೆಲೆ ಕನಕ ಗುರುಪೀಠ ಸ್ಥಾಪನೆ ಮಾಡಿದರು.

ಪ್ರತಿ ವರ್ಷ ಮಠದ ಆವರಣದಲ್ಲಿ ಜನವರಿ 12, 13, 14ರಂದು ‘ಹಾಲುಮತ ಸಂಸ್ಕೃತಿ ವೈಭವ’ ಕಾರ್ಯಕ್ರಮ ನಡೆಸುತ್ತಿದ್ದರು. ಈ ವರ್ಷವೂ ಯಶಸ್ವಿಯಾಗಿ ನಡೆಸಿದ್ದರು.

ಪೀಠದಲ್ಲಿ ಪ್ರಾಥಮಿಕ ಶಾಲೆಯಿಂದ ಪಿಯುವರೆಗೂ ಶಿಕ್ಷಣ ಆರಂಭಿಸಿ ಮಕ್ಕಳಿಗೆ ಉಚಿತ ದಾಸೋಹದ ವ್ಯವಸ್ಥೆ ಮಾಡಿದ್ದರು. ಬಾಗಲಕೋಟೆ ಜಿಲ್ಲೆಯ ಗುಡೂರು ಹಾಗೂ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಪದವಿ ಕಾಲೇಜು ಆರಂಭಿಸಿದ್ದಾರೆ. ಕೊಪ್ಪಳ ಜಿಲ್ಲೆಯ ಹಾಲವರ್ತಿ ಹಾಗೂ ಕುಷ್ಟಗಿ ತಾಲ್ಲೂಕಿನ ಬಾದಿಮನಾಳದಲ್ಲಿ ಶಾಖಾಮಠ ಸ್ಥಾಪನೆ ಮಾಡಿದ್ದಾರೆ.

ಸಾಮೂಹಿಕ ವಿವಾಹ, ಆರೋಗ್ಯ ಶಿಬಿರ, ರಕ್ತದಾನ ಆಯೋಜನೆ ಮಾಡುವ ಮೂಲಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಸಾಹಿತ್ಯ, ಸಮಾಜಸೇವೆ ಮಾಡಿದ ಗಣ್ಯರಿಗೆ ಭಾಸ್ಕರ, ಕನಕರತ್ನ, ಸಿದ್ಧಶ್ರೀ ಪ್ರಶಸ್ತಿ ನೀಡಿ ಗೌರವಿಸಿದ್ದರು.



ಸಿದ್ದರಾಮನಂದ ಸ್ವಾಮೀಜಿ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ

ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ

ತಿಂಥಣಿಯ ಕನಕ ಗುರು ಪೀಠದ ಆವರಣದಲ್ಲಿ ಅಪಾರ ಭಕ್ತ ಸಮೂಹದ ಸಮ್ಮುಖದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಸಿದ್ದರಾಮನಂದ ಸ್ವಾಮೀಜಿ ಅಂತ್ಯಕ್ರಿಯೆ ಸಂಜೆ ನಡೆಯಿತು. ವೈದ್ಯಕೀಯ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ ಹಾಗೂ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಅವರು ಸರ್ಕಾರದ ಪ್ರತಿನಿಧಿಯಾಗಿ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು. ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಗಣ್ಯರು ಸ್ವಾಮೀಜಿ ಅಂತಿಮ ದರ್ಶನ ಪಡೆದರು.

110 ರಾಮಪತ್ರೆ ಜಡ್ಡಿ ಕಾಡು

ಒಂದನೇ ಪುಟದಿಂದ...

2025ರ ಅಕ್ಟೋಬರ್ 25ರಂದು ಮೂರು ದಿನ ಪರಿಸರ ಕಾರ್ಯಕರ್ತ ನರಸಿಂಹ ಹೆಗಡೆ ವಾನಳ್ಳಿ ಮತ್ತು ತಂಡದ ಜೊತೆ ಬೆಟ್ಟ ಮತ್ತು ಅಘನಾಶಿನಿ ನದಿ ಕೊಳ್ಳದಲ್ಲಿ ಅಧ್ಯಯನ ನಡೆಸಿದ ಬಳಿಕ ಈ ವಿಶಿಷ್ಟ ಕಾಡುಗಳ ಕುರಿತ ವಿಷಯವನ್ನು ದೃಢಪಡಿಸಿದ್ದಾರೆ.

‘ವಿನಾಶದ ಅಂಚಿನಲ್ಲಿರುವ ದಾಸಪತ್ರೆ, ಘರ್ಜನ್, ಒಂದಂಕಿ, ಕಂಪು ನೇರಳೆ, ರಾಮಪತ್ರೆ ಸೇರಿ ಅಪರೂಪದ ವೃಕ್ಷ ಪ್ರಭೇದಗಳಿಗೆ ಕಾಡುಗಳು ಆಶ್ರಯತಾಣವಾಗಿದೆ. ಈ ಹಿಂದೆ ಹೊನ್ನಾವರದ ಸ್ನೇಹಕುಂಜ ಸಂಸ್ಥೆಯು ಅಧ್ಯಯನ ತಂಡವು ಈ ಕಾಡುಗಳನ್ನು ಗುರುತಿಸಿ ಪಾರಿಸರಿಕ ಪುನಶ್ಚೇತನ ಕಾರ್ಯವನ್ನು ಆರಂಭಿಸಿತ್ತು. ಸ್ಥಳೀಯ ಜನರು ಶತಮಾನಗಳಿಂದ ಹುಲಿ ದೇವರು, ಜಟಕ, ಅಮ್ಮನವರು ಮುಂತಾದ ದೇವರ ಕಾಡುಗಳ ರೂಪದಲ್ಲಿ ಇವುಗಳನ್ನು ರಕ್ಷಿಸಿಕೊಂಡು ಬಂದಿರುವುದು ವಿಶೇಷ’ ಎಂದು ತಿಳಿಸಿದ್ದಾರೆ.

‘ಈ ಪಾರಿಸರಿಕ ಸೇವೆಗೆ ಧನಸಹಾಯ ನೀಡುವ ಮೂಲಕ ಅಥವಾ ಕಂಪನಿಗಳ ಸಾಮಾಜಿಕ ಜವಾಬ್ದಾರಿ ನಿಧಿಯ ಈ ಪ್ರದೇಶದ ಜನರಿಗೆ ಆರ್ಥಿಕ ನೆರವು ನೀಡಬೇಕು’ ಎಂದು ಅವರು ಕೋರಿದ್ದಾರೆ.

‘ರಾಮಪತ್ರೆಯು ಒಂದು ಎಕರೆ ಕಾಡು ಇದ್ದರೆ ಅದರಿಂದ ಸುತ್ತಮುತ್ತಲಿನ ನೂರು ಎಕರೆ ಜಲಾನಯನ ಪ್ರದೇಶ, ನಿತ್ಯ ಹರಿದ್ವರ್ಣ ಕಾಡು ಇರಲಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 110 ರಾಮಪತ್ರೆ ಜಡ್ಡಿ ಕಾಡು ಗುರುತಿಸಲಾಗಿದೆ.

ಇಲ್ಲಿರುವ ಸಸ್ಯ ಪ್ರಭೇದಗಳನ್ನು ಬೇರೆ ಕಾಡಿನಲ್ಲಿ ನೆಟ್ಟು ಬೆಳೆಸುವುದು ಅಸಾಧ್ಯ. ಬೇರೆ ವೃಕ್ಷ ಪ್ರಭೇದಗಳನ್ನು ಇಲ್ಲಿ ನೆಟ್ಟು ಬೆಳೆಸಲು ಆಗದಂಥ ಸಂಕೀರ್ಣ ವ್ಯವಸ್ಥೆ ಇದೆ. ಇದು ಒಮ್ಮೆ ನಾಶವಾದರೆ ಯಾವುದೇ ಕಾರಣಕ್ಕೂ ಪುನರ್ ನಿರ್ಮಿಸಲು ಆಗುವುದಿಲ್ಲ. ಇಂಥ ಜಡ್ಡಿ ಕಾಡುಗಳ ರಕ್ಷಣೆ ಇಂದಿನ ತುರ್ತಾಗಿದೆ’ ಎಂದು ನರಸಿಂಹ ಹೆಗಡೆ ವಾನಳ್ಳಿ ತಿಳಿಸಿದ್ದಾರೆ.

ಅಧ್ಯಯನ ತಂಡದಲ್ಲಿ ಪರಿಸರ ಕಾರ್ಯಕರ್ತರಾದ ಗೌರೀಶ ಭಟ್, ಅಮಿತ ಪಟಾಣ್, ಶ್ರೀಧರ ಪಟಾರ, ವಿನಾಯಕ ವೈದ್ಯ, ಅರುಣ ನಾಯ್ಕ, ಆನಂದ ಹೆಗಡೆ, ಕವಿತಾ ಭಟ್ ಹಾಗೂ ನಟರಾಜ ಹೆಗಡೆ ಕಾರ್ಯನಿರ್ವಹಿಸಿದ್ದರು.

‘ಕೇಂದ್ರದಿಂದ ಚನ್ನಮ್ಮ ವಿಜಯೋತ್ಸವ’

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ‘ಆಂಗ್ಲೋ-ಕಿತ್ತೂರು ಯುದ್ಧದಲ್ಲಿ ರಾಣಿ ಚನ್ನಮ್ಮ ಗೆಲುವು ದಾಖಲಿಸಿದ್ದರ ನೆನಪಿಗಾಗಿ ಮುಂದಿನ ವರ್ಷದಿಂದ ಕೇಂದ್ರ ಸರ್ಕಾರದಿಂದಲೇ ವಿಜಯೋತ್ಸವ ದಿನ ಆಚರಿಸಲಾಗುವುದು. ಈ ಕುರಿತು ಪ್ರಧಾನಿ ಜತೆ ಚರ್ಚಿಸುತ್ತೇನೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಗುರುವಾರ ಆಯೋಜಿಸಿದ್ದ ಹರ ಜಾತ್ರೆ, ಕಿತ್ತೂರು ರಾಣಿ ಚನ್ನಮ್ಮ ವಿಜಯೋತ್ಸವದ ದ್ವಿಶತಮಾನೋತ್ಸವದಲ್ಲಿ ಮಾತನಾಡಿದರು.

‘ಕಿತ್ತೂರು ಚನ್ನಮ್ಮನ ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕಿದೆ’ ಎಂದರು. ಹಾವೇರಿಯ ‘ಉತ್ಸವ’ ರಾಕ್ ಗಾರ್ಡನ್‌ನ ಕಲಾ ನಿರ್ದೇಶಕ ಡಾ.ವೇದಾರಾಣಿ ದಾಸನೂರು ಅವರಿಗೆ ರಾಜ್ಯಮಟ್ಟದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರಾಜ್ಯಸಭಾ ಸದಸ್ಯ ವೀರಣ್ಣ ಕಡಾಡಿ, ಬಿಜೆಪಿ ಮುಖಂಡ ಕೆ.ಎಸ್. ಈಶ್ವರಪ್ಪ, ಮತ್ತಿತರರು ಹಾಜರಿದ್ದರು.



ಹರ ಜಾತ್ರೆಯಲ್ಲಿ ವಚನಾನಂದ ಸ್ವಾಮೀಜಿ, ಸಂಸದ ಬಸವರಾಜ ಬೊಮ್ಮಾಯಿ, ಸಚಿವ ವಿ.ಸೋಮಣ್ಣ, ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ಪೀಠಗಳ ನಡುವೆ ದ್ವೇಷವಿಲ್ಲ’

ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠಗಳೆರಡೂ ಒಂದೇ. ಈ ಪೀಠಗಳು ಹಾಗೂ ಪೀಠಾಧ್ಯಕ್ಷರ ನಡುವೆ ದ್ವೇಷ ಇಲ್ಲ. ಕೂಡಲಸಂಗಮದ ಪೀಠಾಧ್ಯಕ್ಷರು ಸಮುದಾಯ ಸಂಘಟನೆ ಮಾಡಿದ್ದಾರೆ. ಅವರೂ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ’ ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

ಗುಂಪು ಘರ್ಷಣೆ: ದೂರು

ಬೆಳಗಾವಿ: ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೇಶನೂರು ಗ್ರಾಮದಲ್ಲಿ ಬುಧವಾರ, ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುಂಪುಗಳ ನಡುವೆ ಕಲ್ಲು ತೂರಾಟ ನಡೆದಿದೆ. ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಗ್ರಾಮದಲ್ಲಿ ಪೊಲೀಸರು ಬಿಗಿಬಂದೋಬಸ್ತ್ ಮಾಡಿದ್ದಾರೆ.

ಗ್ರಾಮದಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕಾಗಿ ಪರಿಶಿಷ್ಟ ಪಂಗಡದ ಕೆಲ ಯುವಕರು ಜಾಗದ ಸ್ವಚ್ಛತೆ ನಡೆಸಿದ್ದರು. ಆಗ ತಕರಾರು ತೆಗೆದ ಪಕ್ಕದ ಮನೆಯವರು, ‘ಪರಿಶಿಷ್ಟ ಜಾತಿಯವರ ಮನೆಯ ಹತ್ತಿರ ವಾಲ್ಮೀಕಿ ಸಮುದಾಯ ಭವನ ಬೇಡ’ ಎಂದು ವಿರೋಧಿಸಿದರು. ಎರಡೂ ಕಡೆಯವರ ನಡುವಿನ ಮಾತು ತಾರಕಕ್ಕೇರಿತು. ವಿಕೋಪಕ್ಕೆ ತಿರುಗಿ, ಬಡಿದಾಡಿಕೊಂಡರು. ನಂತರ ಗುಂಪೊಂದು ಸದಾಶಿವ ಭಜಂತ್ರಿ ಎಂಬುವರ ಮನೆ ಮೇಲೆ ಕಲ್ಲು ತೂರಾಟ ಆರಂಭಿಸಿತು. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು.

‘ಸದಾಶಿವ ಭಜಂತ್ರಿ ಅವರ ಮನೆಯ ಬಾಗಿಲು, ಕಿಟಕಿ, ಶೌಚಾಲಯದ ಬಾಗಿಲುಗಳಿಗೆ ಹಾನಿಯಾಗಿದೆ. ಅಕ್ಕಪಕ್ಕದ ಮನೆಯವರಿಗೂ ಗಾಯಗಳಾಗಿವೆ. ನನ್ನ ನಾಲ್ವರು ಮಕ್ಕಳ ಮೇಲೆ ಹಲ್ಲೆ ಮಾಡಿದ್ದಾರೆ’ ಎಂದು ಶೋಭಾ ಭಜಂತ್ರಿ ಎಂಬುವರು 17 ಜನರ ವಿರುದ್ಧ ದೂರು ನೀಡಿದ್ದಾರೆ.

‘ಇದಕ್ಕೆ ಪ್ರತಿಯಾಗಿ ಪರಿಶಿಷ್ಟ ಪಂಗಡದ ಲಕ್ಷ್ಮೀ ತಳವಾರ ಅವರು ಆರು ಜನರ ವಿರುದ್ಧ ದೂರು ನೀಡಿದ್ದಾರೆ. ‘ವಾಲ್ಮೀಕಿ ಮೂರ್ತಿ ಮತ್ತು ಸುತ್ತಲಿನ ಜಾಗ ಸ್ವಚ್ಛಗೊಳಿಸುವ ವೇಳೆ ಆರು ಮಂದಿ ಆರೋಪಿಗಳು ಬಂದು, ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ. ವಿಡಿಯೊಗಳನ್ನು ನೋಡಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಸ್‌ಪಿ ಕೆ.ರಾಮರಾಜನ್ ಹೇಳಿದ್ದಾರೆ.

ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವಕ್ಕೆ ಅದ್ದೂರಿ ಚಾಲನೆ

ಕಪಿಲಾ ತಟದಲ್ಲಿ ಭಕ್ತಿಯ ಸಂಗಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರು ದಿನಗಳು ವಿವಿಧ ಕಾರ್ಯಕ್ರಮ
- ಕೃಷಿ ಮೇಳ, ವಸ್ತು ಪ್ರದರ್ಶನ ಆಯೋಜನೆ
- 25 ಲಕ್ಷ ಮಂದಿಗೆ ದಾಸೋಹದ ವ್ಯವಸ್ಥೆ

ಸುತ್ತೂರು (ಮೈಸೂರು ಜಿಲ್ಲೆ): ಕಪಿಲಾ ನದಿ ತಟದಲ್ಲಿರುವ ಸುತ್ತೂರಿನಲ್ಲಿ ಸಂಕ್ರಾಂತಿಯ ದಿನವಾದ ಗುರುವಾರ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವಕ್ಕೆ ಅದ್ದೂರಿ ಚಾಲನೆ ದೊರೆಯಿತು. ಮೊದಲ ದಿನವೇ ಸಾವಿರಾರು ಭಕ್ತರು ಜಾತ್ರೆಗೆ ಬಂದರು.

ಸಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿರುವ ‘ವೀರಸಿಂಹಾಸನ ಮಹಾಸಂಸ್ಥಾನ’ದ ಜೊತೆಗೆ ಇಡೀ ಊರೇ ತಳಿರು ತೋರಣಗಳಿಂದ ಸಿಂಗಾರಗೊಂಡಿದ್ದು, ಜಾತ್ರೆಯ ಸಂಭ್ರಮಕ್ಕೆ ಸಾಕ್ಷಿಯಾಗಿತ್ತು.

ಮಠದ ಆವರಣದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವ ಮೂರ್ತಿಯನ್ನು ಜಾನಪದ ಕಲಾತಂಡಗಳೊಂದಿಗೆ ಕರ್ತೃ ಗದ್ದುಗೆಗೆ ಕರೆತರುವ ಮೂಲಕ ಸಂಜೆ ಜಾತ್ರಾ ಮಹೋತ್ಸವ ಆರಂಭವಾಯಿತು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಂಸದರಾದ ಜಗದೀಶ ಶೆಟ್ಟರ್ ಹಾಗೂ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನಗಾರಿ ಬಾರಿಸಿ ಚಾಲನೆ ನೀಡಿದರು.

ಸುತ್ತೂರು ಜಾತ್ರೆಯು ಅರಿವಿನ ಉತ್ಸವವೂ ಆಗಿದ್ದು, ಮೊದಲ ದಿನ ಕೃಷಿ ಮೇಳ ಹಾಗೂ ವಸ್ತುಪ್ರದರ್ಶನಗಳು ಜನರ ಜ್ಞಾನ ಹೆಚ್ಚಿಸಿದವು. 15 ಎಕರೆಯಷ್ಟು ವಿಶಾಲವಾದ ಪ್ರದೇಶದಲ್ಲಿ ವಿವಿಧ ತಾಕುಗಳ ಪ್ರಾತ್ಯಕ್ಷಿಕೆ, ಹೊಸ ತಳಿಗಳ ಪ್ರಯೋಗಗಳು ರೈತರನ್ನು ಆಕರ್ಷಿಸಿದವು. 320ಕ್ಕೂ ಹೆಚ್ಚು ಮಳಿಗೆಗಳಲ್ಲಿನ ವೈವಿಧ್ಯಮಯ ಪ್ರದರ್ಶನ ಜನರನ್ನು ಸೆಳೆಯಿತು. ಜೊತೆಗೆ ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ ಹಾಗೂ ಕಪಿಲಾ ನದಿಯಲ್ಲಿ ದೋಣಿ ವಿಹಾರಕ್ಕೂ ಚಾಲನೆ ದೊರೆಯಿತು.

ಜಾತ್ರೆಯು ದೇಸಿ ಸಂಸ್ಕೃತಿಯ ಪ್ರತಿಬಿಂಬವೂ ಆಗಿದೆ. ಶನಿವಾರದಿಂದ ಮೂರು ದಿನಗಳು ಜಾನುವಾರು ಜಾತ್ರೆಯೂ ಇರಲಿದೆ. ಜೊತೆಗೆ ಭಜನಾ ಮೇಳ, ರಂಗೋಲಿ ಸ್ಪರ್ಧೆಯಂತಹ ದೇಸಿ ಆಟಗಳು, ನಿತ್ಯ ನಾಲ್ಕಾರು ವೇದಿಕೆಗಳಲ್ಲಿ ಪೌರಾಣಿಕ ನಾಟಕ ಸೇರಿ ಸಾಂಸ್ಕೃತಿಕ ಕಾರ್ಯಕ್ರಮಗಳು ರಂಜಿಸಲಿವೆ.

ನಿತ್ಯ ದಾಸೋಹ: ಜಾತ್ರೆ ನಿಮಿತ್ತ ಶ್ರೀಮಠ ದಾಸೋಹವನ್ನು ಗುರುವಾರ ಆರಂಭಗೊಂಡಿತು. ಜ. 20 ರವರೆಗೆ ಆರು ದಿನಗಳು ಜಾತ್ರೆಯಲ್ಲಿ ನಿತ್ಯ ಹೊರ ಜಿಲ್ಲೆ–ರಾಜ್ಯಗಳಿಂದಲೂ ಭಕ್ತರು ಬರಲಿದ್ದಾರೆ. ಈ ಬಾರಿ 25 ಲಕ್ಷ ಮಂದಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ನೂರಾರು ಬಾಣಸಿಗರು ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು, ಮಠದ ಭಕ್ತರು ದಾಸೋಹಕ್ಕೆ ಉದಾರ ಕಾಣಿಕೆ ನೀಡಿದ್ದಾರೆ.



ಸುತ್ತೂರು ಜಾತ್ರೆ ಅಂಗವಾಗಿ ಆಯೋಜಿಸಿರುವ ಕೃಷಿ ಮೇಳವನ್ನು ಉದ್ಘಾಟಿಸಿದ ಸಂಸದ ಜಗದೀಶ ಶೆಟ್ಟರ್ ಮಳಿಗೆಯೊಂದರಲ್ಲಿ ಮಾಹಿತಿ ಪಡೆದರು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಜೊತೆಗಿದ್ದರು

ಸಾಮೂಹಿಕ ವಿವಾಹ ಇಂದು

ಜಾತ್ರೆಯ ಆಕರ್ಷಣೆಗಳಲ್ಲಿ ಒಂದಾದ ಸಾಮೂಹಿಕ ವಿವಾಹ ಕಾರ್ಯಕ್ರಮವು ಶುಕ್ರವಾರ (ಜ.16) ಬೆಳಿಗ್ಗೆ 10ಕ್ಕೆ ನಡೆಯಲಿದೆ. ಜಾತಿ–ಧರ್ಮಗಳ ಹಂಗಿಲ್ಲದೆ ನೂರಾರು ಜೋಡಿ ವೈವಾಹಿಕ ಬದುಕಿಗೆ ಕಾಲಿಡುತ್ತಿವೆ.

ವಿಜಾಪುಗಳ ಸಾನ್ನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದು, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಶನಿವಾರ (ಜ.17) ಬೆಳಿಗ್ಗೆ 11ಕ್ಕೆ ರಥೋತ್ಸವ ನಡೆಯಲಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಗುಡ್ಡದಂತೆ ಎತ್ತರವಾಗುವುದರಲ್ಲಿ ನನಗೆ ಆನಂದವಿಲ್ಲ. ಸುತ್ತಮುತ್ತಲಿನ ನೆಲದ ಮೇಲೆ ಹರಡಿಹೋಗುವುದರಲ್ಲಿಯೇ ನನಗೆ ಆನಂದ.

–ವಿನೋಬಾ ಭಾವೆ

ಸಂಪಾದಕೀಯ

ವಾಹನಗಳಲ್ಲಿ 'ವಿಶೇಷ ದೀಪ'ಗಳ ಬಳಕೆ ಅಪಾಯಕಾರಿ ಸಂಸ್ಕೃತಿ ಕೊನೆಗೊಳ್ಳಲಿ

ಬೆಂಗಳೂರು ಸಂಚಾರ ಪೊಲೀಸರು ಸಾರ್ವಜನಿಕ ವಾಹನಗಳಲ್ಲಿ ಅಕ್ರಮ ಲೈಟ್‌ಗಳ ಬಳಕೆಯ ವಿರುದ್ಧ ನಡೆಸುತ್ತಿರುವ ಆಂದೋಲನ ರೂಪದ ಕಾರ್ಯಾಚರಣೆಯು ಸಂಚಾರದ ಶಿಸ್ತನ್ನು ರೂಪಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಅನಧಿಕೃತ ಎಲ್‌ಇಡಿ ಬಾರ್‌ಗಳು, ಹೆಚ್ಚು ತೀಕ್ಷ್ಣತೆಯ ಹೆಡ್‌ಲೈಟ್‌ಗಳು ಮತ್ತು ಕೆಂಪು–ನೀಲಿ ಸ್ಟ್ರೋಬ್ ಲೈಟ್‌ಗಳನ್ನು ಬಳಸಿದ ಕಾರಣಕ್ಕಾಗಿ ಒಂದು ಸಾವಿರಕ್ಕೂ ಹೆಚ್ಚು ವಾಹನ ಚಾಲಕರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಸಂಚಾರ ಪೊಲೀಸರ ಈ ಕಾರ್ಯಾಚರಣೆಯು, ರಸ್ತೆಗಳು ಎಲ್ಲ ನಾಗರಿಕರ ಬಳಕೆಗೆ ಇರುವ ಸ್ಥಳವೇ ಹೊರತು, ಭಯ ಹುಟ್ಟಿಸುವ ಅಖಾಡವಲ್ಲ ಎನ್ನುವ ಭಾವನೆ ಮೂಡಿಸುವಂತಿದೆ. ವಾಹನಗಳಲ್ಲಿನ ದೀಪಗಳ ಬಳಕೆಗೆ ಸಂಬಂಧಿಸಿದ ಕಾನೂನು ಸ್ಪಷ್ಟವಾಗಿದೆ. ಭಾರತೀಯ ಮೋಟಾರು ವಾಹನ ಕಾಯ್ದೆ ಮತ್ತು ಕೇಂದ್ರದ ಮೋಟಾರು ವಾಹನ ನಿಯಮಗಳು, ಹಲವು ಬಣ್ಣಗಳ ದೀಪಗಳು, ಕೆಂಪು ಅಥವಾ ನೀಲಿ ಫ್ಲ್ಯಾಷರ್‌ಗಳು ಮತ್ತು ಹೆಚ್ಚಿನ ತೀವ್ರತೆಯ ದೀಪಗಳನ್ನು ಬಳಸುವುದನ್ನು ನಿಷೇಧಿಸಿವೆ. ನಿಯಮಗಳ ಪ್ರಕಾರ, ಪ್ರಖರವಾಗಿ ಬೆಳಕು ಚಿಮ್ಮುವ ದೀಪಗಳನ್ನು ಆ್ಯಂಬುಲೆನ್ಸ್‌ಗಳು, ಅಗ್ನಿಶಾಮಕದಳದ ಹಾಗೂ ಕರ್ತವ್ಯನಿರತ ಪೊಲೀಸ್ ವಾಹನಗಳಂತಹ ಅಧಿಕೃತ ಸೇವೆಗಳಲ್ಲಿ ಮಾತ್ರ ಬಳಸಬಹುದಾಗಿದೆ. ನಿಯಮಗಳನ್ನು ಉಲ್ಲಂಘಿಸಿದರೆ ಕಾನೂನು ಕ್ರಮ ಜರುಗಿಸುವುದರ ಜೊತೆಗೆ ಅಕ್ರಮ ಅಳವಡಿಕೆಗಳನ್ನು ತೆಗೆದುಹಾಕಲಾಗುತ್ತದೆ.



ತುರ್ತು ವಾಹನಗಳಿಗೆ ಮೀಸಲಾದ ಪ್ರಖರ ಬೆಳಕಿನ ಲೈಟ್‌ಗಳನ್ನು ಉಳಿದ ವಾಹನಗಳಲ್ಲೂ ಬಳಸುವುದು ಕಾನೂನಿನ ಉಲ್ಲಂಘನೆಯಷ್ಟೇ ಅಲ್ಲ, ಅದು ಅಪಘಾತಕ್ಕೂ ಕಾರಣ ಆಗಬಹುದು.

ವಾಹನವೊಂದರ ಕಣ್ಣು ಕೋರೈಸುವ ದೀಪಗಳ ಬೆಳಕು ರಸ್ತೆಯಲ್ಲಿನ ಇತರ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆ ಉಂಟುಮಾಡಬಹುದು. ವಾಹನ ಚಾಲಕರನ್ನು ಭಯಗೊಳಿಸಬಹುದು ಅಥವಾ ಗಲಿಬಿಲಿಗೆ ಒಳಗಾಗುವಂತೆ ಮಾಡಬಹುದು; ದೃಷ್ಟಿ ಚಂಚಲಗೊಳಿಸಿ ಅಪಘಾತಗಳಿಗೆ ಆಸ್ಪದ ಕಲ್ಪಿಸಬಹುದು. ತುರ್ತು ಸಂದರ್ಭದಲ್ಲಿ ಬಳಸುವ ದೀಪಗಳನ್ನು ದ್ವಿಚಕ್ರ ವಾಹನಗಳು, ಖಾಸಗಿ ಕಾರುಗಳು ಹಾಗೂ ವಾಣಿಜ್ಯ ವಾಹನಗಳಲ್ಲಿ ಬಳಸುವುದರಿಂದಾಗಿ, ಆ ದೀಪಗಳ ನೈಜ ಉದ್ದೇಶದ ಬಗ್ಗೆಯೇ ಸಾರ್ವಜನಿಕರಲ್ಲಿ ಉದಾಸೀನಭಾವ ಮೂಡಬಹುದು. ಇದರ ಪರಿಣಾಮವಾಗಿ ಆ್ಯಂಬುಲೆನ್ಸ್ ಹಾಗೂ ಅಗ್ನಿಶಾಮಕ ದಳದ ತುರ್ತು ವಾಹನಗಳ ಸುಗಮ ಸಂಚಾರಕ್ಕೆ ಜಾಗ ಬಿಟ್ಟುಕೊಡಲು ಇತರ ವಾಹನ ಚಾಲಕರು ಹಿಂದೆಮುಂದೆ ನೋಡುತ್ತಾರೆ. ಪ್ರತಿಯೊಂದು ಕ್ಷಣವೂ ಸಾವು ಮತ್ತು ಬದುಕನ್ನು ನಿರ್ಣಯಿಸುವಂಥ ಸಮಯದಲ್ಲಿ ಈ ವಿಳಂಬ ಗಂಭೀರ ಪರಿಣಾಮ ಉಂಟುಮಾಡಬಹುದು.

ಸಮಾಜಶಾಸ್ತ್ರಜ್ಞರು 'ಯಾಜಮಾನ್ಯ ಧೋರಣೆ' ಎಂದು ವಿಶ್ಲೇಷಿಸುವ ಈ ಅಪಾಯಕಾರಿ ಮನಃಸ್ಥಿತಿ ಬ್ರಿಟಿಷ್ ಪ್ರಭುತ್ವದ ಪಳೆಯುಳಿಕೆಯನ್ನು ನೆನಪಿಸುವಂತಿದೆ. ಸ್ಥಳೀಯರಿಂದ ದೈಹಿಕವಾಗಿ ಹಾಗೂ ಕಾನೂನಾತ್ಮಕವಾಗಿ ಅಂತರ ಕಾಪಾಡಿಕೊಳ್ಳುವ ವಸಾಹತುಶಾಹಿ ಮನಃಸ್ಥಿತಿಯ ಅನುಕರಣೆಯನ್ನು ವಾಹನಗಳಲ್ಲಿನ ಸೈರನ್ ಸಂಸ್ಕೃತಿಯ ಲೈಟ್‌ಗಳಲ್ಲಿ ಕಾಣಬಹುದಾಗಿದೆ. ರಸ್ತೆಯಲ್ಲಿ ತಮ್ಮ ಅಧಿಕಾರದ ಪ್ರಾಬಲ್ಯವನ್ನು ಪ್ರದರ್ಶಿಸುವ ಹಾಗೂ ವಿಶೇಷ ಸವಲತ್ತುಗಳನ್ನು ಪಡೆಯುವ ಉದ್ದೇಶ ಈ ಧೋರಣೆಯ ಹಿಂದಿದೆ. ಅಧಿಕಾರದ ಪ್ರತಿಷ್ಠೆಯ ಪ್ರದರ್ಶನಕ್ಕಾಗಿ ಸಂಸದರು, ಶಾಸಕರಂಥ ಜನಪ್ರತಿನಿಧಿಗಳು ಮಾತ್ರವಲ್ಲದೆ, ನಿವೃತ್ತ ಕಾರ್ಪೊರೇಟರ್‌ಗಳು ಕೂಡ ತುರ್ತು ದೀಪಗಳನ್ನು ಬಳಸುವುದರಿಂದಾಗಿ ಈ ವಿಐಪಿ ಸಂಸ್ಕೃತಿ ಬಲಗೊಂಡಿದೆ. ರಾಜಕೀಯ ಪ್ರಾಬಲ್ಯ ಹೊಂದಿರುವ ವ್ಯಕ್ತಿಗಳ ಉಲ್ಲಂಘನೆಯನ್ನು ಸಹಿಸಿಕೊಂಡು, ಜನಸಾಮಾನ್ಯರ ಮೇಲೆ ಕ್ರಮ ಜರುಗಿಸುವ ಪ್ರವೃತ್ತಿ ಸಾರ್ವಜನಿಕ ಸಿನಿಕತೆಯನ್ನು ಸೃಷ್ಟಿಸಿದೆ. ಕಾನೂನಿನ ಬಗ್ಗೆ ಸಾರ್ವಜನಿಕರಿಗೆ ನಂಬಿಕೆ ಮತ್ತು ಗೌರವ ಮೂಡಬೇಕಾದರೆ, ಅದು ಕೆಳಮುಖವಾಗಿ ಮಾತ್ರವಲ್ಲದೆ ಮೇಲ್ಮುಖವಾಗಿಯೂ ಚಲಿಸುವಂತಿರಬೇಕು. ರಸ್ತೆಗಳ ಮೇಲಿನ ಪ್ರತಿಷ್ಠೆಯ ಪ್ರಹಸನದ ಸಮಸ್ಯೆ ಬೆಂಗಳೂರಿಗೆ ಸೀಮಿತವಾಗಿರದೆ, ದೇಶದೆಲ್ಲೆಡೆ ಕಂಡುಬರುವಂತಹದ್ದಾಗಿದೆ. ತುರ್ತು ದೀಪಗಳನ್ನು ಯಾರು ಬಳಸಬಹುದು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟೀಕರಣ ನೀಡಬೇಕಾಗಿದೆ ಮತ್ತು ಅದನ್ನು ರಾಜ್ಯಗಳ ಪೊಲೀಸ್ ನಿರ್ದೇಶಕರು ಯಾವುದೇ ವಿನಾಯಿತಿ ಇಲ್ಲದೆ ಜಾರಿಗೊಳಿಸಬೇಕಾಗಿದೆ. ಪ್ರಸ್ತುತ, ಅಕ್ರಮ ದೀಪಗಳ ವಿರುದ್ಧ ಬೆಂಗಳೂರು ಪೊಲೀಸರು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುತ್ತಿರುವುದು ಸ್ವಾಗತಾರ್ಹ. ವಾಹನಗಳಲ್ಲಿ ಅಕ್ರಮ ದೀಪಗಳ ಬಳಕೆಯನ್ನು ತಡೆಗಟ್ಟುವುದು ಸೌಂದರ್ಯಾತ್ಮಕ ಅಥವಾ ಕಾನೂನಾತ್ಮಕ ಕ್ರಮವಷ್ಟೇ ಆಗಿರದೆ, ಕಾನೂನಿನ ಮುಂದೆ ಎಲ್ಲರೂ ಸಮಾನರು ಎನ್ನುವುದರ ಸಂಕೇತವೂ ಆಗಿದೆ. ಈ ಅಕ್ರಮ 'ದೀಪಸಂಸ್ಕೃತಿ'ಯನ್ನು ಕೊನೆಗೊಳಿಸುವುದು ಅಪಾಯಕಾರಿ ಮನಃಸ್ಥಿತಿಯನ್ನು ಕೊನೆಗೊಳಿಸುವ ಪ್ರಯತ್ನವೂ ಆಗಿದೆ.

ಜಾಲಾಡಿ

ಸಿನಿಮಾ ಮತ್ತು ಸಂಸ್ಕೃತಿ



ವರ್ಷಕ್ಕೆ 200ಕ್ಕೂ ಹೆಚ್ಚು ಸಿನಿಮಾ ಮಾಡೋ ನಾಡಲ್ಲಿ, ಈ ನಾಡಿನ ಹಬ್ಬ, ಆಚರಣೆ, ಸಂಸ್ಕೃತಿ ಕುರಿತಾದ ಚೆನ್ನಾಗಿರುವ ಒಂದು ಹಾಡೂ ಇರುವುದಿಲ್ಲ. ದುರಂತವೆಂದರೆ, ಎಷ್ಟೋ ಆಚರಣೆಗಳ ಬಗ್ಗೆ ಒಂದು ಹಾಡೂ ಇಲ್ಲ.

ಕಿರಣ್ ಕೊಡ್ಲಾಡಿ, 'ಎಕ್ಸ್'ನಿಂದ

ಕಿಡಿನುಡಿ



ಕಾಂಗ್ರೆಸ್ ನಡೆಸಿದ ಎಲ್ಲಾ ಪಾದಯಾತ್ರೆಗಳಿಗೆ ಅಪಾರ ಜನಬೆಂಬಲ ವ್ಯಕ್ತವಾಗಿದೆ. ನಾವು ಪಾದಯಾತ್ರೆಗಳನ್ನು ಜನರಿಗಾಗಿ ನಡೆಸಿದ್ದೇವೆಯೇ ಹೊರತು ರಾಜಕೀಯ ಮೇಲಾಟಕ್ಕಾಗಿ ಅಲ್ಲ. ಬಿಜೆಪಿಗೆ ಎಂದಿಗೂ ಕಾಂಗ್ರೆಸ್ಸಿನಂತೆ ಪಾದಯಾತ್ರೆ ಮಾಡಲು ಸಾಧ್ಯವಿಲ್ಲ. ಏಕೆಂದರೆ, ಅವರಿಗೆ ಕಾಂಗ್ರೆಸ್ಸಿನಂತೆ ಜನಪರ ಚಿಂತನೆಗಳಿಲ್ಲ.

ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 16-1-2001

• **ನಲವತ್ತು ಎಂಜಿನಿಯರಿಂಗ್ ಕಾಲೇಜಿಗೆ ಅನುಮತಿ**

ಬೆಂಗಳೂರು, ಜ. 15– ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅನುಮತಿಯೊಡನೆ 36 ಎಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲು ಈಚಿನ ಸಚಿವ ಸಂಪುಟವು ಒಪ್ಪಿಗೆ ನೀಡಿದ್ದರೂ, ಸರ್ಕಾರ ಕಾಲೇಜುಗಳ ಸಂಖ್ಯೆಯನ್ನು ಇದೀಗ 40ಕ್ಕೆ ಏರಿಸಿದೆ.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯೂ ಸೇರಿದಂತೆ ಮತ್ತೆ 4 ಸಂಸ್ಥೆಗಳಿಗೆ ಎಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡಿದೆ ಎಂದು ಉನ್ನತ ಶಿಕ್ಷಣ ಸಚಿವ ಜಿ. ಪರಮೇಶ್ವರ್ ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು. ರಾಘವೇಂದ್ರ ಶಿಕ್ಷಣ ಸಂಸ್ಥೆ, ಆಲ್ ಹಮ್ದ್ ಶಿಕ್ಷಣ ಸಂಸ್ಥೆ (ಎರಡೂ ಬೆಂಗಳೂರು) ಮತ್ತು ನಿಟ್ಟೆ ಶಿಕ್ಷಣ ಸಂಸ್ಥೆಗಳಿಗೂ ಇದೇ ರೀತಿ ಎಂಜಿನಿಯರಿಂಗ್ ಕಾಲೇಜು ತೆರೆಯಲು ಅನುಮತಿ ನೀಡಲಾಗಿದೆ.

• **ರಾಜ್ಯ ವಿವಿ ತಿದ್ದುಪಡಿ ಮಸೂದೆಗೆ ಯುಜಿಸಿ ಆಕ್ಷೇಪ: ಸಚಿವರ ಪ್ರಶ್ನೆ**

ಬೆಂಗಳೂರು, ಜ. 15– ಆಂಧ್ರ ಪ್ರದೇಶದಲ್ಲಿಯೂ ಕುಲಪತಿಗಳ ನೇಮಕದ ಅಧಿಕಾರವನ್ನು ಸರ್ಕಾರವೇ ತನ್ನ ಕೈಯಲ್ಲಿ ಇರಿಸಿಕೊಂಡಿರುವಾಗ, ಕರ್ನಾಟಕ ತರಲು ಉದ್ದೇಶಿಸಿರುವ ವಿಶ್ವವಿದ್ಯಾಲಯಗಳ ತಿದ್ದುಪಡಿಗೆ ಮಾತ್ರ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ (ಯುಜಿಸಿ) ಏಕೆ ಆಕ್ಷೇಪ ಮಾಡಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ. ಜಿ. ಪರಮೇಶ್ವರ ಇಂದು ಇಲ್ಲಿ ಪ್ರಶ್ನಿಸಿದರು.

75 ವರ್ಷಗಳ ಹಿಂದೆ

ಮಂಗಳವಾರ, 16-1-1951

• **489,210 ಲಕ್ಷ ಡಾಲರುಗಳು ಸೇನಾ ವಿಸ್ತಾರಕ್ಕೆ**

ವಾಷಿಂಗ್ಟನ್, ಜ. 15– ಅಮೆರಿಕಾಧ್ಯಕ್ಷ ಟ್ರೂಮನ್ನರು 71,594 ದಶಲಕ್ಷ ಡಾಲರುಗಳ ಆಯವ್ಯಯ ಅಂದಾಜನ್ನು ಕಾಂಗ್ರೆಸ್ ಅಧಿವೇಶನದಲ್ಲಿ ಈ ದಿನ ಮಂಡಿಸಿದರು. ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸೈನ್ಯಬಲವನ್ನು 41,421 ದಶಲಕ್ಷ ಮತ್ತು ತಮ್ಮ ಮಿತ್ರ ರಾಷ್ಟ್ರಗಳವರ ಸೇನಾಬಲ ವರ್ಧನಕ್ಕೆ 7,112 ದಶಲಕ್ಷ ಡಾಲರುಗಳನ್ನು ಒದಗಿಸಬೇಕೆಂದು ಅಂದಾಜಿನಲ್ಲಿ ಕೋರಲಾಗಿದೆ.

• **ಕೇಂದ್ರ ಚಲಚ್ಚಿತ್ರ ದೋಷ ವಿಮರ್ಶಕ ಬೋರ್ಡ್ ಆರಂಭ**

ಮುಂಬೈ, ಜ. 15– ಕೇಂದ್ರ ಚಲಚ್ಚಿತ್ರ ದೋಷ ವಿಮರ್ಶಕ ಬೋರ್ಡ್ ಇಂದು ಚಿತ್ರವೊಂದನ್ನು ವಿಮರ್ಶಿಸಿ ತನ್ನ ಕೆಲಸ ಆರಂಭಿಸಿತು. ಇತ್ತ ಮೈಸೂರು ಸಂಸ್ಥಾನದ ಚಲಚ್ಚಿತ್ರ ದೋಷ ವಿಮರ್ಶಕ ಬೋರ್ಡ್ ಇಂದಿನಿಂದ ರದ್ದಾಗಿದೆ.

ಹಾರಾಟ ಬಿಡಿ; ಹೋರಾಟ ಮಾಡಿ



ಗತಿಬಿಂಬ

ವೈ.ಗ. ಜಗದೀಶ್

ಆಡಳಿತ ಪಕ್ಷದ ವೈಫಲ್ಯಗಳ ಬಗ್ಗೆ ಜನಾಭಿಪ್ರಾಯ ಮೂಡಿಸುವುದರಲ್ಲಿ ವಿರೋಧ ಪಕ್ಷದ ನಾಳೆಯ ಯಶಸ್ಸು ಅಡಗಿರುತ್ತದೆ. ಆದರೆ, ಸರ್ಕಾರದ ವೈಫಲ್ಯಗಳನ್ನು ಗಟ್ಟಿ ಧ್ವನಿಯಲ್ಲಿ ವಸ್ತುನಿಷ್ಠವಾಗಿ ಟೀಕಿಸುವಲ್ಲಿ ರಾಜ್ಯ ಬಿಜೆಪಿ ಯಶಸ್ಸು ಕಂಡಿರುವುದು ತೀರಾ ಕಡಿಮೆ.

ವಿಧಾನಸಭೆ ಚುನಾವಣೆಯ ನಂತರ ಎರಡೂವರೆ ವರ್ಷ ಮಲಗಿದಂತಿದ್ದ ವಿರೋಧ ಪಕ್ಷ ಬಿಜೆಪಿ ಈಗ ಎದ್ದು ಕುಳಿತಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮೈಚಳಿ ಬಿಟ್ಟು ನಾಡಿನಾದ್ಯಂತ ಓಡಾಡಲು ಶುರು ಮಾಡಿದ್ದಾರೆ. 136 ಸ್ಥಾನಗಳ ದೊಡ್ಡ ಗೆಲುವು, ಮೂವರು ಸ್ವತಂತ್ರ ಶಾಸಕರ ಬೆಂಬಲ ಪಡೆದಿದ್ದ ಆಡಳಿತ ಪಕ್ಷ ಕಾಂಗ್ರೆಸ್ ಎದುರು ಬಡಿದಾಡುವುದು ಅಷ್ಟು ಸುಲಭವೇನಲ್ಲ. ಆದರೆ, ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಪ್ರತಿ ಸೋಲು ಕೂಡ, ಗೆಲುವಿನ ಕಡೆಗಿನ ನಡೆಯನ್ನು ಮತ್ತಷ್ಟು ಹದಗೊಳಿಸಿ, ಹುರಿಗೊಳಿಸುವ ರಹದಾರಿ. ಕೇಂದ್ರದಲ್ಲಿ ತಮ್ಮದೇ ಪಕ್ಷದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವಿದ್ದು, ಸಾಂವಿಧಾನಿಕ ಸಂಸ್ಥೆಗಳೆಲ್ಲವೂ ತಮ್ಮ ಕೈಯಳತೆಯಲ್ಲೇ ಇರುವ ಕಾಲದಲ್ಲಿ ನಾಲ್ಕು ವರ್ಷ ಅಧಿಕಾರ ನಡೆಸಿಯೂ ರಾಜ್ಯದಲ್ಲಿ ಹೀನಾಯ ಸೋಲನ್ನು ಬಿಜೆಪಿ ಕಂಡಿತು. ಆ ಬಳಿಕ ಮತ್ತೆ ತಲೆ ಎತ್ತಿ ನಿಲ್ಲುವತ್ತ ಬಿಜೆಪಿ ನಾಯಕರು ಕ್ರಿಯಾಶೀಲರಾಗಿರಲಿಲ್ಲ. ಹೀಗಾಗಿಯೇ, ರಾಜ್ಯದಲ್ಲಿ ವಿರೋಧ ಪಕ್ಷವೇ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿಬಿಟ್ಟಿತು. ಈಗ ಮೈಗೆ ತುಸು ಕಸುವು ಏರಿಸಿಕೊಂಡಂತಿರುವ ಬಿಜೆಪಿ ನಾಯಕರು, ವಿರೋಧ ಪಕ್ಷವೊಂದು ರಾಜ್ಯದಲ್ಲಿ ಇದೆ ಎಂಬಂತಹ ವಾತಾವರಣ ಸೃಷ್ಟಿ ಮಾಡಲು ಅಣಿಯಾದಂತಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಆಡಳಿತ ಪಕ್ಷಕ್ಕೆ ಇರುವಷ್ಟೇ ಮಹತ್ವ ವಿರೋಧ ಪಕ್ಷಕ್ಕೂ ಇದೆ. ಈ ಕಾರಣಕ್ಕಾಗಿಯೇ, ವಿರೋಧ ಪಕ್ಷದ ನಾಯಕರನ್ನು ಛಾಯಾ (ಶಾಡೋ) ಮುಖ್ಯಮಂತ್ರಿ ಎಂದು ಗುರುತಿಸುವ ಪರಿಪಾಟವಿದೆ. ಚುನಾಯಿತ ಸರ್ಕಾರವೊಂದು ಎಸಗುವ ಅನಾಹುತ, ಆಡಳಿತ ವೈಫಲ್ಯದಿಂದಾಗುವ ಪರಿಣಾಮ, ಸರ್ಕಾರಿ ಕಚೇರಿಗಳಲ್ಲಿನ ಅವ್ಯಾಹತ ಭ್ರಷ್ಟಾಚಾರ, ನೈಸರ್ಗಿಕ ವಿಕೋಪಗಳಾದಾಗ ಆಡಳಿತಾರೂಢರು ಮರೆವಿಗೆ ಜಾರುವುದು, ಅಭಿವೃದ್ಧಿಯ ವಿಷಯದಲ್ಲಿ ತೀವ್ರ ನಿರ್ಲಕ್ಷ್ಯ... ಇವೆಲ್ಲದರ ಅಡ್ಡ ಪರಿಣಾಮಗಳನ್ನು ಎದುರಿಸಬೇಕಾದವರು ಯಾವ ಪಕ್ಷದ ಹಂಗೂ ಇಲ್ಲದೇ ತಮ್ಮ ಪಾಡಿಗೆ ತಾವಿರುವ ಬಹುಜನ ವರ್ಗ. ಪಕ್ಷದ ಕಾಲಾಳುಗಳು ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇದ್ದರೂ ತಮ್ಮ ಕೆಲಸ ಆಗುವಂತೆ ನೋಡಿಕೊಳ್ಳುತ್ತಾರೆ ಅಥವಾ ತಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ಮಾಡಿಟ್ಟಿದ್ದ ಆಸ್ತಿಯಲ್ಲಿ ಸ್ವಲ್ಪ ಕರಗಿಸಿ, ರಾಜಕಾರಣ ನಡೆಸುತ್ತಾರೆ. ಸರ್ಕಾರದ ದುರ್ಬಲ ನಡೆಯಿಂದಾಗಿ, ನೇರವಾಗಿ ಬಸವಳಿಯುವವರು ನಿತ್ಯದ ಅನ್ನವನ್ನು ದುಡಿದು ತಿನ್ನಲೇಬೇಕಾದ ಬಹುಸಂಖ್ಯಾತರು. ಜನವಿರೋಧಿ ಸರ್ಕಾರವನ್ನು ಚುನಾವಣೆ ವೇಳೆ ಬದಲಿಸುವ ದೊಡ್ಡ ಶಕ್ತಿಯೂ ಇವರದ್ದೇ. ಒಂದು ಕಾಲದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಇರುವವರು, ಮತ್ತೊಂದು ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯಬೇಕಾದರೆ ಆಳುವವರ ದುರಾಡಳಿತ ಪರಿ–ಪರಿಣಾಮವನ್ನು ಜನರಿಗೆ ಪರಿಚಯಿಸುವ, ಜನರನ್ನು ಎಚ್ಚರಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದರೆ ಸಾಕು.

ವಿರೋಧ ಪಕ್ಷ ಸಮರ್ಥವಾಗಿದ್ದರೆ, ಆಳುವ ಪಕ್ಷದವರು ಅಂದಾದುಂದಿ ದರ್ಬಾರು ಮಾಡುವುದಿಲ್ಲ. ಅಡಿಗಡಿಗೂ ಎಚ್ಚರದಿಂದ ಹೆಜ್ಜೆ ಇಡುತ್ತಾರೆ. ತುಸು ಯಾಮಾರಿದರೂ ವಿರೋಧ ಪಕ್ಷದವರು ಜನಾಂದೋಲನ ರೂಪಿಸುತ್ತಾರೆ ಎಂಬ ಭಯದಲ್ಲಿ ಜನವಿರೋಧಿ ಕೆಲಸಗಳನ್ನು ಮಾಡಲು ಆಡಳಿತ ನಡೆಸುವವರು ಅಂಜುತ್ತಾರೆ. ಆಡಳಿತ ಪಕ್ಷದ ನೇತಾರರು, ಮಂತ್ರಿಗಳು ಎರಡಲುಗಿನ ಕತ್ತಿನ ಮೇಲೆ ನಡೆಯುವಂತಹ ವಾತಾವರಣವನ್ನು ಸದಾ ಕಾಪಿಟ್ಟುಕೊಳ್ಳುವುದು ಸಂವಿಧಾನರೀತ್ಯ ವಿರೋಧ ಪಕ್ಷಗಳ ಹೊಣೆಗಾರಿಕೆ.

ದೇಶದ ಪ್ರಗತಿಪಥದಲ್ಲಿ ಕರ್ನಾಟಕವನ್ನು ಮುಂಚೂಣಿ ಹಾಗೂ ಮಾದರಿ ರಾಜ್ಯವಾಗಿಸುವ ಮುನ್ನೋಟದ ಮಹತ್ತರ ಯೋಜನೆಗಳನ್ನು ಈ ಎರಡೂವರೆ ವರ್ಷಗಳಲ್ಲಿ ಸರ್ಕಾರ ಕೈಗೆತ್ತಿಕೊಂಡಿಲ್ಲ. ಪಂಚ ಗ್ಯಾರಂಟಿಗಳ ಯಶಸ್ಸಿನ ಧಾರೆಯಡಿ, ಒಂದಿಷ್ಟು ಜನಪರ ಕಾಯ್ದೆಗಳನ್ನು ಜಾರಿಗೊಳಿಸಿದ್ದಷ್ಟೇ ಸರ್ಕಾರದ ಸಾಧನೆ. ನಾಯಕತ್ವದ ವಿಷಯದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರ ಬಣ ಜಗಳದಿಂದಾಗಿ, ಆಡಳಿತ ಹಳಿ ತಪ್ಪಿಹೋಗಿದೆ. ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿರುವುದಕ್ಕೆ ಲೋಕಾಯುಕ್ತ ದಾಳಿಗಳು, ರಕ್ಷಕ ಪೊಲೀಸರೇ ಭಕ್ಷಕರಾಗಿರುವುದಕ್ಕೆ ಹಲವಾರು ಪ್ರಕರಣಗಳು ಸಾಕ್ಷಿಯಾಗುತ್ತವೆ.

ಇಂತಹ ಹೊತ್ತಿನಲ್ಲಿ ಸರ್ಕಾರದ ಕಾರ್ಯವೈಖರಿಯ ಬಗ್ಗೆ ಜನರನ್ನು ಜಾಗೃತಗೊಳಿಸುವ, ಸರ್ಕಾರದ ಕಿವಿಹಿಂಡುವ ಜವಾಬ್ದಾರಿ ಪ್ರತಿಪಕ್ಷಗಳದ್ದಾಗಿದೆ. ಕಾಂಗ್ರೆಸ್‌ನಲ್ಲಿ ಎರಡು ಬಣಗಳಿದ್ದರೆ, ವಿರೋಧ ಪಕ್ಷವಾಗಿ ಸಂಘಟಿತ ಹೋರಾಟ ನಡೆಸಬೇಕಾದ ಬಿಜೆಪಿಯಲ್ಲಿ ಪಂಚ ಬಣಗಳಿವೆ. ಯಾರಿಗೂ ಯಾರ ಮೇಲೂ ವಿಶ್ವಾಸವಿಲ್ಲ. ಸರ್ಕಾರದ ವಿರುದ್ಧ ನಿರ್ಣಾಯಕ ಹೋರಾಟ ಮಾಡಬೇಕಾದ ಸಂದರ್ಭ ಒದಗಿದಾಗಲೆಲ್ಲ, ದಾಯಾದಿ ಕಲಹದಲ್ಲಿರುತ್ತಾರೆ. ಸರ್ಕಾರದ ವಿರುದ್ಧ ಹೋರಾಟ ಮಾಡಿದರೆ ಅದರ ಲಾಭ ಯಾರ ಪಾಲಾಗುತ್ತದೆ ಎಂಬ ಲೆಕ್ಕಾಚಾರದಲ್ಲಿ ಎಲ್ಲ ನಾಯಕರು ಮುಳುಗಿರುವುದರಿಂದಾಗಿ, ಯಾರೊಬ್ಬರೂ ನೇತೃತ್ವ ವಹಿಸಲು ಸಿದ್ಧರಾಗುತ್ತಿಲ್ಲ. ಇದು, ಬಿಜೆಪಿಯ ಸದ್ಯದ ಸಮಸ್ಯೆ.

ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂಬ ಟೀಕೆ ಹೊತ್ತ ಬಿ.ವೈ. ವಿಜಯೇಂದ್ರ ಅವರದ್ದೇ ಒಂದು ಬಣ. ಯಡಿಯೂರಪ್ಪ ಅವರೊಂದಿಗೆ ಅಂತರ ಇಟ್ಟುಕೊಂಡೇ ಬಂದಿರುವ ಹಿರಿಯರದ್ದು ಒಂದು ಬಣ. ಕರ್ನಾಟಕದ ಮೇಲೆ ತಮ್ಮ ಹಿಡಿತ ಇರಬೇಕೆಂದು ಬಯಸುವ ಬಿ.ಎಲ್. ಸಂತೋಷ್ ಅವರದ್ದು ಮತ್ತೊಂದು ಕೂಟ. ವಿಜಯೇಂದ್ರರನ್ನು ಇಳಿಸಿಯೇ ತೀರಬೇಕೆಂಬ ಮತ್ತೊಂದು ಗುಂಪು. ಇದೆಲ್ಲದರ ಜತೆಗೆ ನಿರ್ಲಿಪ್ತರದ್ದು ಮಗದೊಂದು ಗುಂಪು. ಹೀಗೆ ಹರಿದು ಹಂಚಿಹೋಗಿರುವ ಬಿಜೆಪಿ, ಸರ್ಕಾರದ ವಿರುದ್ಧ ಒಂದೇ ಒಂದು ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲೇ ಇಲ್ಲ. ಭ್ರಷ್ಟಾಚಾರ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವೈಫಲ್ಯ, ಪೊಲೀಸರ ದಬ್ಬಾಳಿಕೆ, ಅಭಿವೃದ್ಧಿಯಲ್ಲಿ ಹಿನ್ನಡೆ ಯಾವುದನ್ನೂ ಬಿಜೆಪಿ ನಾಯಕರು ತೀವ್ರ ತರದ ಹೋರಾಟವಾಗಿ ರೂಪಿಸಲೇ ಇಲ್ಲ. ಮುಡಾ ನಿವೇಶನ ಹಾಗೂ ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ತುಸು ಸದ್ದು ಮಾಡಿದ್ದು ಬಿಟ್ಟರೆ, ಬೇರೆ ಯಾವತ್ತೂ ದೃಢವಾಗಿ ಧ್ವನಿ ಎತ್ತಿದ್ದೇ ಇಲ್ಲ. ಬಳ್ಳಾರಿಯಲ್ಲಿ ಈಚೆಗೆ ನಡೆದ ಗುಂಡು ಹಾರಿಸಿದ ಘಟನೆ ಆಡಳಿತಾರೂಢರ ದರ್ಪಕ್ಕೆ ಉದಾಹರಣೆ. ಇದರ ವಿರುದ್ಧ ಸಂಘಟಿತ ಹೋರಾಟ ನಡೆಸಬಹುದಾದ ಅವಕಾಶಗಳಿದ್ದರೂ ಬಿಜೆಪಿ ಕೈಚೆಲ್ಲಿ ಕುಳಿತು, ಪ್ರತಿಭಟನೆಗಷ್ಟೇ ಸೀಮಿತವಾಗಿದೆ.


ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆ ವೇಳೆ ನಡೆದ ಕಾಲ್ತುಳಿತ ಪ್ರಕರಣದಲ್ಲಿ ಪತ್ರಿಕಾಗೋಷ್ಠಿ, ಜಾಲತಾಣಗಳ ಹೇಳಿಕೆಗಳಷ್ಟೇ ಬಿಜೆಪಿ ಸಾಧನೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಕೆಲವು ಸಚಿವರು, ಐಎಎಸ್, ಐಪಿಎಸ್ ಅಧಿಕಾರಿಗಳ ಘನ ಗಂಭೀರ ಲೋಪವನ್ನು ಮುಂದಿಟ್ಟು ಹೋರಾಟ ಮಾಡಬಹುದಾದ ಅವಕಾಶವನ್ನು ಬಿಜೆಪಿ ಕೈಬಿಟ್ಟಿತು.

ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ರಚನಾತ್ಮಕ ಹೋರಾಟ ನಡೆಸಿ, ಸರ್ಕಾರದ ಲೋಪವನ್ನು ಬಿಂಬಿಸಬಹುದಾದ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿತು. ತನ್ನ ಯಾವತ್ತಿನ ವಿಭಜಕ ರಾಜಕಾರಣಕ್ಕೆ ಪೂರಕವಾದ ಕೋಮುದ್ವೇಷ ಉಲ್ಬಣಗೊಳಿಸುವ ವಿಷಯಗಳ ಮೇಲೆಯೇ ಕೇಂದ್ರೀಕರಿಸಿತು. ಯಾವುದೇ ಪ್ರಕರಣದಲ್ಲಿ ಮುಸ್ಲಿಂ ಸಮುದಾಯದವರು ಆರೋಪಿಗಳಾಗಿದ್ದರಷ್ಟೇ ಬಿಜೆಪಿ ಅದನ್ನು ಹೋರಾಟಕ್ಕೆ ತೆಗೆದುಕೊಳ್ಳುತ್ತದೆ ವಿನಃ, ಕೃತ್ಯ ಎಸಗಿದವರು ಹಿಂದೂ ಧರ್ಮದ ಯಾವುದೇ ಜಾತಿಗೆ ಸೇರಿದವರಾದರೂ ಚಕಾರವನ್ನೇ ಎತ್ತುವುದಿಲ್ಲ. ಅಂಕೋಲಾದಲ್ಲಿನ ಮಹಿಳೆಯೊಬ್ಬರ ಹತ್ಯೆ ಅಮಾನವೀಯ. ಆದರೆ, ಅದರಲ್ಲಿ ಭಾಗಿಯಾದ ಆರೋಪಿ ಮುಸ್ಲಿಂ ಎಂಬ ಕಾರಣಕ್ಕೆ ರಾಜ್ಯವ್ಯಾಪಿ ಗದ್ದಲ ಎಬ್ಬಿಸಿತು. ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ಗುಡಿಸಲು ಕಟ್ಟಿಕೊಂಡವರನ್ನು ತೆರವು ಮಾಡಿದಾಗ ಅದನ್ನು ವಿರೋಧಿಸಿದ ಬಿಜೆಪಿ, ಮತ್ತೆ ಮನೆ ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿತು. ಅಲ್ಲಿದ್ದವರ ಪೈಕಿ ಕೆಲವರು ಕೇರಳದವರು, ಮುಸ್ಲಿಮರು ಎಂಬ ವಿಷಯ ಹೊರಗೆ ಬರುತ್ತಿದ್ದಂತೆ, 'ಬಾಂಗ್ಲಾ'ದ ಬಣ್ಣ ಕಟ್ಟಿ ವಿವಾದ ಎಬ್ಬಿಸಿತು.

2019–2023ರ ಅಧಿಕಾರ ಅವಧಿಯಲ್ಲೂ ಜನರ ಕೆರಳಿಸುವ ಧಾರ್ಮಿಕ ವಿವಾದಗಳಿಗೆ ಆದ್ಯತೆ ಕೊಟ್ಟಿತ್ತು. ಬಿಜೆಪಿಯವರಿಗೆ ಜನರ ಹೋರಾಟವೆಂದರೆ ಅವರ ನಿತ್ಯದ ಬದುಕಿನ ಸಂಕಷ್ಟಗಳ ಪರಿಹಾರಕ್ಕಾಗಿ ಸರ್ಕಾರವನ್ನು ಕಟ್ಟಿಹಾಕುವುದು ಎಂಬ ಪರಿವೆ ಇಲ್ಲ. ಪ್ರಾರ್ಥನೆಗೆ ಅಡ್ಡಿ, ಗಲಭೆ, ಮಕ್ಕಳ ಕಲ್ಲೆಸೆತ, ಯಾವುದೋ ಕಾರಣಕ್ಕೆ ಕೊಲೆ ಇಂತಹ ಪ್ರಕರಣಗಳಲ್ಲಿ ಮುಸ್ಲಿಮರು ಭಾಗಿಯಾಗಿದ್ದರಷ್ಟೇ ಬಿಜೆಪಿಯವರಿಗೆ ಹೋರಾಟದ ವಸ್ತು. ಅದೇ, ದಲಿತ, ಹಿಂದುಳಿದ ಸಮುದಾಯದ ಯುವತಿ, ಮಹಿಳೆಯರ ಮೇಲಾಗುವ ಪ್ರಬಲ ಜಾತಿಯವರ ದೌರ್ಜನ್ಯ, ಕೊಲೆಗಳ ವಿಷಯ ಮುಖ್ಯವಾಗುವುದೇ ಇಲ್ಲ.

ಕರ್ನಾಟಕದ ಜನ ಇಂತಹ ಕೋಮು ಪ್ರಚೋದನೆಯ ಸಂಗತಿಗಳನ್ನು ಆಧರಿಸಿ ಮತ ಹಾಕುವವರಲ್ಲ, ಅಭಿವೃದ್ಧಿಯ ಪಥ– ಭ್ರಷ್ಟಾಚಾರ ರಹಿತ, ಜನಸ್ನೇಹಿ ಆಡಳಿತ ಬಯಸುವವರು ಎಂಬುದನ್ನು ಅರ್ಥ ಮಾಡಿಕೊಳ್ಳದೇ ಸೋಲಾಯಿತು ಎಂಬ ಪಾಠವನ್ನು ಬಿಜೆಪಿ ಕಲಿತಂತಿಲ್ಲ. ಹೀಗಾಗಿಯೇ, ಈಗಲೂ ಅದೇ ಹಾದಿಯನ್ನು ನಾಯಕರು ಹಿಡಿದಿದ್ದಾರೆ.

ದೆಹಲಿಯಲ್ಲಿ ವರಿಷ್ಠರನ್ನು ಭೇಟಿಯಾದ ಬಳಿಕ ವಿಜಯೇಂದ್ರ ಸಕ್ರಿಯರಾಗಿದ್ದಾರೆ. ಪಕ್ಷದ ಎಲ್ಲ ಸ್ತರದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದಡಿ ಇಡಲು ಸಜ್ಜಾಗಿದ್ದಾರೆ. 136 ಸ್ಥಾನಗಳನ್ನು ಗೆಲ್ಲಿಸಿ ಕೊಟ್ಟರೂ ಸಿದ್ದರಾಮಯ್ಯ, ಶಿವಕುಮಾರ್ ತಮ್ಮ ಬಣ ಕಟ್ಟಿಕೊಂಡು ನಡೆಸುತ್ತಿರುವ ಕಚ್ಚಾಟದಿಂದ ರಾಜ್ಯದ ಜನ ರೋಸಿ ಹೋಗಿದ್ದಾರೆ. ನಾಯಕತ್ವ ಬದಲಾದರೆ ಹೊಸ ಸಚಿವರು ಬರುತ್ತಾರೆ ಎಂಬ ಲೆಕ್ಕಾಚಾರದಲ್ಲಿರುವ ಅಧಿಕಾರಿಗಳು ಕೆಲಸ ಮಾಡುವುದನ್ನೇ ಮರೆತು ಬಿಟ್ಟಿದ್ದಾರೆ. ಲಂಚ ಕೊಡದೇ ಯಾವುದೇ ಇಲಾಖೆಯಲ್ಲಿ ಒಂದೇ ಒಂದು ಕಡತವೂ ಇರುವ ಜಾಗದಿಂದ ಅಲುಗಾಡುತ್ತಿಲ್ಲ. ಕೊಲೆ–ಸುಲಿಗೆ, ಮಹಿಳೆಯರ ಮೇಲಿನ ದೌರ್ಜನ್ಯಗಳ ಪ್ರಕರಣಗಳಂತೂ ಬೆಚ್ಚಿ ಬೀಳಿಸುತ್ತಿವೆ. ಇಂತಹ ಹೊತ್ತಿನಲ್ಲಿ, ವಿರೋಧ ಪಕ್ಷದವರು ಎದ್ದು ಕುಳಿತರಷ್ಟೇ ಸಾಲದು; ಮೈಕೊಡವಿ ಜನರ ಪರ ನಿಲ್ಲುವುದನ್ನು ರೂಢಿಸಿಕೊಳ್ಳಬೇಕಿದೆ. ಸರ್ಕಾರ ನಡೆಸುವವರು ಮೈ ಮರೆಯದಂತೆ ವಿರೋಧ ಪಕ್ಷದವರು ಕಾಡಿದರಷ್ಟೇ, ರಾಜ್ಯದ ಜನರು ನೆಮ್ಮದಿಯಿಂದ ನಿದ್ರಿಸಬಲ್ಲರು.



ವಾಚಕರ ವಾಣಿ

ಜನಕ್ರಾಂತಿಯ ಸಮಯ ಸನ್ನಿಹಿತವಾಗಿದೆ

ಭಾರತದಲ್ಲಿ ಪರಿಸರ ಜಾಗೃತಿ ಮತ್ತು ಪರಿಸರದ ಉಳಿವಿಗಾಗಿಯೇ ಅವತರಿಸಿದರು ಎನ್ನಬಹುದಾದ ವ್ಯಕ್ತಿತ್ವ ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಳರದು. ಅವರ ವ್ಯಕ್ತಿತ್ವ ಮತ್ತು ಸಾಧನೆಗಳ ಅಚ್ಚುಕಟ್ಟಾದ ಚಿತ್ರಣವನ್ನು ನಾಗೇಶ ಹೆಗಡೆಯವರು ತಮ್ಮ ಅಂಕಣದಲ್ಲಿ (ಜ. 15) ನೀಡಿದ್ದಾರೆ; ಪರೋಕ್ಷವಾಗಿ ನಮಗೆ ಪರಿಸರದ ಉಳಿವಿನ ಮಹತ್ತ್ವವನ್ನು ತಿಳಿಸಿ ಎಚ್ಚರಿಸಿದ್ದಾರೆ.

ನನ್ನ ಅನುಭವದ ಪ್ರಕಾರ, ಹಳ್ಳಿಗಳಲ್ಲಿ ಜನರ ಚಟುವಟಿಕೆ ಮತ್ತು ಮಾತುಕತೆಗಳು, ಖಗಮೃಗಗಳೂ ಸೇರಿದಂತೆ ಪ್ರಕೃತಿ ಹಾಗೂ ಪರಿಸರದೊಡನೆ ಬಾಳಿಕೊಂಡುಹೋಗಲು ಪೂರಕವಾಗಿವೆ. ನಗರಗಳಲ್ಲಿ, ತಥಾಕಥಿತ ಪ್ರಗತಿಯ ಮುಸುಕು ಹೊದ್ದ ಉದ್ಯಮ–ಕೈಗಾರಿಕೆಗಳ ಹೆಸರಿನಲ್ಲಿ ಪ್ರಕೃತಿ ಹನನದ ಬೆಳವಣಿಗೆ ಕಾಣಿಸುತ್ತಿದೆ. ಆತಂಕದ ಸಂಗತಿಯೆಂದರೆ, ಕಳೆದೆರಡು ದಶಕಗಳಲ್ಲಿ, ಆಧುನಿಕತೆ–ನಗರೀಕರಣಗಳ ಜಾಲದಲ್ಲಿ ಬಿದ್ದು ಗ್ರಾಮವಾಸಿಗಳೂ ಪರಿಸರಪ್ರೇಮವನ್ನು, ಸಾಂಗತ್ಯವನ್ನು ತೊರೆಯತೊಡಗಿರುವುದು. ನಮ್ಮ ನಾಳೆಗಳಿಗೆ ಅಗತ್ಯವಾಗಿರುವ ಪ್ರಕೃತಿ–ಪರಿಸರವನ್ನು ಉಳಿಸಲು ಜನಕ್ರಾಂತಿಯೇ ಆಗಬೇಕೇನೋ!

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಗತಾಲಯ ಆಗುತ್ತಿರುವ ಗ್ರಂಥಾಲಯಗಳು

ಕಳೆದ ನಾಲ್ಕು ವರ್ಷಗಳಿಂದ ಹೊಸ ಸಾಹಿತ್ಯ ಕೃತಿಗಳ ಖರೀದಿಯೇ ನಡೆದಿಲ್ಲ ಎಂಬುದು ಆತಂಕಕಾರಿ. ಡಿಜಿಟಲ್ ಲೈಬ್ರರಿ ಎಂಬ ಆಕರ್ಷಕ ಪದಗಳ ಹಿಂದೆ ಹಳ್ಳಿಗಳ ಗ್ರಂಥಾಲಯಗಳಲ್ಲಿ ಕನಿಷ್ಠ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದಿರುವುದು ಅಕ್ಷಮ್ಯ ಅಪರಾಧ. ಸರ್ಕಾರವು ಕೂಡಲೇ ಈ ಆರ್ಥಿಕ ಬಿಕ್ಕಟ್ಟನ್ನು ನೀಗಿಸಿ, ಗ್ರಂಥಾಲಯಗಳ ಸಬಲೀಕರಣಕ್ಕೆ ಮುಂದಾಗಲಿ. ಪುಸ್ತಕ ಸಂಸ್ಕೃತಿಯನ್ನು ಕೊಲ್ಲುತ್ತಿರುವ ಆಡಳಿತಾತ್ಮಕ ಮಂದಗತಿಯ ಧೋರಣೆ ಕೊನೆಯಾಗಬೇಕು. ಸಾರ್ವಜನಿಕರಿಂದ ಸಂಗ್ರಹಿಸುತ್ತಿರುವ ಗ್ರಂಥಾಲಯ ಕರ ಬೇರೆ ಉದ್ದೇಶಕ್ಕೆ ಬಳಕೆಯಾಗದೆ, ಪುಸ್ತಕ ಸಂಸ್ಕೃತಿ ಬಲಗೊಳ್ಳಲು ಬಳಕೆಯಾಗುವಂತೆ ಸರ್ಕಾರ ನೋಡಿಕೊಳ್ಳಬೇಕು.

ವಿಜಯಕುಮಾರ ಎಚ್.ಕೆ., ರಾಯಚೂರು

ಬಡವರಿಗೆ ಮಾತ್ರ ಕಾನೂನು ಅನ್ವಯ!

ಸಾರ್ವಜನಿಕ ಅಧಿಕಾರಿಗಳು ಸರ್ಕಾರ ಮತ್ತು ಸಾರ್ವಜನಿಕರ ಸೇತುವೆಯಾಗಿ ಕಾನೂನಿನ ಚೌಕಟ್ಟಿನಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಸರ್ಕಾರದ ಪ್ರತಿನಿಧಿಗಳ ಮೇಲೆ ರಾಜಕಾರಣಿಗಳ ದಬ್ಬಾಳಿಕೆ ಸರಿಯಲ್ಲ. ಸರ್ಕಾರಿ ಅಧಿಕಾರಿಗಳಿಗೂ ಮನೆ, ಕುಟುಂಬ ಇರುವುದರಿಂದ ಪ್ರಭಾವಿಗಳನ್ನು ಎದುರು ಹಾಕಿಕೊಳ್ಳಲು ಹೋಗದೆ, ಬಡವರಿಗೆ ಮಾತ್ರ ಕಾನೂನನ್ನು ಅನ್ವಯಿಸುತ್ತಾರೆ. ಈ ಧೋರಣೆ ಹೀಗೆಯೇ ಮುಂದುವರಿದರೆ ಸಮಾಜದಲ್ಲಿ ಸಾಮಾಜಿಕ ನ್ಯಾಯ ಹೇಗೆ ಸಾಧ್ಯ? ರಾಜಕೀಯ ಪುಂಡರ ಅಟ್ಟಹಾಸಕ್ಕೆಂದು ಕೊನೆ?

ಆಧುನಿಕ ಯುಗದಲ್ಲಿ ಸಾಮಾಜಿಕ ಮಾಧ್ಯಮಗಳಿರುವುದರಿಂದ ಶಿಡ್ಲಘಟ್ಟದಲ್ಲಿ ನಡೆದಂಥ ಕೆಲವು ಪ್ರಕರಣಗಳು ಬೆಳಕಿಗೆ ಬರುತ್ತವೆ. ಬೆಳಕಿಗೆ ಬಾರದೆ ಇರುವ ಪ್ರಕರಣಗಳೇ ಹೆಚ್ಚು.

ಹೆಂದೊರೆ ಸಂಜು, ಶಿರಾ

ಪುಂಡರ ಆಡುಂಬೊಲ ಆದ ರಾಜಕಾರಣ

ಶಿಡ್ಲಘಟ್ಟದ ಕಾಂಗ್ರೆಸ್ ಮುಖಂಡ ಪೌರಾಯುಕ್ತೆಯನ್ನು ಅವಾಚ್ಯ ಪದಗಳಿಂದ ನಿಂದಿಸುತ್ತಿರುವ ಆಡಿಯೋ ಎಲ್ಲೆಡೆ ಹರಿದಾಡುತ್ತಿದೆ. ನಿಂದನೆಗೆ ಒಳಗಾಗಿರುವ ಪೌರಾಯುಕ್ತೆ, ನಿಂದಿಸಿರುವ ವ್ಯಕ್ತಿ ಹಾಗೂ ಹಾಲಿ ಶಾಸಕರು ಒಂದೇ ಸಮುದಾಯದವರು. ಈ ಹಿನ್ನೆಲೆಯಲ್ಲಿಯೇ ಆಡಿಯೋದಲ್ಲಿ ನಿಂದಿಸುವ ವ್ಯಕ್ತಿ 'ನಮ್ಮವರು ಅಂತ ಬಿಟ್ಟಿದ್ದೆ' ಎಂಬ ಮಾತನ್ನೂ ಆಡಿದ್ದಾರೆ. ಒಂದು ವೇಳೆ ಈ ಮೂವರಲ್ಲಿ ಒಬ್ಬರು ಬೇರೆ ಧರ್ಮದವರೋ ಅಥವಾ ಬೇರೆ ಸಮುದಾಯದವರೋ ಆಗಿದ್ದರೆ ಪರಿಸ್ಥಿತಿ ಬೇರೆಯದೇ ಬಣ್ಣ ಪಡೆದುಕೊಳ್ಳುತ್ತಿತ್ತು. ಆ ಲೆಕ್ಕಾಚಾರ ಏನೇ ಇರಲಿ, ರಾಜಕೀಯವೆಂದರೆ ಪುಂಡರ ಕೊನೆಯ ಆಶ್ರಯ ತಾಣ ಎಂಬ ಮಾತು ಸುಳ್ಳಲ್ಲ ಎನ್ನುವುದಕ್ಕೆ ಈ ಘಟನೆ ನಿದರ್ಶನದಂತಿದೆ

ಟಿ. ಜಯರಾಂ, ಕೋಲಾರ

ವಂಚನೆ–ಕಿರಿಕಿರಿ ತಡೆಗೆ ಕನ್ನಡವೇ ಶ್ರೀರಕ್ಷೆ!

ಬ್ಯಾಂಕ್‌ಗಳು ಅಥವಾ ಜೀವವಿಮೆ ಏಜೆಂಟರಿಂದ ಆಗಾಗ ನಮ್ಮ ಮೊಬೈಲ್‌ಗಳಿಗೆ ಕರೆ ಬರುತ್ತಿರುತ್ತದೆ. ಕರೆ ಸ್ವೀಕರಿಸಿದ ತಕ್ಷಣ ನಾವು ಕನ್ನಡದಲ್ಲಿ 'ಏನು ಬೇಕಿತ್ತು?' ಎಂದು ಪ್ರಶ್ನಿಸಿದರೆ ಅವರಿಗೆ ಏನೂ ಅರ್ಥವಾಗುವುದಿಲ್ಲ. ಸೈಬರ್ ವಂಚಕರು ಹಿಂದಿ–ಇಂಗ್ಲಿಷ್ ಬಳಸುತ್ತಾರೆ. ನಾವು ಕನ್ನಡದಲ್ಲಿ ಮಾತು ಮುಂದುವರಿಸಿದರೆ ಅವರು ಕರೆ ಕಡಿತ ಮಾಡುತ್ತಾರೆ. ಅಪರಿಚಿತ ಮಾರಾಟಗಾರರ ಕಿರಿ ಕಿರಿ ಹಾಗೂ ಸೈಬರ್ ವಂಚನೆಯಿಂದ ತಪ್ಪಿಸಿಕೊಳ್ಳಲು 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎನ್ನುವುದನ್ನು ಅನುಸರಿಸುವುದು ಅತ್ಯುತ್ತಮ ಮಾರ್ಗ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಬೆಂಗಳೂರು ಅಕ್ರಮಗಳ ತವರಾಗದಿರಲಿ

ಹಳ್ಳಿಗಳಲ್ಲಿ ನಿಯಮ ತಪ್ಪಿದರೆ ಅಲ್ಲಿನ ಹಿರಿಯರು ಪ್ರಶ್ನಿಸುತ್ತಾರೆ ಅಥವಾ ಪಂಚಾಯಿತಿ ಪ್ರಶ್ನೆ ಮಾಡುತ್ತದೆ. ಆದರೆ ಬೆಂಗಳೂರಿನಲ್ಲಿ ನಿಯಮ ಮೀರಿದರೂ ಕೇಳುವವರಿಲ್ಲ ಎಂಬ ಭಾವನೆ ಜನರಲ್ಲಿ ಮೂಡಿದೆ. ಆ ಕಾರಣದಿಂದಲೇ ಇಲ್ಲಿ ವಿದೇಶಿ ನುಸುಳುಕೋರರು ನೆಲೆಸಿರುವುದು ಸಾಧ್ಯವಾಗಿದೆ. ಪೊಲೀಸ್ ಇಲಾಖೆ, ವಲಸೆ ಇಲಾಖೆ ಮತ್ತು ಸರ್ಕಾರ ಈ ವಿಷಯದಲ್ಲಿ ಗಂಭೀರವಾಗಿ ಎಚ್ಚೆತ್ತುಕೊಳ್ಳಬೇಕು. ವಲಸಿಗರ ಸಮಗ್ರ ಸಮೀಕ್ಷೆ ನಡೆಸಬೇಕು. ವೀಸಾ ಅವಧಿ ಮುಗಿದ ವಿದೇಶಿಯರ ಮೇಲೆ ತಕ್ಷಣ ಕ್ರಮ ಜರುಗಬೇಕು. ನಕಲಿ ದಾಖಲೆ ನೀಡುವ ಮಧ್ಯವರ್ತಿಗಳಿಗೆ ಕಠಿಣ ಶಿಕ್ಷೆ ಅಗತ್ಯ. ಬೆಂಗಳೂರು ಕಾನೂನು ಪಾಲನೆಯ ನಗರವಾಗಬೇಕು, ಅಕ್ರಮದ ತಾಣವಾಗಬಾರದು. ಸರ್ಕಾರ ವಿಳಂಬ ಮಾಡದೆ ಜನರ ಭದ್ರತೆ ಮತ್ತು ಉದ್ಯೋಗ ರಕ್ಷಣೆಗೆ ಮುಂದಾಗಬೇಕು.

ಹನುಮಂತ ಆರ್. ಬೇಕಮಲದಿನ್ನಿ, ಬಾಗಲಕೋಟ

ಚುರುಮುರಿ

ಕುರ್ಚಿ ಜ್ವರ!



• ಬಿ.ಎನ್. ಮಲ್ಲೇಶ್

ಶುಕ್ರವಾರದ ಸಂತೇಲಿ ಕೈಯಪ್ಪ, ಕಮಲವ್ವ, ತೆನೆಯಕ್ಕ ಅಕಸ್ಮಾತ್ ಭೇಟಿಯಾಗಿ ಕಷ್ಟ ಸುಖ ಹಂಚಿಕೊಂಡರು.

'ಏನ್ ಕೈಯಪ್ಪ, ಹಬ್ಬ ಜೋರಾ? ನಿಮ್ಮಲ್ಲಿ ಯಾರಿಗೆ ಬೇವು, ಯಾರಿಗೆ ಬೆಲ್ಲ?' ಕಮಲವ್ವ ನಗುತ್ತಾ ಕೇಳಿದಳು.

'ಇದು ಬೇವು–ಬೆಲ್ಲದ ಹಬ್ಬ ಅಲ್ಲ, ಎಳ್ಳು–ಬೆಲ್ಲದ್ದು. ಎಳ್ಳು–ಬೆಲ್ಲ ತಿಂದು ಈಗಲಾದ್ರೂ ಒಳ್ಳೇ ಮಾತಾಡು...' ಕೈಯಪ್ಪ ಮಾತಲ್ಲೇ ತಿವಿದ.

'ಆತು ಬಿಡಪ್ಪ, ಕುರ್ಚಿ ಕದನ ಎಲ್ಲಿಗೆ ಬಂತು? ಈಗಲಾದ್ರೂ ಬಗೆಹರೀತದೋ ಅಥ್ವ ಕ್ರಾಂತಿ ಗೀಂತಿ ಆಗ್ತದೋ...'

'ನೀನು ಟೀವಿ ರಿಪೋರ್ಟ್ರು ತರ ಮಾತಾಡ್ಬೇಡ, ಸೂರ್ಯ ದಿಕ್ಕು ಬದಲಿಸಿದಾನೆ, ಎಲ್ಲ ಒಳ್ಳೇದಾಗುತ್ತೆ ನೋಡ್ತಿರು...'

'ಕರೆಕ್ಟ್... ಮೊನ್ನೆ ಏರ್‌ಪೋರ್ಟ್‌ಲ್ಲಿ ರಾಹುಲ್ ಗಾಂಧಿ ಹತ್ರ ಮಾತಾಡೋವಾಗ ಡಿಕೆಶಿ ಸಾಹೇಬ್ರು ಯಾವ ದಿಕ್ಕಿಗೆ ನಿಂತಿದ್ರು?' ತೆನೆಯಕ್ಕ ಏನೋ ಲೆಕ್ಕ ಹಾಕುವ ಹಾಗೆ ಕೇಳಿದಳು.

'ಅವ್ರು ಯಾವ ದಿಕ್ಕಿಗಾದ್ರು ನಿಂತ್ಕಳ್ಳಿ, ಕುರ್ಚಿ ದಿಕ್ಕು ತಪ್ಪದಿದ್ರೆ ಸಾಕು...' ಕಮಲವ್ವ ನಕ್ಕಳು.

'ಅಲ್ಲ, ನಿಮ್ ಪಕ್ಷದ ನಾಯಕರ ಮುಖಗಳೇ ದಿಕ್ಕಿಗೊಂದೊಂದು ಆಗಿದಾವೆ, ಮೊದ್ಲು ಅವನ್ನ ನೆಟ್ಟಗೆ ಮಾಡ್ಕಳಿ...' ಕೈಯಪ್ಪನಿಗೆ ಸಿಟ್ಟು ಬಂತು.

'ಹೋಗ್ಲಿ ಬಿಡಪ್ಪ, ಅಂತೂ ರಾಹುಲ್ ಗಾಂಧಿ ಭೇಟಿಯಾಗೋ ಡಿಕೆಶಿ ಸಾಹೇಬ್ರ ಪ್ರಾರ್ಥನೆ ಫಲ ಕೊಡ್ತು... ಏನಂದ್ರಂತೆ ರಾಗಾ?'

'ಅಂಥದೇನಿಲ್ಲ, ಊಟ ಆಯ್ತಾ, ಆರೋಗ್ಯವಾ ಅಂತ ಕೇಳಿದ್ರಂತೆ...'

'ಅಬಾಬಬ... ಬಾಳ ದೊಡ್ಡ ಮಾತುಕತೆ... ಅದ್ಕೆ ಡಿಕೆಶಿ ಏನಂದ್ರಂತೆ?'

'ಇನ್ನೇನಂದಿರ್ತಾರೆ, ಹುಷಾರಿಲ್ಲ, ಎರಡು ತಿಂಗಳಿಂದ ಜ್ವರ ಅಂದಿರ್ತಾರೆ...' ತೆನೆಯಕ್ಕ ನಕ್ಕಳು.

'ಜ್ವರಾನ? ಯಾವ ಜ್ವರ?'

'ಇನ್ಯಾವುದು, ಕುರ್ಚಿ ಜ್ವರ! ಆ ಜ್ವರ ಬಿಟ್ರೆ ಈಗ ಬಿಡಬೇಕು, ಇಲ್ಲದಿದ್ರೆ ಮುಂದೆ ಮುಹೂರ್ತ ಇಲ್ಲ...'

ತೆನೆಯಕ್ಕನ ಮಾತಿಗೆ ಸಿಟ್ಟಿಗೆದ್ದ ಕೈಯಪ್ಪ, 'ನಿಮ್ಗೆ ಮಾಡಾಕೆ ಕೆಲ್ಸ ಇಲ್ಲ...' ಎನ್ನುತ್ತಾ ಎದ್ದು ಹೋದ.

ಕಮಲವ್ವ, ತೆನೆಯಕ್ಕ ಒಟ್ಟಿಗೇ ನಕ್ಕರು.

ಸಂಗತ

ಕರ್ನಾಟಕಕ್ಕೆ ಒಬ್ಬರೇ ದೇವರಾಜ ಅರಸು!

ಜನಪರ ರಾಜಕಾರಣ, ಹಿಂದುಳಿದವರಿಗೆ ಕಲ್ಪಿಸಿಕೊಟ್ಟ ಅವಕಾಶ ಹಾಗೂ ಮತದಾರರ ಬಗೆಗಿನ ನಂಬಿಕೆ, ಎಲ್ಲ ವಿಷಯಗಳಲ್ಲೂ ದೇವರಾಜ ಅರಸು ಅವರಿಗೆ ಅವರೇ ಸಾಟಿ.


• ಆರ್. ರಘು (ಕೌಟಿಲ್ಯ)

ಮುಖ್ಯಮಂತ್ರಿ ಕುರ್ಚಿಯಲ್ಲಿ ದೇವರಾಜ ಅರಸು ಅವರಿಗಿಂತ ಹೆಚ್ಚಿನ ದಿನ ತಾವು ಕುಳಿತಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಭ್ರಮದಲ್ಲಿದ್ದಾರೆ. ದಿನದ ಲೆಕ್ಕದಲ್ಲಿ ಅವರು ಮುಂದಿರಬಹುದು. ಸಾಧನೆಯ ಲೆಕ್ಕದಲ್ಲಿ, ಸಾಮಾಜಿಕ ಬದ್ಧತೆಯ ಲೆಕ್ಕದಲ್ಲಿ, ಜನಾನುರಾಗದ ಲೆಕ್ಕದಲ್ಲಿ ಅವರು ದೇವರಾಜ ಅರಸರ ಹತ್ತಿರಕ್ಕೂ ಬರುವುದಿಲ್ಲ.

ಅರಸು ಅವರ ಸ್ವಕ್ಷೇತ್ರ ಹುಣಸೂರು. 1962ರಲ್ಲಿ ಅವರು ಅಲ್ಲಿಂದ ಅವಿರೋಧವಾಗಿ ಆಯ್ಕೆಯಾಗಿದ್ದರು. ಯಾವುದೇ ಕಾರಣಕ್ಕೂ ಅವರು ತಮ್ಮ ಕ್ಷೇತ್ರ ಬಿಟ್ಟು ಹೋಗಲಿಲ್ಲ. ಸೋಲಿಲ್ಲದ ಸರದಾರ ಎನಿಸಿಕೊಂಡಿದ್ದರು. ಮುಖ್ಯಮಂತ್ರಿಯಾಗಿಯೂ ಸತತವಾಗಿ ದಾಖಲೆ ಅವಧಿಗೆ ಇದ್ದರು. ಆದರೆ ಸಿದ್ದರಾಮಯ್ಯ ಅವರು 2013ರಿಂದ 2018ರವರೆಗೆ ಮುಖ್ಯಮಂತ್ರಿ ಆಗಿದ್ದರು. ಮತ್ತೆ 2023ರಲ್ಲಿ ಮುಖ್ಯಮಂತ್ರಿ ಆಗಿದ್ದಾರೆ. ದೇವರಾಜ ಅರಸರು ನಾನ್‌ಸ್ಟಾಪ್ ಮುಖ್ಯಮಂತ್ರಿ, ಸಿದ್ದರಾಮಯ್ಯ ಅವರು ಹಾಗಲ್ಲ.

ಸಿದ್ದರಾಮಯ್ಯನವರು ತವರು ಜಿಲ್ಲೆ, ತವರು ಕ್ಷೇತ್ರವನ್ನು ನಂಬದೇ ರಾಜಕೀಯ ನೆಲೆಗಾಗಿ ಬಾದಾಮಿ–ಕೊಪ್ಪಳಗಳಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದಾರೆ. ತಮಗೆ ರಾಜಕೀಯ ಜನ್ಮ ನೀಡಿದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 3 ಬಾರಿ ಸೋತಿದ್ದಾರೆ. (1989, 1999, 2018). ಈಗ ವರುಣಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

'ಉಳುವವನೇ ನೆಲದೊಡೆಯ' ಎಂಬ ಭೂ ಸುಧಾರಣಾ ಕಾಯ್ದೆ ದೇಶದಲ್ಲಿ ಇವತ್ತಿಗೂ ಚಾರಿತ್ರಿಕ ದಾಖಲೆ. ಬಡವರು, ರೈತರನ್ನು ಸಾಲದ ಸುಳಿಯಿಂದ ರಕ್ಷಿಸಲು ತಂದ ಋಣಮುಕ್ತ ಕಾಯ್ದೆ, ವಿಧವಾ ವೇತನ, ವೃದ್ಧಾಪ್ಯ ವೇತನ, ಉಚಿತ ಭಾಗ್ಯ ಜ್ಯೋತಿ ಯೋಜನೆ, ಜೀತ ಪದ್ಧತಿ ಹಾಗೂ ಮಲ ಹೊರುವ ಅನಿಷ್ಟ ಪದ್ಧತಿಯ ರದ್ದತಿ, ಅರಸರ ಮಾತೃಹೃದಯಕ್ಕೆ ಉದಾಹರಣೆಯಂತಿವೆ.



ದೇವರಾಜ ಅರಸರು ಅವಕಾಶ ವಂಚಿತ ಸಮಾಜಗಳು ಹಾಗೂ ಆರ್ಥಿಕ ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು, ಸರ್ಕಾರಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ ದೊರಕಿಸಿಕೊಡಲು ಎಲ್.ಜಿ. ಹಾವನೂರು ಆಯೋಗ ರಚಿಸಿದರು; ಕೇವಲ 3 ವರ್ಷಗಳ ಅವಧಿಯಲ್ಲಿ ವರದಿ ಸ್ವೀಕರಿಸಿ ಅದನ್ನು ಅನುಷ್ಠಾನಗೊಳಿಸಿದರು. ಹಾವನೂರು ವರದಿ ಆಧಾರದ ಮೇಲೆ ಇವತ್ತಿಗೂ ರಾಜ್ಯದಲ್ಲಿ ಹಿಂದುಳಿದ ಹಾಗೂ ಆರ್ಥಿಕ ದುರ್ಬಲರಿಗೆ ಮೀಸಲಾತಿ ಹಂಚಿಕೆಯಾಗುತ್ತಿದೆ.

ಸಿದ್ದರಾಮಯ್ಯ ಅವರು 2014ರಲ್ಲಿ ಹಿಂದುಳಿದವರಿಗೆ ನ್ಯಾಯ ದೊರಕಿಸಿ ಕೊಡುತ್ತೇನೆಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಅವರ ಅಧ್ಯಕ್ಷತೆಯಲ್ಲಿ ಸಾಮಾಜಿಕ ಸಮೀಕ್ಷೆ ಹಾಗೂ ಜಾತಿಗಣತಿ ನಡೆಸಿದ್ದರು. ಆ ವರದಿಯನ್ನು 10 ವರ್ಷಗಳವರೆಗೂ ಸ್ವೀಕರಿಸುವ ಎದೆಗಾರಿಕೆ ತೋರಿಸಲಿಲ್ಲ. ನಂತರ ಅದನ್ನು ಕಸದಬುಟ್ಟಿಗೆ ಎಸೆದರು. ನಾಗಮೋಹನ ದಾಸ್ ಆಯೋಗದ ವರದಿಯ ಅನುಸಾರ ಪರಿಶಿಷ್ಟ ಜಾತಿಯ 59 ಅಲೆಮಾರಿ ಸಮುದಾಯಗಳಿಗೆ ನೀಡಬೇಕಾಗಿದ್ದ ಶೇ 1 ಮೀಸಲಾತಿಯ ಶಿಫಾರಸ್ಸನ್ನು ಪಕ್ಕಕ್ಕೆ ಸರಿಸಿ, ಅನಾಥ ಪ್ರಜ್ಞೆಯ ಆ ಸಮಾಜಗಳ ಸಾಂವಿಧಾನಿಕ ಹಕ್ಕು ಹಾಗೂ ಸಾಮಾಜಿಕ ನ್ಯಾಯದ ಅವಕಾಶದ ಬಾಗಿಲನ್ನು ಮುಚ್ಚಿದರು.

ಮೂಲ ಮೈಸೂರಿಗರಾದರೂ ಮೈಸೂರು ಹೆಸರಿನ ರಾಜ್ಯವನ್ನು 'ಕರ್ನಾಟಕ' ಎಂದು ನಾಮಕರಣ ಮಾಡಿದ ಅರಸರು ಕರ್ನಾಟಕ ರಾಜಕಾರಣದಲ್ಲಿ ಸ್ವಾಭಿಮಾನದ ಸಂಕೇತ ಆಗಿದ್ದಾರೆ. ಅವರಿಗೆ ಹೋರಾಟದ ಹಿನ್ನೆಲೆ ಇತ್ತು. ಸಿದ್ದರಾಮಯ್ಯ ಯಾವುದೇ ಹೋರಾಟದಲ್ಲಿ ಮಿಂದು ಎದ್ದವರಲ್ಲ. ಸಿದ್ದರಾಮಯ್ಯನವರ ಬೆನ್ನಿಗಿರುವಂತೆ ದೇವರಾಜ ಅರಸರ ಬೆನ್ನಿಗೆ ಜಾತಿಯ ಬಲ ಇರಲಿಲ್ಲ.

ಅರಸರು ಪ್ರತಿ ಹಂತದಲ್ಲಿ ನೋವು ಮತ್ತು ಒತ್ತಡವನ್ನು ಎದುರಿಸಿದರು. ರಾಜಕೀಯ ಪಿತೂರಿಗಳ ವ್ಯೂಹವನ್ನು ಮೆಟ್ಟಿ ನಿಂತು ರಾಜಕಾರಣ ಮಾಡಿದರು. ರಾಮಕೃಷ್ಣ ಹೆಗಡೆಯವರ ಕಾಲದಿಂದಲೂ ನಿರಂತರ ಅಧಿಕಾರವನ್ನು ಅನುಭವಿಸಿಕೊಂಡು ಬಂದಿದ್ದ ಸಿದ್ದರಾಮಯ್ಯನವರು ಜನತಾದಳದಿಂದ ಹೊರಬರುವವರೆಗೂ ಉಪ ಮುಖ್ಯಮಂತ್ರಿ, ಹಣಕಾಸು ಮಂತ್ರಿ ಸ್ಥಾನ ಸೇರಿ ಒಂದಲ್ಲಾ ಒಂದು ಅಧಿಕಾರದ ಸ್ಥಾನ ಅಲಂಕರಿಸಿದ್ದರು.

ಮೈಸೂರು ಭಾಗದ ರೈತರ ಬದುಕನ್ನು ಹಸನು ಮಾಡಲಿದ್ದ 'ವರುಣಾ ನಾಲೆ' ಯೋಜನೆಯನ್ನು ಅರಸರು ಕೈಗೆತ್ತಿಕೊಂಡಾಗ ತಪ್ಪು ಗ್ರಹಿಕೆಯಿಂದ ಮಂಡ್ಯ ಭಾಗದ ರೈತರು ಬಹುದೊಡ್ಡ ಚಳವಳಿಯನ್ನು ಆರಂಭಿಸಿದರು. ಮಂಡ್ಯದ ಪಾಲಿಗೆ ಅರಸರನ್ನು ಖಳನಾಯಕನಂತೆ ಬಿಂಬಿಸಿ, ಅವರನ್ನು ಮಂಡ್ಯದಲ್ಲಿ ಅಡ್ಡಗಟ್ಟಿ ಅಪಮಾನಿಸಲಾಯಿತು. ಆದರೆ ತಮಗಾದ ಅಪಮಾನ, ನೋವನ್ನು ನುಂಗಿಕೊಂಡು ದಿಟ್ಟತನದಿಂದ ವರುಣಾ ನಾಲೆಯ ಯೋಜನೆಯನ್ನು ಅರಸರು ಅನುಷ್ಠಾನಗೊಳಿಸಿದರು. ನಾಲೆಯ ಸುತ್ತಲಿನ ಪ್ರದೇಶವನ್ನು ಹಸಿರುವಲಯವನ್ನಾಗಿ ಘೋಷಿಸಿ, ರೈತರ ಜಮೀನನ್ನು ಉಳಿಸಿ, ಹಸಿರು ಹಾಗೂ ಧಾನ್ಯ ಸಂಪತ್ತನ್ನು ಉಳಿಸಬೇಕಾದ ಸಿದ್ದರಾಮಯ್ಯನವರು ಅಂತಹ ಪ್ರಯತ್ನಕ್ಕೆ ಮುಂದಾಗಲೇ ಇಲ್ಲ.

ಚುನಾವಣೆಯಲ್ಲಿ ಸೋತು ಮೂಲೆಗೆ ಸೇರಿದ್ದ ಇಂದಿರಾ ಗಾಂಧಿ ಅವರನ್ನು ಕರ್ನಾಟಕಕ್ಕೆ ಕರೆತಂದು ಚಿಕ್ಕಮಗಳೂರಿನ ಉಪಚುನಾವಣೆಯಲ್ಲಿ ಗೆಲ್ಲಿಸಿ, ಲೋಕಸಭೆಗೆ ಕಳುಹಿಸಿಕೊಟ್ಟು ಇಂದಿರಾ ಗಾಂಧಿಯವರಿಗೆ ರಾಜಕೀಯ ಮರು ಜನ್ಮ ನೀಡಿದವರು ದೇವರಾಜ ಅರಸರು. ಅಂಥ ಅರಸರನ್ನೇ ಪಕ್ಷದಿಂದ ಉಚ್ಚಾಟಿಸಿ ಅವರ ರಾಜಕೀಯ ಭವಿಷ್ಯಕ್ಕೆ ಕಲ್ಲು ಹಾಕಲಾಯಿತು. ಇಲ್ಲವಾಗಿದ್ದರೆ ದೇವರಾಜ ಅರಸರಿಗೆ ಹತ್ತು ವರ್ಷ ಮುಖ್ಯಮಂತ್ರಿಯಾಗಿ ಐತಿಹಾಸಿಕ ದಾಖಲೆ ಬರೆಯುವ ಎಲ್ಲ ಅವಕಾಶವೂ ಇತ್ತು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಭಾರತ–ಐರೋಪ್ಯ ಒಕ್ಕೂಟ ಎಫ್‌ಟಿಎ ಸನ್ನಿಹಿತ

ಸರಿದೂಗುವುದೇ ಟ್ರಂಪ್ ಸುಂಕ ಹೇರಿಕೆಯ ನಷ್ಟ?

ಡೊನಾಲ್ಡ್ ಟ್ರಂಪ್ ಅವರು ಹೆಚ್ಚುವರಿ ಸುಂಕ ಹೇರಿದ ನಂತರ ಭಾರತ–ಅಮೆರಿಕ ಸಂಬಂಧ ಹದಗೆಟ್ಟಿದೆ. ಉಭಯ ದೇಶಗಳಿಗೆ ವ್ಯಾಪಾರ ಒಪ್ಪಂದದ ಮಾತುಕತೆಯನ್ನು ಅಂತಿಮಗೊಳಿಸಲು ಇನ್ನೂ ಸಾಧ್ಯವಾಗಿಲ್ಲ. ಈ ಮಧ್ಯೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಭಾರತ ಮತ್ತು ಐರೋಪ್ಯ ಒಕ್ಕೂಟ ಸಜ್ಜುಗೊಂಡಿವೆ. ಇದೇ 27ರಂದು ಉಭಯ ಪಕ್ಷಗಳೂ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದು ಹೇಳಲಾಗಿದೆ. ಟ್ರಂಪ್ ಸುಂಕ ರಂಪಾಟವು ಭಾರತ ಮಾತ್ರವಲ್ಲದೆ ಜಾಗತಿಕ ವ್ಯಾಪಾರದ ಮೇಲೆ ಪರಿಣಾಮ ಬೀರಿರುವ ಸಂದರ್ಭದಲ್ಲಿ ಈ ಒಪ್ಪಂದಕ್ಕೆ ಹೆಚ್ಚಿನ ಪ್ರಾಮುಖ್ಯ ಇದೆ

ಪ್ರಜಾವಾಣಿ ವಾರ್ತೆ



ಭಾರತ ಮತ್ತು 27 ರಾಷ್ಟ್ರಗಳನ್ನೊಳಗೊಂಡ ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ನಡೆಯುವುದು ನಿಚ್ಚಳವಾಗಿದೆ. ಇದೇ 27ರಂದು ನವದೆಹಲಿಯಲ್ಲಿ ನಡೆಯಲಿರುವ ಭಾರತ–ಐರೋಪ್ಯ ಒಕ್ಕೂಟ ಶೃಂಗಸಭೆಯಲ್ಲಿ ಒಪ್ಪಂದಕ್ಕೆ ಸಹಿ ಬೀಳುವುದು ಬಹುತೇಕ ಖಚಿತವಾಗಿದೆ. ಐರೋಪ್ಯ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಮತ್ತು ಐರೋಪ್ಯ ಕೌನ್ಸಿಲ್‌ನ ಅಧ್ಯಕ್ಷ ಆ್ಯಂಟೋನಿಯೊ ಕೋಸ್ಟಾ ಅವರು 26ರಂದು ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮರು ದಿನವೇ ಶೃಂಗಸಭೆ ಆರಂಭವಾಗಲಿದೆ.

ಮಹತ್ವ ಏಕೆ?

ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ ಭಾರತ ಮತ್ತು ಐರೋಪ್ಯ ಒಕ್ಕೂಟಗಳು 2007ರಲ್ಲೇ ಮಾತುಕತೆ ಆರಂಭಿಸಿದ್ದವು. ಆದರೆ, ಮುಕ್ತ ಮಾರುಕಟ್ಟೆಯ ಲಭ್ಯತೆ ಯಾವ ಪ್ರಮಾಣದಲ್ಲಿ ಇರಬೇಕು ಎಂಬುದೂ ಸೇರಿದಂತೆ ವಿವಿಧ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿದ್ದರಿಂದ 2013ರಲ್ಲಿ ಮಾತುಕತೆ ನಿಂತಿತ್ತು. 9 ವರ್ಷಗಳ ಬಳಿಕ, 2022ರ ಜೂನ್‌ನಲ್ಲಿ ಮಾತುಕತೆ ಪುನರಾರಂಭಗೊಂಡಿತ್ತು. ಈವರೆಗೆ ಉಭಯ ಪಕ್ಷಗಳು 16 ಸುತ್ತು ಮಾತುಕತೆ ನಡೆಸಿವೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ಶೇ 50ರಷ್ಟು ಸುಂಕ ಹೇರಿದ ನಂತರ ಎರಡೂ ದೇಶಗಳ ನಡುವಿನ ಬಾಂಧವ್ಯ ಹಳಸಿರುವುದು ಮತ್ತು ವ್ಯಾಪಾರ ಒಪ್ಪಂದ ಮಾತುಕತೆಯು ಫಲಪ್ರದವಾಗದ ಸಂದರ್ಭದಲ್ಲಿ ಈ ಒಪ್ಪಂದ ನಡೆಯುತ್ತಿರುವುದು ಹೆಚ್ಚು ಮಹತ್ವ ಪಡೆದಿದೆ.

ಒಪ್ಪಂದವು ಐರೋಪ್ಯ ಸದಸ್ಯ ರಾಷ್ಟ್ರಗಳಿಗೆ ಭಾರತ ಮಾಡುವ ರಫ್ತಿನ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲಿದೆ ಮತ್ತು ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲಿದೆ ಎಂದು ನಿರೀಕ್ಷಿಸಲಾಗಿದೆ.

ನಾಲ್ಕನೇ ಒಪ್ಪಂದ

ರಷ್ಯಾದಿಂದ ತೈಲ ಖರೀದಿಸುತ್ತಿದೆ ಎಂಬ ನೆಪದಲ್ಲಿ ಭಾರತದ ಮೇಲೆ ಟ್ರಂಪ್ ಆಡಳಿತ ಹೇರಿರುವ ಹೆಚ್ಚುವರಿ ಸುಂಕದಿಂದಾಗಿ ಭಾರತದ ರಫ್ತು ಉದ್ಯಮಕ್ಕೆ ಹೊಡೆತ ಬಿದ್ದಿದೆ. ಟ್ರಂಪ್ ಸುಂಕವು ಜಾಗತಿಕ ಮಟ್ಟದಲ್ಲಿ ಸರಕುಗಳ ಪೂರೈಕೆಯ ಮೇಲೂ ಪರಿಣಾಮ ಬೀರಿದೆ. ಸುಂಕದ ಕಾರಣಕ್ಕೆ ಅಮೆರಿಕದೊಂದಿಗಿನ ವ್ಯಾಪಾರದಲ್ಲಿ ಆಗುತ್ತಿರುವ ನಷ್ಟವನ್ನು ಬೇರೆ ದೇಶಗಳೊಂದಿಗೆ ಹೆಚ್ಚು ವ್ಯಾಪಾರ ನಡೆಸಿ ಸರಿದೂಗಿಸಲು ಭಾರತ ಪ್ರಯತ್ನಿಸುತ್ತಿದೆ. ಇದಕ್ಕಾಗಿ ಬೇರೆ ದೇಶಗಳೊಂದಿಗೆ ವ್ಯಾಪಾರ ಮಾತುಕತೆಯನ್ನು ತೀವ್ರಗೊಳಿಸಿದೆ.

ಕಳೆದ ವರ್ಷದ ಅಕ್ಟೋಬರ್‌ನಿಂದ ಭಾರತವು ಮೂರು ಎಫ್‌ಟಿಎಗಳನ್ನು (ಯುರೋಪಿನ ಮುಕ್ತ ವ್ಯಾಪಾರ ಒಕ್ಕೂಟ, ಒಮಾನ್, ನ್ಯೂಜಿಲೆಂಡ್) ಅಂತಿಮಗೊಳಿಸಿದೆ (ಕಳೆದ ವರ್ಷದ ಜುಲೈನಲ್ಲಿ ಬ್ರಿಟನ್ ಜೊತೆಗೂ ಒಪ್ಪಂದ ಮಾಡಿಕೊಂಡಿದೆ). ಐರೋಪ್ಯ ಒಕ್ಕೂಟದೊಂದಿಗೆ ಒಪ್ಪಂದ ಏರ್ಪಟ್ಟರೆ ನಾಲ್ಕನೆಯದ್ದಾಗುತ್ತದೆ.

ಆಧಾರ: ಪಿಟಿಐ, ಐರೋಪ್ಯ ಒಕ್ಕೂಟ ವೆಬ್‌ಸೈಟ್, ಯುರಾಕ್ಟಿವ್.ಕಾಂ

ಐರೋಪ್ಯ ಒಕ್ಕೂಟ ಸದಸ್ಯ ರಾಷ್ಟ್ರಗಳು



ಆಸ್ಟ್ರಿಯಾ, ಬೆಲ್ಜಿಯಂ, ಬಲ್ಗೇರಿಯಾ, ಕ್ರೊವೇಶಿಯಾ, ಸೈಪ್ರಸ್, ಜೆಕ್ ರಿಪಬ್ಲಿಕ್, ಡೆನ್ಮಾರ್ಕ್, ಎಸ್ಟೋನಿಯಾ, ಫಿನ್ಲೆಂಡ್, ಫ್ರಾನ್ಸ್, ಜರ್ಮನಿ, ಗ್ರೀಸ್, ಹಂಗರಿ, ಐರ್ಲೆಂಡ್, ಇಟಲಿ, ಲಾಟ್ವಿಯಾ, ಲಿಥುವೇನಿಯಾ, ಲಕ್ಸೆಂಬರ್ಗ್, ಮಾಲ್ಟ, ನೆದರ್ಲೆಂಡ್ಸ್, ಪೋಲೆಂಡ್, ಪೋರ್ಚುಗಲ್, ರೊಮೇನಿಯಾ, ಸ್ಲೊವಾಕಿಯಾ, ಸ್ಲೊವೇನಿಯಾ, ಸ್ಪೇನ್, ಸ್ವೀಡನ್

45 ಕೋಟಿ ಒಟ್ಟು ಜನಸಂಖ್ಯೆ

ಜರ್ಮನಿ, ಇಟಲಿ, ಫ್ರಾನ್ಸ್, ಸ್ಪೇನ್, ಬೆಲ್ಜಿಯಂ, ನೆದರ್ಲೆಂಡ್ಸ್, ಡೆನ್ಮಾರ್ಕ್‌ಗಳೊಂದಿಗೆ ಭಾರತವು ಉತ್ತಮ ವ್ಯಾಪಾರ ಸಂಬಂಧ ಹೊಂದಿದೆ.

19.5 ಲಕ್ಷ ಕೋಟಿ ಡಾಲರ್ ಐರೋಪ್ಯ ಒಕ್ಕೂಟದ ಜಿಡಿಪಿ ಗಾತ್ರ


2.9 ಲಕ್ಷ ಕೋಟಿ ಡಾಲರ್ ವಿವಿಧ ದೇಶಗಳಿಗೆ ಮಾಡುವ ವಾರ್ಷಿಕ ರಫ್ತಿನ ಮೌಲ್ಯ

2.6 ಲಕ್ಷ ಕೋಟಿ ಡಾಲರ್ ಹೊರದೇಶಗಳಿಂದ ವಾರ್ಷಿಕವಾಗಿ ಮಾಡುವ ಆಮದು ಮೌಲ್ಯ

ಏನಿದು ಎಫ್‌ಟಿಎ?

ಮುಕ್ತ ವ್ಯಾಪಾರ ಒಪ್ಪಂದ– ಫ್ರೀ ಟ್ರೇಡ್ ಅಗ್ರಿಮೆಂಟ್ ಅಥವಾ ಎಫ್‌ಟಿಎ ಎನ್ನುವುದು ಎರಡು ಅಥವಾ ಅದಕ್ಕಿಂತ ಹೆಚ್ಚಿನ ರಾಷ್ಟ್ರಗಳೊಂದಿಗೆ ನಡೆಯುವ ವ್ಯಾಪಾರ ಒಪ್ಪಂದ. ರಾಷ್ಟ್ರಗಳ ನಡುವಿನ ವ್ಯಾಪಾರದಲ್ಲಿ ಇರುವ ಹೆಚ್ಚಿನ ಸುಂಕ, ತೆರಿಗೆ ಸೇರಿದಂತೆ ಇನ್ನಿತರ ಅಡೆತಡೆಗಳನ್ನು ನಿವಾರಿಸುವ ಪ್ರಯತ್ನವೂ ಹೌದು. ಒಪ್ಪಂದದ ಅಡಿಯಲ್ಲಿ ಸುಂಕ/ತೆರಿಗೆಗೆ ಸಂಪೂರ್ಣ ವಿನಾಯಿತಿ ನೀಡಲಾಗುತ್ತದೆ ಅಥವಾ ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲಾಗುತ್ತದೆ. ಉಭಯ ದೇಶಗಳ ನಡುವೆ ದ್ವಿಪಕ್ಷೀಯ ವ್ಯಾಪಾರ ಹೆಚ್ಚಿಸುವುದಕ್ಕಾಗಿ ನಿಯಮಗಳನ್ನೂ ಸರಳಗೊಳಿಸಲಾಗುತ್ತದೆ.

ಭಾರತ–ಐರೋಪ್ಯ ಒಕ್ಕೂಟ ದ್ವಿಪಕ್ಷೀಯ ಸರಕು ವ್ಯಾಪಾರ



17% ಭಾರತವು ಮಾಡುತ್ತಿರುವ ಒಟ್ಟು ರಫ್ತಿನಲ್ಲಿ ಐರೋಪ್ಯ ಒಕ್ಕೂಟಕ್ಕೆ ಮಾಡಲಾಗುತ್ತಿರುವ ರಫ್ತಿನ ಪ್ರಮಾಣ

9% ಐರೋಪ್ಯ ಒಕ್ಕೂಟ ಮಾಡುವ ರಫ್ತಿನಲ್ಲಿ ಭಾರತಕ್ಕೆ ಮಾಡಲಾಗುತ್ತಿರುವ ರಫ್ತಿನ ಪ್ರಮಾಣ

ಎಫ್‌ಡಿಐ ಹೆಚ್ಚಳ ನಿರೀಕ್ಷೆ

ಒಪ್ಪಂದ ನಡೆದರೆ ಎರಡೂ ಕಡೆಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಹರಿವು ಇನ್ನಷ್ಟು ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ.



ಐರೋಪ್ಯ ಒಕ್ಕೂಟದ ಸುಮಾರು 6,000 ಕಂಪನಿಗಳು ಭಾರತದಲ್ಲಿ ಕಾರ್ಯಾಚರಿಸುತ್ತಿದ್ದು, 2000ದ ಏಪ್ರಿಲ್‌ನಿಂದ 2024ರ ಸೆಪ್ಟೆಂಬರ್‌ವರೆಗೆ ₹10.59 ಲಕ್ಷ ಕೋಟಿ (ಡಾಲರ್ ಎದುರು ಈಗಿನ ರೂಪಾಯಿ ಮೌಲ್ಯದ ಅಂದಾಜು) ಬಂಡವಾಳ ಹೂಡಿವೆ. ಈ ಅವಧಿಯಲ್ಲಿ ಭಾರತಕ್ಕೆ ಬಂದ ಎಫ್‌ಡಿಐನಲ್ಲಿ ಐರೋಪ್ಯ ಒಕ್ಕೂಟದ ಪಾಲು ಶೇ 16.6.

ಚಿಂತಕರ ಚಾವಡಿ ಜಿಟಿಆರ್‌ಐ ಪ್ರಕಾರ 2000 ಏಪ್ರಿಲ್‌ನಿಂದ 2024ರ ಮಾರ್ಚ್‌ವರೆಗೆ ಭಾರತದ ಕಂಪನಿಗಳು ಯೂರೋಪ್ ರಾಷ್ಟ್ರಗಳಿಗೆ ₹3.61 ಲಕ್ಷ ಕೋಟಿ ನೇರ ಹೂಡಿಕೆ ಮಾಡಿವೆ.

2014ರ ನಂತರ ಏಳು ಎಫ್‌ಟಿಎ

2014ರ ನಂತರ ಭಾರತವು ಏಳು ರಾಷ್ಟ್ರಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಅಂತಿಮಗೊಳಿಸಿದೆ.

1. ಮಾರಿಷಸ್ (2021 ಏಪ್ರಿಲ್)
2. ಆಸ್ಟ್ರೇಲಿಯಾ (2022 ಡಿಸೆಂಬರ್)
3. ಯುಎಇ (2022 ಮೇ)
4. ಒಮಾನ್ (2025 ಡಿಸೆಂಬರ್)
5. ಬ್ರಿಟನ್ (2025 ಜುಲೈ)
6. ಯುರೋಪಿನ ಮುಕ್ತ ವ್ಯಾಪಾರ ಒಕ್ಕೂಟ (ಇಎಫ್‌ಟಿಎ) (ಸ್ವಿಟ್ಜರ್ಲೆಂಡ್, ಐಸ್‌ಲೆಂಡ್, ಲಿಕ್ಟೆನ್‌ಸ್ಟೈನ್, ನಾರ್ವೆ) (2025–ಅಕ್ಟೋಬರ್)
7. ನ್ಯೂಜಿಲೆಂಡ್ (2025 ಡಿಸೆಂಬರ್‌ನಲ್ಲಿ ಮಾತುಕತೆ ಅಂತಿಮವಾಗಿದೆ)

ಮಾರಿಷನ್, ಆಸ್ಟ್ರೇಲಿಯಾ, ಯುಎಇಯೊಂದಿಗಿನ ಒಪ್ಪಂದ ಜಾರಿಯಾಗಿದೆ. ನ್ಯೂಜಿಲೆಂಡ್ ಬಿಟ್ಟು ಉಳಿದ ರಾಷ್ಟ್ರಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ

2014ಕ್ಕೂ ಮೊದಲು ಭಾರತವು ಶ್ರೀಲಂಕಾ, ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ಒಪ್ಪಂದ (ಎಸ್‌ಎಎಫ್‌ಟಿಎ) (ಪಾಕಿಸ್ತಾನ, ನೇಪಾಳ, ಶ್ರೀಲಂಕಾ, ಬಾಂಗ್ಲಾದೇಶ, ಭೂತಾನ್, ಮಾಲ್ದೀವ್ಸ್ ಮತ್ತು ಅಫ್ಗಾನಿಸ್ತಾನ), ನೇಪಾಳ, ಭೂತಾನ್, ಥಾಯ್ಲೆಂಡ್, ಸಿಂಗಪುರ, ಆಸಿಯಾನ್ (ಬ್ರೂನೈ, ಕಾಂಬೋಡಿಯಾ, ಇಂಡೊನೇಷ್ಯಾ, ಲಾವೊಸ್, ಮಲೇಷ್ಯಾ, ಮ್ಯಾನ್ಮಾರ್, ಫಿಲಿಪ್ಪೀನ್ಸ್, ಸಿಂಗಪುರ, ಥಾಯ್ಲೆಂಡ್ ಮತ್ತು ವಿಯೆಟ್ನಾಂ) ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿತ್ತು.

ಒಪ್ಪಂದದಿಂದಾಗುವ ಲಾಭ ಏನು?

ಸರಕು ವ್ಯಾಪಾರದಲ್ಲಿ ಐರೋಪ್ಯ ಒಕ್ಕೂಟವು ಭಾರತದ ಅತಿ ದೊಡ್ಡ ಪಾಲುದಾರ. ಆಮದು ಮಾಡುತ್ತಿರುವ ವಸ್ತುಗಳ ಮೇಲೆ ಹೇರಲಾಗುತ್ತಿರುವ ಸುಂಕಗಳು ಒಪ್ಪಂದದಿಂದಾಗಿ ಕಡಿಮೆಯಾಗಲಿವೆ, ಇಲ್ಲವೇ ಸಂಪೂರ್ಣವಾಗಿ ರದ್ದಾಗಲಿವೆ. ಇದರಿಂದಾಗಿ ತಂತ್ರಜ್ಞಾನ, ಔಷಧಿ, ವಾಹನೋದ್ಯಮ ಮತ್ತು ಜವಳಿ ಸೇರಿದಂತೆ ಹಲವು ಕೈಗಾರಿಕಾ ಕ್ಷೇತ್ರಗಳಿಗೆ ಪ್ರಯೋಜನ ಸಿಗಲಿದೆ.

ಜವಳಿ, ಚರ್ಮೋದ್ಯಮ, ಔಷಧ, ಉಕ್ಕು, ಪೆಟ್ರೋಲಿಯಂ ಉತ್ಪನ್ನಗಳು, ಎಲೆಕ್ಟ್ರಿಕಲ್ ಯಂತ್ರೋಪಕರಣಗಳು ಸೇರಿದಂತೆ ಕಾರ್ಮಿಕರ ಶ್ರಮವನ್ನು ಹೆಚ್ಚು ಬೇಡುವ ಉದ್ದಿಮೆಗಳ ಉತ್ಪನ್ನಗಳಿಗೆ ಸುಂಕ ವಿಧಿಸಬಾರದು ಎಂಬ ಬೇಡಿಕೆಯನ್ನು ಭಾರತ ಮುಂದಿಟ್ಟಿದೆ. ಸುಂಕ ಕಡಿಮೆಯಾದರೆ, ಈ ಉತ್ಪನ್ನಗಳಿಗೆ ಯುರೋಪ್ ಮಾರುಕಟ್ಟೆಯಲ್ಲಿ ಬೇಡಿಕೆ ಸೃಷ್ಟಿಯಾಗಲಿದೆ.

ಕೃಷಿ ಹೊರಕ್ಕೆ

ಎಫ್‌ಟಿಎನಿಂದ ಕೃಷಿ ಉತ್ಪನ್ನಗಳನ್ನು ಕೈಬಿಡಲಾಗಿದೆ ಎಂದು ಐರೋಪ್ಯ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಹೇಳಿರುವುದಾಗಿ ಯುರೋಪಿನ ಮಾಧ್ಯಮಗಳು ವರದಿ ಮಾಡಿವೆ. ಮಾತುಕತೆಯ ಆರಂಭದಿಂದಲೂ ಕೃಷಿ ಕ್ಷೇತ್ರವನ್ನು ಹೊರಗಿಡಲಾಗಿತ್ತು ಎಂದು ಅವರು ಹೇಳಿದ್ದಾರೆ

ಜವಳಿ ಉತ್ಪನ್ನಗಳಿಗೆ ಸದ್ಯ ಅಲ್ಲಿ ಶೇ 12–ಶೇ 13 ಸುಂಕ ವಿಧಿಸಲಾಗುತ್ತಿದೆ.

ಐರೋಪ್ಯ ಒಕ್ಕೂಟವು ವಾಹನಗಳು, ವೈದ್ಯಕೀಯ ಸಲಕರಣೆಗಳು, ವೈನ್, ಸ್ಪಿರಿಟ್‌ಗಳು, ಮಾಂಸ, ಕುಕ್ಕುಟೋದ್ಯಮ ಮತ್ತು ಬೌದ್ಧಿಕ ಆಸ್ತಿ ಹಕ್ಕಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಹೆಚ್ಚು ಸುಂಕ ಕಡಿತ ಮಾಡುವಂತೆ ಒತ್ತಾಯ ಮಾಡುತ್ತಿದೆ ಎಂದು ಮೂಲಗಳು ತಿಳಿಸಿವೆ.


ಭಾರತವು ಅಲ್ಲಿಂದ ಯಂತ್ರೋಪಕರಣಗಳು, ಕಂಪ್ಯೂಟರ್‌ಗಳು, ಎಲೆಕ್ಟ್ರಾನಿಕ್ಸ್, ವಿಮಾನಗಳು ಮತ್ತು ಬಿಡಿಭಾಗಗಳು, ವೈದ್ಯಕೀಯ ಸಲಕರಣೆಗಳು, ವೈಜ್ಞಾನಿಕ ಉಪಕರಣಗಳು, ಪಾಲಿಷ್ ಮಾಡದ ವಜ್ರ, ಇಂಗಾಲಯುಕ್ತ ರಾಸಾಯನಿಕಗಳು, ಪ್ಲಾಸ್ಟಿಕ್, ಕಬ್ಬಿಣ ಮತ್ತು ಉಕ್ಕು, ಕಾರುಗಳು ಹಾಗೂ ವಾಹನಗಳ ಬಿಡಿ ಭಾಗಗಳನ್ನು ಆಮದು ಮಾಡಿಕೊಳ್ಳುತ್ತದೆ.

ಸೇವಾ ವಲಯದಲ್ಲಿ ಭಾರತವು ಉದ್ಯಮ ಸೇವೆಗಳು, ದೂರ ಸಂಪರ್ಕ ಮತ್ತು ಐಟಿ, ಸಾರಿಗೆ ಸೇವೆಗಳನ್ನು ರಫ್ತು ಮಾಡಿದರೆ, ಬೌದ್ಧಿಕ ಆಸ್ತಿ ಸೇವೆಗಳು, ದೂರಸಂಪರ್ಕ ಮತ್ತು ಐಟಿ ಸೇವೆಗಳನ್ನು ಆಮದು ಮಾಡಿಕೊಳ್ಳುತ್ತದೆ. ಉಭಯ ದೇಶಗಳ ನಡುವೆ ಆಲ್ಕೋಹಾಲ್ ವ್ಯಾಪಾರವೂ ಗಣನೀಯ ಪ್ರಮಾಣದಲ್ಲಿದೆ.

ರಾಷ್ಟ್ರೀಯ

ಭವಿಷ್ಯದ ಯುದ್ಧಗಳಿಗೆ ಸಜ್ಜಾಗುತ್ತಿದ್ದೇವೆ– ದ್ವಿವೇದಿ

ಜೈಪುರ (ಪಿಟಿಐ): ‘ನಮ್ಮ ಸೇನೆ ಭವಿಷ್ಯದ ಯುದ್ಧಗಳಿಗೆ ಸನ್ನದ್ಧಗೊಳ್ಳುತ್ತಿದೆ. ನಾವು ಸ್ವದೇಶಿ ನಿರ್ಮಿತ ಯುದ್ಧೋಪಕರಣಗಳನ್ನು ಹೊಂದುವುದು ಸದ್ಯದ ಅಗತ್ಯವಾಗಿದೆ. ಇದು ಕಾರ್ಯತಂತ್ರದ ಅನಿವಾರ್ಯವೂ ಹೌದು’ ಎಂದು ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಗುರುವಾರ ಹೇಳಿದರು.



ದ್ವಿವೇದಿ

ಇಲ್ಲಿ ನಡೆದ 78ನೇ ಸೇನಾ ದಿನದ ಪಥಸಂಚಲನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಸುಸಜ್ಜಿತ ಸೈನಿಕರು, ಆಧುನಿಕ ಉಪಕರಣಗಳು, ಏಕೀಕೃತ ಕಾರ್ಯಾಚರಣೆ ಸಾಮರ್ಥ್ಯವನ್ನು ಭಾರತೀಯ ಸೇನೆ ಒಳಗೊಂಡಿದೆ. ಯೋಧರನ್ನು ಇನ್ನಷ್ಟು ಸಮರ್ಥಗೊಳಿಸಲು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ’ ಎಂದರು.

‘ಯಾವುದೇ ಯುದ್ಧವನ್ನು ಮೊದಲೇ ಊಹಿಸಲಾಗದು. ಭವಿಷ್ಯದ ಸಮರಗಳು ಕೆಲ ದಿನಗಳಲ್ಲೇ ಮುಗಿಯಬಹುದು ಅಥವಾ ವರ್ಷಗಟ್ಟಲೆ ಸಾಗಬಹುದು’ ಎಂದ ಅವರು, ರಷ್ಯಾ–ಉಕ್ರೇನ್ ಸಂಘರ್ಷವನ್ನು ಉದಾಹರಿಸಿದರು.

‘ಕೆಲವು ವರ್ಷಗಳಿಂದೀಚೆಗೆ ಸೇನೆಯ ಪರಿಕಲ್ಪನೆಯೇ ಬದಲಾಗಿದೆ. ಸದ್ಯದ ಸವಾಲನ್ನು ಮಾತ್ರ ನಾವು ಎದುರಿಸುತ್ತಿಲ್ಲ. ಭವಿಷ್ಯದ ಯುದ್ಧಗಳಿಗೂ ಸಜ್ಜಾಗುತ್ತಿದ್ದೇವೆ. ಸಶಸ್ತ್ರೀಕರಣ ಮತ್ತು ತರಬೇತಿ ಸೇರಿದಂತೆ ಅಗತ್ಯಕ್ಕೆ ತಕ್ಕಂತೆ ಆಧುನೀಕರಣ ಆಗುತ್ತಿದೆ’ ಎಂದರು.



ಪಥಸಂಚಲನದಲ್ಲಿ ಬ್ರಹ್ಮೋಸ್ ಕ್ಷಿಪಣಿ ಪ್ರದರ್ಶನ

‘ಯಾವುದೇ ದಾಳಿ ಎದುರಿಸಲು, ಎಂಥದ್ದೇ ಸಮಯದಲ್ಲಾದರೂ ಸೇನೆ ತಯಾರಿದೆ. ಪಥಸಂಚಲನದಲ್ಲಿ ನಮ್ಮ ಶಕ್ತಿ ಅನಾವರಣಗೊಂಡಿದೆ. ಇಂತಹ ಪೂರ್ವ ಸಿದ್ಧತೆಗಳು ನಿರಂತರವಾಗಿ ನಡೆಯುತ್ತವೆ. ಭಾರತದಲ್ಲಿ ತಯಾರಿಸಿದ ಸೇನಾ ಉಪಕರಣಗಳ ಪ್ರದರ್ಶನವು ನಮ್ಮ ಸ್ವದೇಶೀಕರಣವನ್ನು ಅನಾವರಣಗೊಳಿಸಿದೆ’ ಎಂದು ಹೇಳಿದರು.

ಭಾರತೀಯ ಸೇನಾ ಶಕ್ತಿ ಅನಾವರಣ

ಜೈಪುರದ ಮಹಲ್ ರಸ್ತೆಯ ಕಂಟೋನ್ಮೆಂಟ್ ಪ್ರದೇಶದಲ್ಲಿ ನಡೆದ 78ನೇ ಸೇನಾ ದಿನದ ಪಥಸಂಚನದಲ್ಲಿ ಭಾರತೀಯ ಸೇನೆಯ ಶಕ್ತಿ ಅನಾವರಣಗೊಂಡಿತು.

ಚೇತಕ್ ಹೆಲಿಕಾಪ್ಟರ್ ಪುಷ್ಪವೃಷ್ಟಿ, ನೇಪಾಳ್ ಆರ್ಮಿ ಬ್ಯಾಂಡ್ ವಾದ್ಯಸಂಗೀತ ಮನಸೂರೆಗೊಂಡಿತು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನರು ಅಪಾಚೆ, ಪ್ರಚಂಡ, ಧ್ರುವ್ ಮತ್ತು ರುದ್ರ ಹೆಲಿಕಾಪ್ಟರ್‌ಗಳು ಆಕಾಶದಂಗಳದಲ್ಲಿ ತೋರಿದ ಸಾಹಸವನ್ನು ಕಣ್ತುಂಬಿಕೊಂಡರು.

ಬ್ರಹ್ಮೋಸ್ ಕ್ಷಿಪಣಿ, ನಾಗ್ ಕ್ಷಿಪಣಿ, ಹೆಲಿನಾ ಕ್ಷಿಪಣಿ ವ್ಯವಸ್ಥೆ, ಭೀಷ್ಮ ಟ್ಯಾಂಕ್, ಅರ್ಜುನ್ ಟ್ಯಾಂಕ್, ಕೆ–9 ವಜ್ರ ಆರ್ಟಿಲರಿ, ಸಮರ ವಿಮಾನ ಉಡಾಯಿಸುವ ಝೆಡ್‌ಯು–23 ಗನ್. ಧನುಶ್ ಶಸ್ತ್ರಾಸ್ತ್ರ ವ್ಯವಸ್ಥೆ, ರಾಕೆಟ್ ಉಡಾವಣಾ ವ್ಯವಸ್ಥೆ, ಸ್ವಯಂ ಚಾಲಿತ ಟ್ಯಾಂಕರ್ ಪ್ರತಿರೋಧಕಗಳು, ಡ್ರೋನ್ ಜಾಮರ್‌ಗಳು, ಅತ್ಯಾಧುನಿಕ ಗನ್‌ಗಳು ಹೀಗೆ ಸೇನೆಯ ಶಸ್ತ್ರಾಸ್ತ್ರ ಬಲವನ್ನು ಪಥಸಂಚಲನದಲ್ಲಿ ಅನಾವರಣ ಮಾಡಲಾಯಿತು. ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಸ್ತಬ್ಧ ಚಿತ್ರ, ಸೇನೆಯ ಹೆಜ್ಜೆಗುರುತುಗಳ ಕಿರುಚಿತ್ರ ಪ್ರದರ್ಶನಗೊಂಡಿತು.

‘ಆಪರೇಷನ್ ಸಿಂಧೂರ ಅಂತ್ಯವಾಗಿಲ್ಲ’

ಜೈಪುರ (ಪಿಟಿಐ): ‘ಆಪರೇಷನ್ ಸಿಂಧೂರವು ಅಂತ್ಯಗೊಂಡಿಲ್ಲ. ಭಯೋತ್ಪಾದನೆಯನ್ನು ಪೋಷಿಸುವ ಮನಃಸ್ಥಿತಿ ಮತ್ತು ಸಿದ್ಧಾಂತ ಎಲ್ಲಿಯವರೆಗೆ ಇರುತ್ತದೆಯೊ ಅಲ್ಲಿಯವರೆಗೆ ಈ ಕಾರ್ಯಾಚರಣೆಯು ಮುಂದುವರಿಯುತ್ತಲೇ ಇರುತ್ತದೆ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದರು.

ಇಲ್ಲಿ ನಡೆದ ‘ಶೌರ್ಯ ಸಂಧ್ಯಾ’ ಕಾರ್ಯಕ್ರಮದಲ್ಲಿ ಮಾತನಾಡಿ, ‘ಸಿಂಧೂರ ಕಾರ್ಯಾಚರಣೆಯ ಮೂಲಕ ಭಾರತವು ತನ್ನ ಸೇನಾ ಶಕ್ತಿಯನ್ನು ಮಾತ್ರವಲ್ಲದೆ ತನ್ನ ಸುಗುಣವನ್ನೂ ಜಗತ್ತಿಗೆ ತೋರ್ಪಡಿಸಿದೆ. ಭಯೋತ್ಪಾದಕರ ವಿರುದ್ಧದ ಈ ಕಾರ್ಯಾಚರಣೆಯನ್ನು ಬಹಳ ಎಚ್ಚರಿಕೆಯಿಂದ, ಮಾನವೀಯ ಮೌಲ್ಯಗಳನ್ನು ಗಣನೆಗೆ ತೆಗೆದುಕೊಂಡು ನಡೆಸಲಾಗಿದೆ’ ಎಂದರು.

ನಿನ್ನ ಮನಸ್ಸೇ ನಿನ್ನ ಸ್ವರ್ಗ, ನರಕ

ನುಡಿ ಬೆಳಗು



ರೇಣುಕಾ ನಿಡಗುಂದಿ

ಒಂದು ಊರು. ಆ ಊರಿನ ಮುಖ್ಯ ಬೀದಿಯ ಕೊನೆಯಲ್ಲಿ ಒಂದು ದೇವಸ್ಥಾನ. ಅದರ ಎದುರಿನ ಒಂದು ದೊಡ್ಡ ಬಂಗಲೆಯಲ್ಲಿ ಒಬ್ಬ ವೇಶ್ಯೆ ವಾಸಿಸುತ್ತಿದ್ದಳು. ಆ ದೇವಸ್ಥಾನಕ್ಕೆ ಒಬ್ಬ ಪೂಜಾರಿ. ದೀರ್ಘಕಾಲದ ಬದುಕು ಸವೆಸಿ ಇಬ್ಬರೂ ಕಾಲವಾದ ನಂತರ ಯಮಲೋಕದಲ್ಲಿ ಅವರ ಪಾಪಕರ್ಮಗಳ ಲೆಕ್ಕವನ್ನು ಪರಿಶೀಲಿಸಿ ವೇಶ್ಯೆಯನ್ನು ಸ್ವರ್ಗಕ್ಕೂ, ಆ ದೇವಸ್ಥಾನದ ಅರ್ಚಕನನ್ನು ನರಕಕ್ಕೂ ಕಳುಹಿಸಲು ಆದೇಶ ನೀಡಲಾಗುತ್ತದೆ. ಆಗ ಅರ್ಚಕನಿಗೆ ಸಿಟ್ಟು ಬಂದು ಹಾಗೇಕೆಂದು ವಿಚಾರಿಸಲಾಗಿ, ಚಿತ್ರಗುಪ್ತ, ‘ನೀನು ವೃತ್ತಿಯಿಂದ ಅರ್ಚಕನಾದರೂ ನಿನ್ನ ಮನಸೆಲ್ಲ ಆ ವೇಶ್ಯೆಯ ಮನೆಗೆ ಬಂದು ಹೋಗುವವರು, ಅಲ್ಲಿ ನಡೆಯಬಹುದಾದ ಕಾರ್ಯ ಕಲಾಪಗಳು ಮತ್ತು ಅಲ್ಲಿಗೆ ಹೋಗಲಾಗಲಿಲ್ಲವಲ್ಲ ಎನ್ನುವ ಚಿಂತೆಯಲ್ಲೇ ಮುಳುಗಿತ್ತು. ಆದರೆ ಆ ವೇಶ್ಯೆ ವೃತ್ತಿಯಲ್ಲಿ ನಿರತಳಾದರೂ ಅವಳ ಮನಸ್ಸು ತಾನು ಹೋಗಲಾಗದ ಆ ದೇವಸ್ಥಾನದಲ್ಲಿ ನೆಟ್ಟು, ಒಂದು ಬಾರಿಯೂ ಅಲ್ಲಿಗೆ ಹೋಗಲಾಗಲಿಲ್ಲವಲ್ಲ ಎನ್ನುವ ಚಿಂತೆಯಿಂದ ಸದಾ ಭಗವಂತನ ನಾಮ ಸ್ಮರಣೆಯನ್ನು ಮಾಡುತ್ತಿದ್ದಳು. ಹಾಗಾಗಿ ನಿನಗೆ ನರಕ ಮತ್ತು ಆಕೆಗೆ ಸ್ವರ್ಗ’. ಎಂದರಂತೆ.

ಮನುಷ್ಯನ ಮನಸ್ಸು ಬಹಳ ವಿಚಿತ್ರ. ಅದೇ ರೀತಿ ಈ ಜಗತ್ತಿನ ಜೀವರಾಶಿಗಳಲ್ಲಿನ ವೈವಿಧ್ಯವೂ ವಿಸ್ಮಯಕಾರಿ. ಒಬ್ಬರಂತೆ ಇನ್ನೊಬ್ಬರಿಲ್ಲ. ಅವರವರ ಜೀವನ ಅವರವರದು. ಅವರವರ ಭಾಗ್ಯ ಅವರವರದು. ಒಬ್ಬರ ಸುಖ ಇನ್ನೊಬ್ಬರ ದುಃಖಕ್ಕೆ ಕಾರಣವಾಗಬಹುದು. ಒಬ್ಬರ ನೋವು ಮತ್ತು ಆ ನೋವಿನ ಕಾರಣ ಇನ್ನೊಬ್ಬರ ಊಹೆಗೂ ನಿಲುಕದ್ದಿರಬಹುದು. ನಮ್ಮ ಬಾಹ್ಯ ರೂಪ ಸ್ವರೂಪಕ್ಕಿಂತ ನಮ್ಮೊಳಗಿನ ವಿಚಾರಗಳೇ ನಮ್ಮ ವ್ಯಕ್ತಿತ್ವವನ್ನು ನಮ್ಮ ಭಾಗ್ಯವನ್ನು ರೂಪಿಸುತ್ತವೆ.

ಕಿಮೇಕಂ ದೈವತಂ ಲೋಕೇ ಕಿಂವಾಪ್ಯೇಕಂ ಪರಾಯಣಂ |
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್ ||
ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ |
ಕಿಂ ಜಪನ್ ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ||

ಮಹಾಭಾರತದಲ್ಲಿ ಅರ್ಜುನನು ಈ ಪ್ರಶ್ನೆಗಳನ್ನು ಶ್ರೀಕೃಷ್ಣನಿಗೆ ಕೇಳುತ್ತಾನೆ– ‘ಎಲ್ಲ ದೇವತೆಗಳಲ್ಲಿ ಅತ್ಯುನ್ನತ ಯಾರು? ಎಲ್ಲ ಧರ್ಮಗಳಲ್ಲಿ ಶ್ರೇಷ್ಠ ಧರ್ಮ ಯಾವುದು? ಯಾವ ಜಪದಿಂದ ಜನ್ಮಮರಣದ ಚಕ್ರದಿಂದ ಮುಕ್ತಿ ಸಿಗುತ್ತದೆ’ ಎಂದು.

ಮನೆ ಸಂಸಾರ, ವೃತ್ತಿ, ವ್ಯಾಪಾರ, ಕೆಲಸ, ಸಂಪಾದನೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಮತ್ತು ಆ ವಿಷಯಗಳಿಂದ ನಮಗುಂಟಾಗುವ ಸಂಬಂಧ ಸಂಪರ್ಕಗಳಿಂದ ನಮ್ಮ ಮನದೊಳಕ್ಕೆ ನುಗ್ಗುವ ವಿಚಾರಗಳ ಸುಳಿಯಲ್ಲಿ ಮುಳುಗಿ ಸಾಯುತ್ತೇವೆ. ಮನಃಶಾಂತಿಗಾಗಿ ದೇವಸ್ಥಾನಕ್ಕೆ ಹೋಗುವವರೂ ಉಂಟು. ಆದರೇನು ಮನಸ್ಸೆಲ್ಲೋ ಅಲೆಯುತ್ತಿರುತ್ತದೆ. ‘ಕಾಯಕವೇ ಕೈಲಾಸವೆಂದರು’ ಶರಣರು. ಚಿತ್ತಶುದ್ಧಿಯಿಂದ ಮಾಡುವ ಯಾವುದೇ ಕಾಯಕವಾದರೂ ಸರಿ. ಆ ಕೆಲಸಗಳನ್ನೂ ಸಮರ್ಪಕವಾಗಿ ಮಾಡಬೇಕು. ಆದರೆ ಇಲ್ಲದ ವಿಷಯಗಳನ್ನು ಮನದೊಳಗೆ ಚಿಂತಿಸುತ್ತಾ, ಮನದೊಳಗೆ ಒಂದು ನರಕವನ್ನೇ ಸೃಷ್ಟಿಸಿಕೊಂಡು ಬದುಕಬಾರದು. ಸ್ವರ್ಗ ನರಕಗಳೆಂಬವು ಹೊರಗಿನ ಲೋಕಗಳಲ್ಲ ನಮ್ಮೊಳಗೇ ಇವೆ.

ನಮಗೆ ಏನು ಮತ್ತು ಎಷ್ಟು ಬೇಕು ಎಂದು ಆಯ್ದುಕೊಳ್ಳುವ, ನಿರ್ಧರಿಸುವ ಅಧಿಕಾರ ಮತ್ತು ಸಂಪೂರ್ಣ ಸ್ವಾತಂತ್ರವಿದೆ. ಹಾಗಾಗಿ, ಆ ಒಂದು ಸ್ವಾತಂತ್ರವನ್ನು ಸೂಕ್ತವಾಗಿ ಉಪಯೋಗಿಸಿ ಬದುಕನ್ನು ಹಸನಾಗಿಸಿಕೊಳ್ಳಬೇಕು. ಶಾಂತವಾಗಿಸಿಕೊಳ್ಳಬೇಕು. ಆನಂದಮಯವಾಗಿಸಿ ಕೊಳ್ಳಬೇಕು ಎನ್ನುವುದೇ ಬದುಕಿನ ಒಳಗುಟ್ಟು. ❖

ಪದಬಂಧ 6286


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3. ಹಣವನ್ನು ಸಂದಾಯ ಮಾಡುವುದು (3)
5. ಈತ ಸರಿ ಸಮಾನನಾದವನು (3)
6. ಸತಿಗೆ ದೊರೆತ ಮೋಕ್ಷ! (3)
7. ಚನ್ನಯ್ಯನ ಮಗ ನಾನೆಂದು ಹೇಳಿಕೊಂಡ ಈ ಶರಣ ಚಮ್ಮಾರಿಕೆ ಕಾಯಕ ನಡೆಸುತ್ತಿದ್ದನು (6)
8. ತ್ರಿಪುರಾಂತಕ ಲಿಂಗ ಎಂಬ ಅಂಕಿತವುಳ್ಳ ವಚನಕಾರ (6)
12. ಚಿನ್ನದ ಬಣ್ಣವಿದು (3)
13. ಪಲ್ಲಂಗದಲ್ಲಿರುವವನ ಕಾಡುಹರಟೆ (3)
14. ಹದ್ದಿನ ಜಾತಿಗೆ ಸೇರಿದ ಪಕ್ಷಿ (3)

ಮೇಲಿಂದ ಕೆಳಕ್ಕೆ

1. ಎಳೆಯ ಹುಲ್ಲು (3)
2. ಕತೆ ಕೊನೆಗಿದ್ದಾಗಿನ ಅಮಲು ತಿರುವುಮುರುವಾಗಿದೆ (4)
3. ಬೀಜ ಬಿತ್ತಲು ಮಾಡಿರುವ ಮಡಿ (2)
4. ಮನಸ್ಸಿನ ಅಸ್ವಾಸ್ಥ್ಯ (3)
6. ಸಗರ ಗ್ರಾಮದ ಈ ಶರಣನ ಪತ್ನಿ ಶಿವದೇವಿ (7)
9. ಅವಶ್ಯವಿಲ್ಲದ ಖರ್ಚು ಉಲ್ಟಾ ಕಾಣುತ್ತಿದೆ (4)
10. ಹೂವಿನಲ್ಲಿರುವ ಹುಡಿ (3)
11. ತಣ್ಣಗಾದ ಅನ್ನ (3)
12. ಕುಳಿ ಇಲ್ಲಿದೆ (2)



6285ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುವಾದ 3.ರಾಯಭಾರಿ 5.ರಮಣಿ 6.ಸಮಯ 8.ನಸರಿ 9.ವಿವರ 10.ಕಳಸ 12.ಜಟಿಲ 14.ಸಮಾಧಾನ 15.ತೆರೆಮರೆ

ಮೇಲಿಂದ ಕೆಳಕ್ಕೆ: 1.ಅಗಸ 2.ದರ 3.ರಾಣಿ 4.ರಿಪೇರಿ 7.ಯಮಕಿಂಕರ 8.ನಯವಂಚಕ 9.ವಿರಸ 11.ಸಕ್ಕರೆ 12.ಜನ 13.ಲತೆ

ಸುಡೊಕು 6670

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		7		6		2
		5	2		9		8	1
2				1			9	
	5		7			8		
				8		5		9
8		6		9				
6				5		9		7
		8					5	
5		3		6		1		8

6669 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಜನವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣತ್ರಯೋದಶಿ ಗಂ 22-22, **ನಕ್ಷತ್ರ:** ಮೂಲ ಅಹೋರಾತ್ರ, **ಯೋಗ:** ಧ್ರುವ ಗಂ. 21-07, **ಕರಣ:** ಗರ ಗಂ. 9-22 ಮಕರ ಮಾಸದ 02 ನೇ ದಿನ. **ಮಳೆ ನಕ್ಷತ್ರ:** ಉತ್ತರಾಷಾಢ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 -12-00, **ಸೂರ್ಯೋದಯ:** 07-01, **ಸೂರ್ಯಾಸ್ತ:** 06-20, **ಮುಸ್ಲಿಂ ದಿನಾಂಕ:** 26 ರಜಬ್, **ಅದೃಷ್ಟ ಸಂಖ್ಯೆ:** 7, 11

ಮೇಷ: ದಿನದ ಅಂತ್ಯದಲ್ಲಿ ನಾಳೆಯ ಕೆಲಸಗಳ ಬಗ್ಗೆ ಗಮನಹರಿಸಿ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದರಿಂದ ನಾಳೆ ಸುಲಭವಾಗುತ್ತದೆ. ವೃತ್ತಿಯಲ್ಲಿ ಹೊಸ ಬದುಕು ಆರಂಭಿಸಲು ಅವಕಾಶಗಳ ಬಾಗಿಲು ತೆರೆದಿವೆ.

ವೃಷಭ: ಪ್ರಯತ್ನಕ್ಕೆ ತಕ್ಕ ಫಲ ದೊರೆಯುತ್ತದೆ. ಆದರೆ ಸೋಮಾರಿತನ, ಅತಿಯಾದ ನಿದ್ದೆ ನಿಮ್ಮ ಈ ದಿನದ ಕಾರ್ಯಕ್ಕೆ ಭಂಗವನ್ನು ತರಲಿದೆ. ದುಡುಕಿನ ಕೆಲವು ನಿರ್ಧಾರಗಳಿಂದ ಆತ್ಮೀಯರಲ್ಲಿ ಮನಸ್ತಾಪವಾಗಲಿದೆ.

ಮಿಥುನ: ಕೌಟುಂಬಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಹಿರಿಯರ ಸಲಹೆ ಪಡೆದು ಒಂದು ತೀರ್ಮಾನಕ್ಕೆ ಬರುವುದು ಉತ್ತಮ. ತಾರ್ಕಿಕ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತವಾದ ಸಮಯವಾಗಿದೆ.

ಕರ್ಕಾಟಕ: ಯಾವುದೋ ದಿನ ಮಾಡಿದ ಕೆಲಸದ ಫಲವಾಗಿ ಈ ದಿನ ಅದರ ಲಾಭ ಬಂದು ಕೈ ಸೇರಿದ ಸಂತಸ ಆಗಲಿದೆ. ಸಂಬಂಧ ನಿಭಾಯಿಸುವಲ್ಲಿ ಇಂದು ಉಂಟಾಗುವ ಸೋಲಿಗೆ ನಿಮ್ಮ ಆಲಸ್ಯತನವೇ ಮುಖ್ಯ ಕಾರಣವಾಗಿರುತ್ತದೆ.

ಸಿಂಹ: ಸಮಾಜದಲ್ಲಿ ಹೆಸರು ಸಂಪಾದಿಸಲು ಉತ್ತಮ ವಾತಾವರಣ ಇರಲಿದೆ. ಆಭರಣ, ಬಟ್ಟೆ ವ್ಯಾಪಾರ ಮಾಡುವವರು ಪತ್ರಿಕೆಯವರ ಸಹಕಾರದಿಂದ ಪ್ರಚಾರವನ್ನು ಪಡೆದುಕೊಳ್ಳಬಹುದು. ಹೊಸ ಉತ್ಸಾಹ ಮೂಡಲಿದೆ.

ಕನ್ಯಾ: ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸನ್ನಿವೇಶಗಳು ಸೃಷ್ಟಿಯಾಗುತ್ತವೆ. ಇಂದಿನ ಕೆಲಸ, ಇಂದೇ ಮುಗಿಸುವುದನ್ನು ಕಾರ್ಯರೂಪಕ್ಕೆ ತಂದುಕೊಳ್ಳಿರಿ. ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗಬಹುದು.

ತುಲಾ: ಪ್ರತಿಷ್ಠಿತ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದರಿಂದ ಹೆಚ್ಚಿನ ವರಮಾನ ಮತ್ತು ಸಮಾಜದಲ್ಲಿ ಉನ್ನತ ಸ್ಥಾನಮಾನ ನಿರೀಕ್ಷಿಸಬಹುದು. ಖರ್ಚು ವೆಚ್ಚಗಳ ಮೇಲೆ ಹಿಡಿತ ಸಾಧಿಸಬೇಕಾಗುತ್ತದೆ.

ವೃಶ್ಚಿಕ: ಶುಭ ಕಾರ್ಯಗಳ ತಯಾರಿ ಉತ್ತಮ ರೀತಿಯಲ್ಲಿ ನಡೆಯುವುದು. ಖಾದ್ಯ ತೈಲಗಳ ವ್ಯಾಪಾರಗಳಿಂದ ಹೇರಳ ಲಾಭವನ್ನು ಹೊಂದುವಿರಿ. ದಂತ ವೇದನೆಯಿಂದ ದಂತವೈದ್ಯರನ್ನು ಸಂಪರ್ಕಿಸಬೇಕಾಗಬಹುದು.

ಧನು: ಭೂಸಂಬಂಧಿ ಅದರಲ್ಲೂ ಕೃಷಿ ಭೂಮಿ ವ್ಯವಹಾರದಲ್ಲಿರುವವರಿಗೆ ಲಾಭ. ಹಿರಿಯರ ಆಶೀರ್ವಾದ ಮತ್ತು ಮಾರ್ಗದರ್ಶನ ನಿಮ್ಮ ಪಾಲಿಗಿರುವುದರಿಂದ ಶುಭವಾಗುವುದು. ಕಂಕಣ ಬಲದ ಸಾಧ್ಯತೆಯು ಹೆಚ್ಚಾಗಿ ಇರುವುದು.

ಮಕರ: ಯಾವುದೇ ಸ್ವಾರ್ಥವಿಲ್ಲದೇ ಮಾಡುತ್ತಿರುವ ಕೆಲಸಗಳಿಗೆ ಉತ್ತಮ ಪ್ರತಿಫಲ ಇರುವುದು. ಹೊಸ ಹಾದಿಯಲ್ಲಿ ಹೆಜ್ಜೆ ಇಡಲು ಇಂದು ಸುಸಮಯ. ವಿಲಾಸಿ ಸಾಮಗ್ರಿಗಳನ್ನು ಖರೀದಿಸುವುದು ಖರ್ಚಿಗೆ ದಾರಿಯಾಗಲಿದೆ.

ಕುಂಭ: ಬಂಧುಗಳ ಮನೆಯಲ್ಲಿ ನಡೆಯುವ ಕೆಲವು ವಿಚಿತ್ರ ಆಚರಣೆ ನಿಮಗೆ ಗೊಂದಲ ಮೂಡಿಸಬಹುದು. ಉದ್ಯೋಗ ನಿಮಿತ್ತ ಪ್ರಯಾಣದ ಸಾಧ್ಯತೆ ಇರುವುದು. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿ ಪಡೆದುಕೊಳ್ಳುವಿರಿ.

ಮೀನ: ನಿಮ್ಮ ಪರಿಶ್ರಮ ಪ್ರದರ್ಶನ ಇಂದು ಸಾಧ್ಯವಾಗುವುದಿಲ್ಲ. ನೀವು ಮಾಡುವ ಕೆಲಸದಲ್ಲಿ ದೋಷಗಳು ಇರಲಿವೆ. ಅಧಿಕಾರ, ಅನುಭವದಿಂದ ನಿಮ್ಮ ಆತ್ಮಾಭಿಮಾನ ದುರಭಿಮಾನವಾಗದಿರಲಿ.

ಗುಂಡಣ್ಣ



ದ್ವಿಚಕ್ರ ವಾಹನಗಳಿಗೆ ಎಬಿಎಸ್ ಕಡ್ಡಾಯ: ಗಡ್ಕರಿ


ನಿತಿನ್ ಗಡ್ಕರಿ

ನವದೆಹಲಿ (ಪಿಟಿಐ): 'ಜನವರಿ 1ರ ನಂತರ ತಯಾರಿಸಲಾಗುವ ಎಲ್ಲ ದ್ವಿಚಕ್ರ ವಾಹನಗಳಿಗೆ ಆ್ಯಂಟಿ-ಲಾಕ್ ಬ್ರೇಕಿಂಗ್ ಸಿಸ್ಟಂ (ಎಬಿಎಸ್) ಅನ್ನು ಕಡ್ಡಾಯಗೊಳಿಸಲಾಗಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

2019ರಿಂದ 2023ರವರೆಗಿನ ಅವಧಿಯಲ್ಲಿ ದೇಶದಲ್ಲಿ ಸಂಭವಿಸಿದ ದ್ವಿಚಕ್ರ ವಾಹನಗಳ ಅಪಘಾತದಲ್ಲಿ 3.35 ಲಕ್ಷ ಜನರು ಮೃತಪಟ್ಟಿದ್ದಾರೆ. ಹೀಗಾಗಿ, ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

2023ರಲ್ಲಿ ಸಂಭವಿಸಿದ ಅಪಘಾತದಲ್ಲಿ 77,539 ದ್ವಿಚಕ್ರ ವಾಹನ ಸವಾರರು ಮೃತಪಟ್ಟಿದ್ದರು. ಈ ಪೈಕಿ 50 ಸಾವಿರ ಸವಾರರು ಹೆಲ್ಮೆಟ್ ಧರಿಸಿಲ್ಲ. ದೇಶದಲ್ಲಿ ಸಂಭವಿಸುವ ಒಟ್ಟು ರಸ್ತೆ ಅಪಘಾತಗಳಲ್ಲಿ ದ್ವಿಚಕ್ರ ವಾಹನ ಅಪಘಾತಗಳಿಂದ ಉಂಟಾಗುವ ಸಾವುಗಳ ಪಾಲು 2014ರಲ್ಲಿ ಶೇ 30ರಷ್ಟಿದ್ದು 2023ರ ವೇಳೆಗೆ ಶೇ 45ಕ್ಕೆ ಏರಿದೆ.

ಹೀಗಾಗಿ, ಅಪಘಾತ ತಡೆಗಟ್ಟಲು ಎಲ್ಲ ದ್ವಿಚಕ್ರ ವಾಹನಗಳಲ್ಲಿ ಎಬಿಎಸ್ ಕಡ್ಡಾಯ ಮಾಡಲಾಗಿದೆ ಮತ್ತು ವಾಹನ ಖರೀದಿ ವೇಳೆ ಗ್ರಾಹಕರಿಗೆ ಬಿಐಎಸ್ ಪ್ರಮಾಣೀಕೃತ ಪಡೆದ ಎರಡು ಹೆಲ್ಮೆಟ್‌ಗಳನ್ನು ನೀಡುವುದು ಕಡ್ಡಾಯಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ. ಈ ಮೊದಲು 125 ಸಿಸಿ ಮೇಲ್ಪಟ್ಟ ದ್ವಿಚಕ್ರ ವಾಹನಗಳಿಗೆ ಮಾತ್ರ ಎಬಿಎಸ್ ಕಡ್ಡಾಯವಾಗಿತ್ತು.

₹70 ಸಾವಿರದ ಕಾರಿಗೆ ₹1.11 ಲಕ್ಷ ದಂಡ

ಒಂದನೇ ಪುಟದಿಂದ...

ಕಾರಿನ ನೋಂದಣಿ ಪ್ರಮಾಣಪತ್ರವನ್ನು, ಮಹಮ್ಮದ್ ಸೈಫನ್ ಚಾಲನಾ ಪರವಾನಗಿಯನ್ನು ಅಮಾನತು ಮಾಡಲು ಸಾರಿಗೆ ಪ್ರಾಧಿಕಾರಕ್ಕೆ ಬರೆಯಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಅಮರೇಶ್ ಚೆಲುವ ತಿಳಿಸಿದ್ದಾರೆ.

'ಈ ರೀತಿ ಸೈಲೆನ್ಸರ್ ಮಾರ್ಪಾಡು ಮಾಡಿ ಕರ್ಕಶ ಸದ್ದು ಮಾಡಿಕೊಂಡು ಹೋಗುವ ಕಾರುಗಳ ಬಗ್ಗೆ ದೂರು ನೀಡಿದರೆ, ಇಲ್ಲವೇ ನಮ್ಮ ಅಧಿಕಾರಿಗಳ ಗಮನಕ್ಕೆ ಬಂದರೆ ಅಂಥ ಕಾರುಗಳ ನೋಂದಣಿ ಪ್ರಮಾಣಪತ್ರ (ಆರ್‌ಸಿ) ಹಾಗೂ ಚಾಲಕರ ಚಾಲನಾ ಪರವಾನಗಿ (ಡಿಎಲ್) ರದ್ದು ಮಾಡಲಾಗುವುದು ಎಂದು ಸಾರಿಗೆ ಹೆಚ್ಚುವರಿ ಆಯುಕ್ತ (ಪ್ರವರ್ತನ) ಸಿ. ಮಲ್ಲಿಕಾರ್ಜುನ ತಿಳಿಸಿದ್ದಾರೆ.

'₹4.71 ಲಕ್ಷ ಕೋಟಿ ಹೂಡಿಕೆ'

ಇದೇ 19ರಿಂದ 23ರವರೆಗೆ ದಾವೋಸ್ ಶೃಂಗಸಭೆ ● ಸಚಿವ ಎಂ.ಬಿ. ಪಾಟೀಲ ಭಾಗಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: '2025ರ ಫೆಬ್ರುವರಿಯಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹10.27 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಭರವಸೆ ಸಿಕ್ಕಿತ್ತು. ಈ ಪೈಕಿ, ಡಿಸೆಂಬರ್ ಅಂತ್ಯದ ವೇಳೆಗೆ ₹4.71 ಲಕ್ಷ ಕೋಟಿ ಹೂಡಿಕೆ ಆಗಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಇದೇ 19ರಿಂದ 23ರವರೆಗೆ ದಾವೋಸ್‌ನಲ್ಲಿ ವಿಶ್ವ ಆರ್ಥಿಕ ವೇದಿಕೆಯ ಶೃಂಗಸಭೆ ನಡೆಯಲಿದೆ. ಈ ಶೃಂಗಸಭೆಯಲ್ಲಿ ಭಾಗವಹಿಸಲಿರುವ ಸಚಿವರು, ಕಳೆದ ಒಂದು ವರ್ಷದಲ್ಲಿ ವಿವಿಧ ಕೈಗಾರಿಕಾ ವಲಯಗಳಲ್ಲಿ ಹೂಡಿಕೆ, ಅರ್ಜಿ ಸಲ್ಲಿಕೆ ಪ್ರತಿಯ ಅಂಕಿಅಂಶಗಳನ್ನು ನೀಡಿದ್ದಾರೆ.

'ಹೂಡಿಕೆದಾರರ ಸಮಾವೇಶದಲ್ಲಿ ಆಗಿರುವ ಒಡಂಬಡಿಕೆಗಳಲ್ಲಿ ಶೇ 46ರಷ್ಟು ಹೂಡಿಕೆ ಆಗಿದೆ. ನಾವು ಕೇವಲ ಒಡಂಬಡಿಕೆಯ ಮಟ್ಟದಲ್ಲಿ ಮಾತ್ರ ನಿಂತಿಲ್ಲ. ಹೂಡಿಕೆ ಪ್ರಸ್ತಾವ ಸಲ್ಲಿಸಿದ ಕೂಡಲೇ ಅರ್ಜಿ ಸಲ್ಲಿಕೆ, ಭೂಮಿ ಮತ್ತಿತರ ಮಂಜೂರಾತಿಗಳು, ಕಡ್ಡಾಯ ಅನುಮೋದನೆಗಳು ಇವೆಲ್ಲವನ್ನೂ ಸಂಪೂರ್ಣ ಡಿಜಿಟಲ್ ವೇದಿಕೆಯಾಗಿರುವ ಏಕಗವಾಕ್ಷಿ ವ್ಯವಸ್ಥೆ ಮೂಲಕ ಒದಗಿಸುತ್ತಿದ್ದೇವೆ' ಎಂದು ಅವರು ವಿವರಿಸಿದ್ದಾರೆ.

'ರಾಜ್ಯದಲ್ಲಿ ಹೂಡಿಕೆ ಪ್ರಸ್ತಾವಗಳು ತ್ವರಿತವಾಗಿ ಅನುಷ್ಠಾನಗೊಳ್ಳುತ್ತಿವೆ, ಮೊದಲಿನಿಂತಲೂ ಹೆಚ್ಚು ಕೈಗಾರಿಕಾಸ್ನೇಹಿಯಾಗಿದೆ. ಒಟ್ಟು ಹೂಡಿಕೆ ಪ್ರಸ್ತಾವಗಳ ಪೈಕಿ ಶೇ 50ರಷ್ಟು ಮತ್ತು ತಯಾರಿಕೆ ವಲಯದ ಹೂಡಿಕೆ ಪ್ರಸ್ತಾವಗಳ ಪೈಕಿ ಶೇ 60ರಷ್ಟು 'ಕರ್ನಾಟಕ ಉದ್ಯೋಗ ಮಿತ್ರ'ದಲ್ಲಿ ಸಲ್ಲಿಕೆಯಾಗಿವೆ' ಎಂದಿದ್ದಾರೆ.

'ಸಿಕ್ಸ್ ಕಂಪನಿಯು ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಮುಖ್ಯವಾಗಿರುವ ಸಿಲಿಕಾನ್ ಬಿಡಿಭಾಗಗಳನ್ನು ತಯಾರಿಸುವ ಸ್ಥಾವರ ಸ್ಥಾಪನೆಗೆ ₹9,300 ಕೋಟಿ, ಎಮ್ಮೀ ಎನರ್ಜಿ ಕಂಪನಿಯು ಬೆಂಗಳೂರಿನ ಬಳಿ ಸೌರಕೋಶ ಮತ್ತು ಮಾಡ್ಯೂಲ್ ತಯಾರಿಕೆ ವಿಸ್ತರಣೆಗೆ ₹5,495 ಕೋಟಿ, ಜಿಂದಾಲ್ ಸ್ಟೀಲ್ಸ್ ವಿಜಯನಗರದಲ್ಲಿ ಎಲೆಕ್ಟ್ರಿಕಲ್ ಸ್ಟೀಲ್ ಘಟಕ ಸ್ಥಾಪನೆಗೆ ₹7 ಸಾವಿರ ಕೋಟಿ ಹೂಡಿಕೆಯ ಪ್ರಸ್ತಾವಗಳನ್ನು ಸಲ್ಲಿಸಿವೆ' ಎಂದು ಪಾಟೀಲ ತಿಳಿಸಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶದ ಪ್ರಗತಿ (₹ ಗಳಲ್ಲಿ)

ವಲಯ	ಒಡಂಬಡಿಕೆ	ನೈಜ ಹೂಡಿಕೆ	ಶೇ
ತಯಾರಿಕೆ	5.66 ಲಕ್ಷ ಕೋಟಿ	3.22 ಲಕ್ಷ ಕೋಟಿ	58
ಇಂಧನ	4.25 ಲಕ್ಷ ಕೋಟಿ	1.41 ಲಕ್ಷ ಕೋಟಿ	33
ಮೂಲಸೌಕರ್ಯ ಅಭಿವೃದ್ಧಿ	0.45 ಲಕ್ಷ ಕೋಟಿ	0.085 ಲಕ್ಷ ಕೋಟಿ	19

ಯಾವ ಕಂಪನಿ, ಎಲ್ಲಿ, ಎಷ್ಟು ಹೂಡಿಕೆ?

ಸಿಮೆಂಟ್ ತಯಾರಿಕಾ ಘಟಕ ಸ್ಥಾಪನೆಗೆ ಅಲ್ಟ್ರಾ ಟೆಕ್ ಕಂಪನಿ ಕಲಬುರಗಿ ಜಿಲ್ಲೆಯಲ್ಲಿ ₹4,819 ಕೋಟಿ, ದಾಲ್ಮಿಯಾ ಸಿಮೆಂಟ್ಸ್ ಬೆಳಗಾವಿಯ ಯಾದವಾಡದಲ್ಲಿ ₹3 ಸಾವಿರ ಕೋಟಿ ಹಾಗೂ ವಿಸ್ತರಣೆಗೆ ₹3,020 ಕೋಟಿ, ಮರುಬಳಕೆ ಇಂಧನ ಕ್ಷೇತ್ರದಲ್ಲಿ ಟಾಟಾ ಪವರ್ ₹8,134 ಕೋಟಿ, ವೋಲ್ವೊ ತನ್ನ ಹೊಸಕೋಟೆ ಘಟಕದ ವಿಸ್ತರಣೆಗೆ ₹1,251 ಕೋಟಿ, ವಿಜಯಪುರ ಜಿಲ್ಲೆಯಲ್ಲಿ ಸುಜ್ಲಾನ್ ಎನರ್ಜಿ ಲಿಮಿಟೆಡ್ ₹12,032 ಕೋಟಿ ಹೂಡಿಕೆ ಮಾಡಲಿವೆ ಎಂದು ಪಾಟೀಲ ತಿಳಿಸಿದ್ದಾರೆ.

ಹ್ಯಾವೆಲ್ಸ್ ಇಂಡಿಯಾ ತನ್ನ ಉತ್ಪಾದನೆಯ ಹೆಚ್ಚಳ ಮತ್ತು ನೂತನ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪನೆಗೆ ತುಮಕೂರು ಜಿಲ್ಲೆಯಲ್ಲಿ ₹710 ಕೋಟಿ, ಬಾಲಾಜಿ ವೇಫರ್ಸ್ ₹550 ಕೋಟಿ, ಎಎಸ್‌ಎಂ ಟೆಕ್ನಾಲಜೀಸ್ ₹490 ಕೋಟಿ ಹೂಡಿಕೆ ಮಾಡಲು ಪ್ರಸ್ತಾವ ಸಲ್ಲಿಸಿವೆ. ವೈದ್ಯಕೀಯ ಮತ್ತು ಸ್ಯಾನಿಟರಿ ಸಾಧನಗಳನ್ನು ತಯಾರಿಸುವ ಟಿಜೆಡ್‌ಎಂಒ ಇಂಡಿಯಾ ₹58 ಕೋಟಿ, ಎಚ್125 ಮಾದರಿಯ ಏರ್-ಬಸ್‌ಗೆ ಬೇಕಾಗುವ ಬಿಡಿಭಾಗಗಳ ತಯಾರಿಕೆ ಟಿಎಎಸ್‌ಎಲ್ ಕೋಲಾರದ ವೇಮಗಲ್‌ನಲ್ಲಿ ₹500 ಕೋಟಿ, ಏವಿಯಾನಿಕ್ಸ್ ಮತ್ತು ರಕ್ಷಣಾ ಕ್ಷೇತ್ರದ ಸಾಧನಗಳ ತಯಾರಿಕೆಗೆ ಸಾಫ್ರಾನ್ ಎಲೆಕ್ಟ್ರಾನಿಕ್ಸ್ ಕಂಪನಿ ₹250 ಕೋಟಿ ಹೂಡಿಕೆ ಮಾಡುತ್ತಿವೆ ಎಂದು ಅವರು ವಿವರಿಸಿದ್ದಾರೆ.

ಸುದ್ದಿ 2 ನಿಮಿಷ

'ಜಿಡಿಪಿ ಶೇ 7.2ರಷ್ಟು ನಿರೀಕ್ಷೆ'

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ 7.2ರಷ್ಟಾಗುವ ನಿರೀಕ್ಷೆ ಇದೆ ಎಂದು ವಿಶ್ವಬ್ಯಾಂಕ್ ತನ್ನ ಅಂದಾಜನ್ನು ಪರಿಷ್ಕರಿಸಿದೆ.

ದೇಶೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿರುವುದು, ತೆರಿಗೆ ಸುಧಾರಣೆಗಳು ಮತ್ತು ಗ್ರಾಮೀಣ ಪ್ರದೇಶದಲ್ಲಿನ ಕುಟುಂಬಗಳ ಗಳಿಕೆಯಲ್ಲಿ ಹೆಚ್ಚಳವಾಗಿರುವುದು ಜಿಡಿಪಿ ಹೆಚ್ಚಳಕ್ಕೆ ನೆರವಾಗಲಿದೆ ಎಂದು ಹೇಳಿದೆ. ಭಾರತವು ಜಗತ್ತಿನಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಆಗಲಿದೆ ಎಂದು ಹೇಳಿದೆ.

ಜೂನ್‌ನಲ್ಲಿ ವಿಶ್ವಬ್ಯಾಂಕ್ ಭಾರತದ ಜಿಡಿಪಿ ಬೆಳವಣಿಗೆ ಶೇ 6.3ರಷ್ಟಾಗಲಿದೆ ಎಂದು ಹೇಳಿತ್ತು.

2026-27ರಲ್ಲಿ ದೇಶದ ಜಿಡಿಪಿ ಶೇ 6.5 ಮತ್ತು 2027-28ರಲ್ಲಿ ಶೇ 6.6ರಷ್ಟಾಗಬಹುದು ಎಂದು ಹೇಳಿದೆ.

ಅಮೆರಿಕದ ಸುಂಕ ಹೆಚ್ಚಳ ಮತ್ತು ವ್ಯಾಪಾರ ಸಂಬಂಧಿತ ಅನಿಶ್ಚಿತತೆಯಿಂದಾಗಿ ಬಂಡವಾಳದ ಹೊರಹರಿವು ಹೆಚ್ಚಾಗಿದೆ. ಇದರಿಂದ ಮೇ ತಿಂಗಳಿನಿಂದ ಭಾರತದ ರೂಪಾಯಿ ಮೌಲ್ಯ ಕುಸಿದಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.



ಇತ್ತೀಚೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಮೊದಲ ಅಂದಾಜಿನ ಪ್ರಕಾರ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಆರ್ಥಿಕತೆಯು ಶೇ 7.4ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಹೇಳಿತ್ತು.

ಎಂಆರ್‌ಪಿಎಲ್‌ಗೆ ₹1,445 ಕೋಟಿ ಲಾಭ

ಮಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊ ಕೆಮಿಕಲ್ ಸಂಸ್ಥೆ (ಎಂಆರ್‌ಪಿಎಲ್) ₹1,445 ಕೋಟಿ ನಿವ್ವಳ ಲಾಭ ಗಳಿಸಿದೆ.

ಇಲ್ಲಿ ನಡೆದ ಸಂಸ್ಥೆಯ ಆಡಳಿತ ಮಂಡಳಿಯ 272ನೇ ಸಭೆಯಲ್ಲಿ ಮೂರನೇ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳನ್ನು ಅಂಗೀಕರಿಸಲಾಯಿತು.

ಈ ತ್ರೈಮಾಸಿಕದಲ್ಲಿ ಸಂಸ್ಥೆ ಒಟ್ಟಾರೆ ₹29,720 ಕೋಟಿ ವಹಿವಾಟು ನಡೆಸಿ ₹2,214 ಕೋಟಿ ತೆರಿಗೆಪೂರ್ವ ಲಾಭ ಗಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಸಂಸ್ಥೆ ₹25,601 ಕೋಟಿ ವಹಿವಾಟು ನಡೆಸಿ ₹469 ಕೋಟಿ ತೆರಿಗೆ ಪೂರ್ವ ಲಾಭ ಹಾಗೂ ₹304 ಕೋಟಿ ನಿವ್ವಳ ಲಾಭ ದಾಖಲಿಸಿತ್ತು.

ಪ್ರಸಕ್ತ ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳಲ್ಲಿ ಸಂಸ್ಥೆ ₹76,661 ಕೋಟಿ ವಹಿವಾಟು ನಡೆಸಿ ₹1,812 ಕೋಟಿ ನಿವ್ವಳ ಲಾಭ ದಾಖಲಿಸಿದಂತಾಗಿದೆ. ಸಂಸ್ಥೆಯ ಒಟ್ಟು ಸಾಲದ ಪ್ರಮಾಣ ₹12,867 ಕೋಟಿಯಿಂದ ₹9,290 ಕೋಟಿಗೆ ಇಳಿಕೆಯಾಗಿದೆ.

ಮೂರನೇ ತ್ರೈಮಾಸಿಕದಲ್ಲಿ ಸಂಸ್ಥೆ 47 ಲಕ್ಷ ಟನ್‌ನಷ್ಟು ಕಚ್ಚಾತೈಲ ಸಂಸ್ಕರಣೆ ಮಾಡಿದೆ. ಈ ಹಣಕಾಸು ವರ್ಷದ ಒಂಬತ್ತು ತಿಂಗಳಲ್ಲಿ ಒಟ್ಟು 1.26 ಕೋಟಿ ಟನ್ ಕಚ್ಚಾತೈಲ ಸಂಸ್ಕರಣೆ ನಡೆಸಿದಂತಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ ಕ್ರಮವಾಗಿ 46 ಲಕ್ಷ ಟನ್ ಹಾಗೂ 1.35 ಕೋಟಿ ಟನ್ ಇತ್ತು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ವ್ಯಾಪಾರ ಕೊರತೆ ₹2.26 ಲಕ್ಷ ಕೋಟಿ

₹3.47 ಲಕ್ಷ ಕೋಟಿ ಮೌಲ್ಯದ ಸರಕು ರಫ್ತು: ಕೇಂದ್ರ ವಾಣಿಜ್ಯ ಸಚಿವಾಲಯ



ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕ ಅನಿಶ್ಚಿತತೆಯ ನಡುವೆಯೂ 2025ರ ಡಿಸೆಂಬರ್ ತಿಂಗಳಿನಲ್ಲಿ ದೇಶದ ರಫ್ತು ಪ್ರಮಾಣ ಶೇ 1.87ರಷ್ಟು ಹೆಚ್ಚಳವಾಗಿದ್ದು, ₹3.47 ಲಕ್ಷ ಕೋಟಿ ಮೌಲ್ಯದ ಸರಕುಗಳು ರಫ್ತಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಇದೇ ಅವಧಿಯಲ್ಲಿ ಆಮದು ಪ್ರಮಾಣವು ಶೇ 8.7ರಷ್ಟು ಏರಿಕೆಯಾಗಿದ್ದು, ₹5.73 ಲಕ್ಷ ಕೋಟಿ ಆಗಿದೆ. ವ್ಯಾಪಾರ ಕೊರತೆಯು ₹2.26 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ದೇಶದ ಸರಕುಗಳ ರಫ್ತು ಶೇ 2.44ರಷ್ಟು ಹೆಚ್ಚಳವಾಗಿ, ₹29.84 ಲಕ್ಷ ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ದೇಶದ ಆಮದು ಶೇ 5.9ರಷ್ಟು ಏರಿಕೆಯಾಗಿ, ₹52.27 ಲಕ್ಷ ಕೋಟಿಯಷ್ಟಾಗಿದೆ. ವ್ಯಾಪಾರ ಕೊರತೆಯು ₹22.43 ಲಕ್ಷ ಕೋಟಿಯಷ್ಟಾಗಿದೆ.

'ದೇಶದ ರಫ್ತು ಸಕಾರಾತ್ಮಕವಾಗಿ ಬೆಳವಣಿಗೆ ದಾಖಲಿಸಿದೆ. ಇದೇ ರೀತಿ ಪ್ರಗತಿ ಮುಂದುವರಿದರೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ಒಟ್ಟು ರಫ್ತು ಹಣಕಾಸಿನ ಮೌಲ್ಯವು ₹76.75 ಲಕ್ಷ ಕೋಟಿ (850 ಬಿಲಿಯನ್ ಡಾಲರ್) ಆಗುವ ನಿರೀಕ್ಷೆ ಇದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರವಾಲ್ ಹೇಳಿದ್ದಾರೆ.

ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಸಾಗರೋತ್ಪನ್ನಗಳು ಮತ್ತು ಔಷಧಗಳು ಸೇರಿದಂತೆ ವಿವಿಧ ಸರಕುಗಳ ಸಾಗಣೆಯಿಂದ ದೇಶದ ರಫ್ತು ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

ಅಮೆರಿಕ, ಚೀನಾ ಮತ್ತು ಯುಎಇಗೆ ದೇಶದ ರಫ್ತು ಸ್ಥಿರವಾಗಿ ಬೆಳವಣಿಗೆ ಆಗುತ್ತಿದೆ ಎಂದು ತಿಳಿಸಿದ್ದಾರೆ.

ಭಾರತ–ಅಮೆರಿಕ ಒಪ್ಪಂದ ಶೀಘ್ರ

ಭಾರತ ಮತ್ತು ಅಮೆರಿಕವು ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ಅಂತಿಮ ಯತ್ನದಲ್ಲಿವೆ. ಬಾಕಿ ಇರುವ ಎಲ್ಲ ವಿಷಯಗಳ ಕುರಿತು ಎರಡೂ ಕಡೆ ಮಾತುಕತೆ ನಡೆಯುತ್ತಿದೆ ಎಂದು ರಾಜೇಶ್ ಅಗರವಾಲ್ ಹೇಳಿದ್ದಾರೆ. ಅತಿ ಶೀಘ್ರದಲ್ಲಿ ಒಪ್ಪಂದ ಆಗಲಿದೆ. ಆದರೆ, ಒಪ್ಪಂದ ಯಾವಾಗ ಆಗುತ್ತದೆ ಎಂದು ಗಡುವು ನಿಗದಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

ಭಾರತ ಮತ್ತು ಕೆನಡಾ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ವ್ಯಾಪ್ತಿಯನ್ನು ಅಂತಿಮಗೊಳಿಸಲು ಸಹ ಕೆಲಸ ಮಾಡಲಾಗುತ್ತಿದೆ ಎಂದು ರಾಜೇಶ್ ಅಗರವಾಲ್ ಹೇಳಿದ್ದಾರೆ.

27ಕ್ಕೆ ಭಾರತ–ಐರೋಪ್ಯ ಒಕ್ಕೂಟ ಶೃಂಗಸಭೆ

ಐರೋಪ್ಯ ಸಮಿತಿಯ ಅಧ್ಯಕ್ಷ ಆಂಟೋನಿಯೊ ಲೂಯಿಸ್ ಸ್ಯಾಂಟೋಸ್ ಡ ಕೋಸ್ಟಾ ಮತ್ತು ಐರೋಪ್ಯ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರು ಜನವರಿ 25ರಿಂದ 27ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದು, 77ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಜ. 27ರಂದು ನಡೆಯಲಿರುವ 16ನೇ ಭಾರತ–ಐರೋಪ್ಯ ಒಕ್ಕೂಟ ಶೃಂಗಸಭೆಯ ಸಹ-ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಈ ವೇಳೆ ಎರಡೂ ಕಡೆಯವರು ಬಹುನಿರೀಕ್ಷಿತ ಭಾರತ–ಐರೋಪ್ಯ ಒಕ್ಕೂಟದ ವ್ಯಾಪಾರ ಒಪ್ಪಂದವನ್ನು ದೃಢೀಕರಿಸುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಸುಂಕ ಹೇರಿಕೆ: ಅಮೆರಿಕಕ್ಕೆ ರಫ್ತು ಇಳಿಕೆ

ಡಿಸೆಂಬರ್ ತಿಂಗಳಿನಲ್ಲಿ ಅಮೆರಿಕಕ್ಕೆ ದೇಶದ ಸರಕುಗಳ ರಫ್ತು ಪ್ರಮಾಣ ಶೇ 1.83ರಷ್ಟು ಇಳಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಭಾರತದ ಸರಕುಗಳ ಮೇಲೆ ಅಮೆರಿಕ ಹೇರಿದ ಹೆಚ್ಚಿನ ಸುಂಕವು ರಫ್ತು ಕಡಿಮೆ ಆಗಲು ಕಾರಣ ಎಂದು ತಿಳಿಸಿದೆ. ಡಿಸೆಂಬರ್‌ನಲ್ಲಿ ₹62,192 ಕೋಟಿ ಮೌಲ್ಯದ ಸರಕುಗಳು ರಫ್ತಾಗಿವೆ. ಆಮದು ಶೇ 7.57ರಷ್ಟು ಹೆಚ್ಚಾಗಿದ್ದು, ₹36,426 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಚೀನಾಕ್ಕೆ ರಫ್ತು ಶೇ 67ರಷ್ಟು ಜಿಗಿತ: ಡಿಸೆಂಬರ್ ತಿಂಗಳಿನಲ್ಲಿ ಚೀನಾಕ್ಕೆ ಭಾರತದಿಂದ, ₹18,437 ಕೋಟಿ ಮೌಲ್ಯದ ಸರಕುಗಳು ರಫ್ತಾಗಿದ್ದು, 2024ರ ಡಿಸೆಂಬರ್‌ಗೆ ಹೋಲಿಸಿದರೆ ರಫ್ತು ಪ್ರಮಾಣದಲ್ಲಿ ಶೇ 67.35ರಷ್ಟು ಹೆಚ್ಚಳವಾಗಿದೆ.

ಎಲೆಕ್ಟ್ರಾನಿಕ್ಸ್, ಸಾಗರೋತ್ಪನ್ನಗಳು ಸೇರಿದಂತೆ ವಿವಿಧ ಸರಕುಗಳ ರಫ್ತಿನಲ್ಲಿ ಹೆಚ್ಚಳವಾಗಿದೆ. ಇದು ಒಟ್ಟಾರೆ ರಫ್ತು ಹೆಚ್ಚಳಕ್ಕೆ ಕಾರಣವಾಗಿದೆ. ಇದೇ ಅವಧಿಯಲ್ಲಿ ಚೀನಾದಿಂದ ಭಾರತವು, ₹1 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದ್ದು, ಶೇ 20ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಅಮೆರಿಕದ ನಂತರ ಚೀನಾವು ಭಾರತದ ಎರಡನೇ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ.

ಮುಂಬೈ ಧಾರಣೆ (ಶೇಂಗಾ)
15-01-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8000-8100
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಪಾಮ್ ವಾರದ ಡೆಲಿವರಿ	1273 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1505 (1510)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,40,500 (1,41,600)
ಬೆಳ್ಳಿ ಕೆ.ಜಿಗೆ	2,75,000 (2,81,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಐಒಬಿ ಲಾಭ ಶೇ 56ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (ಐಒಬಿ) ನಿವ್ವಳ ಲಾಭದಲ್ಲಿ ಶೇ 56ರಷ್ಟು ಏರಿಕೆಯಾಗಿದೆ.

2024-25ರ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್, ₹874 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹1,365 ಕೋಟಿ ಲಾಭ ಗಳಿಸಲಾಗಿದೆ ಎಂದು ಬ್ಯಾಂಕ್ ಬಿಎಸ್‌ಇಗೆ ತಿಳಿಸಿದೆ.

ಒಟ್ಟು ವರಮಾನವು ಈ ಅವಧಿಯಲ್ಲಿ ₹8,409 ಕೋಟಿಯಿಂದ ₹9,672 ಕೋಟಿಗೆ ಹೆಚ್ಚಳವಾಗಿದೆ. ನಿವ್ವಳ ಬಡ್ಡಿ ವರಮಾನವು (ಎನ್‌ಐಐ) ಶೇ 18ರಷ್ಟು ಏರಿಕೆಯಾಗಿದ್ದು, ₹3,299 ಕೋಟಿಯಷ್ಟಾಗಿದೆ. ಒಟ್ಟು ವಸೂಲಾಗದ ಸಾಲದ ಪ್ರಮಾಣ (ಜಿಎನ್‌ಪಿಎ) ಶೇ 2.55ರಿಂದ ಶೇ 1.54ಕ್ಕೆ ಇಳಿಕೆ ಆಗಿದೆ.

ಪ್ರವಾಸಿ, ಉದ್ಯೋಗ ವೀಸಾ ಅಬಾಧಿತ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಬಾಂಗ್ಲಾದೇಶ, ಪಾಕಿಸ್ತಾನ ಸೇರಿದಂತೆ 'ಹೆಚ್ಚು ಅಪಾಯಕಾರಿ' ಎಂದು ಪರಿಗಣಿಸಲಾದ 75 ದೇಶಗಳ ವಲಸಿಗರ ವೀಸಾ ಅರ್ಜಿಗಳ ಪರಿಶೀಲನೆ ಸ್ಥಗಿತಗೊಳಿಸಿ ಹೊರಡಿಸಿರುವ ಆದೇಶವು ಪ್ರವಾಸಿ ಅಥವಾ ಉದ್ಯೋಗ ವೀಸಾಗಳಿಗೆ ಅನ್ವಯಿಸುವುದಿಲ್ಲ ಎಂದು ಅಮೆರಿಕ ಹೇಳಿದೆ.

ಅಮೆರಿಕದಲ್ಲಿ ಶಾಶ್ವತವಾಗಿ ನೆಲಸುವ ಉದ್ದೇಶದೊಂದಿಗೆ ಸಲ್ಲಿಸಲಾಗಿರುವ ಅರ್ಜಿಗಳಿಗೆ ಇದು ಅನ್ವಯವಾಗುತ್ತದೆ ಎಂದು ಎಂದು ತಿಳಿಸಿದೆ.

ಈ 75 ದೇಶಗಳ ಪಟ್ಟಿಯನ್ನು ವಿದೇಶಾಂಗ ಇಲಾಖೆ ಬುಧವಾರ ಬಿಡುಗಡೆ ಮಾಡಿದೆ. ಅಮೆರಿಕದ ನಾಗರಿಕರ ಕಲ್ಯಾಣ ಯೋಜನೆಗಳ ಪ್ರಯೋಜನವನ್ನು ಅತಿ ಹೆಚ್ಚು ಪ್ರಮಾಣದಲ್ಲಿ ಈ ದೇಶಗಳ ವಲಸಿಗರು ಪಡೆದುಕೊಳ್ಳುತ್ತಿದ್ದಾರೆ ಎಂಬ ಕಾರಣ ನೀಡಿ ವಲಸೆ ವೀಸಾ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ತಿಳಿಸಿದೆ.

ಜನವರಿ 21ರಿಂದ ಜಾರಿಗೆ ಬರುವಂತೆ ಅಫ್ಗಾನಿಸ್ತಾನ, ಅಲ್ಬೇನಿಯಾ, ಭೂತಾನ್, ಬ್ರೆಜಿಲ್, ಬರ್ಮಾ, ಕಾಂಬೋಡಿಯಾ ಸೇರಿದಂತೆ 75 ದೇಶಗಳ ವಲಸಿಗರಿಗೆ ವೀಸಾ ವಿತರಣೆಯನ್ನು ಸ್ಥಗಿತಗೊಳಿಸಲಾಗುತ್ತದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1335 (1340)
ಸೂರ್ಯಕಾಂತಿ (ರಿಫೈನ್ಡ್)	₹1575 (1580)
ಪಾಮೋಲಿನ್	₹1275 (1280)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹605
	12 ಕ್ಕೆ	₹90
ಮೈಸೂರು:	100 ಕ್ಕೆ	₹605

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹220-767
ದ್ವಿತಳಿ (ಬಿ.ವಿ)	₹333-889

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹167.50

'ನೋಂದಣಿಗಷ್ಟೇ ಪೌರತ್ವ ದೃಢೀಕರಣ'

ಒಂದನೇ ಪುಟದಿಂದ...

ಅಲ್ಲದೇ 'ಮತದಾರರ ನೋಂದಣಿ ಹಂತದಲ್ಲಿ ಇವೆಲ್ಲವನ್ನೂ ದೃಢಪಡಿಸಬೇಕು. ಈ ಮೂರೂ ಷರತ್ತುಗಳನ್ನು ಪೂರೈಸದ ಹೊರತು, ಒಬ್ಬರು ಮತದಾರರಾಗಿ ನೋಂದಾಯಿಸಲು ಅರ್ಹರಾಗಿರುವುದಿಲ್ಲ' ಎಂದು ದ್ವಿವೇದಿ ವಾದಿಸಿದರು.

ಒಬ್ಬ ವ್ಯಕ್ತಿಯ ಪೌರತ್ವ ದೃಢಪಡದಿದ್ದರೂ ಆತನನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿದರೆ, ಅದು ಸಂವಿಧಾನದ ಆಶಯಕ್ಕೆ ವಿರುದ್ಧವಾಗುತ್ತದೆ ಎಂದು ಹೇಳಿದರು.

ಅರ್ಜಿದಾರರಲ್ಲಿ ಒಬ್ಬರಾದ 'ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ಪರ ಹಾಜರಾದ ವಕೀಲ ಪ್ರಶಾಂತ್ ಭೂಷಣ್, 'ಮತದಾನಕ್ಕೆ ಪೌರತ್ವವು ಪೂರ್ವಭಾವಿ ಷರತ್ತು ಎಂಬುದು ನಿರ್ವಿವಾದ. ಆದರೆ, ಪೌರತ್ವವನ್ನು ನಿರ್ಧರಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆಯೇ ಎಂಬುದು ಪ್ರಮುಖ ಪ್ರಶ್ನೆಯಾಗಿದೆ' ಎಂದರು.

ಅದಕ್ಕೆ ಸಿಜೆಐ, 'ನಾಗರಿಕರನ್ನು ಗುರುತಿಸುವುದಷ್ಟೇ ಆಯೋಗದ ಕೆಲಸ; ಪೌರತ್ವವನ್ನು ಅದರ ವಿಶಾಲ ಅರ್ಥದಲ್ಲಿ ನಿರ್ಣಯಿಸುವುದು ಅಲ್ಲ' ಎಂದರು.

'ಈ ವಿಚಾರದಲ್ಲಿ ಚುನಾವಣಾ ಆಯೋಗವು ಸೀಮಿತ ಅಧಿಕಾರವನ್ನು ಹೊಂದಿದೆ. ಮತದಾರರಾಗಿ ನೋಂದಣಿ ಮಾಡಿಕೊಳ್ಳಲು ಮಾತ್ರ ಆಯೋಗವು ಪೌರತ್ವವನ್ನು ನಿರ್ಧರಿಸುತ್ತದೆ. ನಾವು ಯಾರನ್ನೂ ಗಡಿಪಾರು ಮಾಡಲು ಸಾಧ್ಯವಿಲ್ಲ ಅಥವಾ ಭಾರತದಲ್ಲಿ ನೆಲಸಲು ವ್ಯಕ್ತಿಗೆ ವೀಸಾ ಇದೆಯೇ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ. ಆ ವಿಷಯ ನಮ್ಮ ವ್ಯಾಪ್ತಿಗೆ ಬರುವುದಿಲ್ಲ' ಎಂದು ದ್ವಿವೇದಿ ಸ್ಪಷ್ಟಪಡಿಸಿದರು.

ಚುನಾವಣಾ ಆಯೋಗವು ಪೌರತ್ವವನ್ನು ನೀಡುವ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲದಿದ್ದರೂ ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಕೊಳ್ಳುವ ವ್ಯಕ್ತಿ ನಿಜವಾಗಿಯೂ ಈ ದೇಶದ ಪ್ರಜೆಯೇ ಎಂಬುದನ್ನು ಪರಿಶೀಲಿಸುವ ಅಧಿಕಾರ ಹೊಂದಿದೆ ಎಂದು ಹೇಳಿದ ಪೀಠ, ವಿಚಾರಣೆಯನ್ನು ಜನವರಿ 20ಕ್ಕೆ ಮುಂದೂಡಿತು.

ಗ್ರೀನ್‌ಲ್ಯಾಂಡ್: ಐರೋಪ್ಯ ರಾಷ್ಟ್ರಗಳ ಯೋಧರ ಪಹರೆ

ನೂಕ್ (ಗ್ರೀನ್‌ಲ್ಯಾಂಡ್) (ಎಪಿ): ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಒಡ್ಡಿರುವ ನಡುವೆಯೇ, ಫ್ರಾನ್ಸ್, ಜರ್ಮನಿ, ನಾರ್ವೆ, ಸ್ವೀಡನ್ ಸೇರಿ ಹಲವು ಯುರೋಪಿಯನ್ ರಾಷ್ಟ್ರಗಳ ಯೋಧರು ಗ್ರೀನ್‌ಲ್ಯಾಂಡ್‌ಗೆ ಬಂದಿಳಿದಿದ್ದಾರೆ.

ಫ್ರಾನ್ಸ್‌ನ 15 ಯೋಧರು ಸಮರಾಭ್ಯಾಸಕ್ಕಾಗಿ ನೂಕ್‌ನಲ್ಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗ್ರೀನ್‌ಲ್ಯಾಂಡ್‌ಗೆ 13 ಮಂದಿಯ ವಿಚಕ್ಷಣ ತಂಡವನ್ನು ಗುರುವಾರ ನಿಯೋಜಿಸಲಾಗುವುದು ಎಂದು ಜರ್ಮನಿ ರಕ್ಷಣಾ ಸಚಿವಾಲಯ ತಿಳಿಸಿದೆ.

ಗ್ರೀನ್‌ಲ್ಯಾಂಡ್‌ನಲ್ಲಿ ಸೇನಾ ಬಲವನ್ನು ಹೆಚ್ಚಿಸುವುದಾಗಿ ಡೆನ್ಮಾರ್ಕ್ ಘೋಷಿಸಿದ್ದರೆ, ಮತ್ತಷ್ಟು ಸೇನಾ ತುಕಡಿಗಳನ್ನು ಕಳುಹಿಸುವುದಾಗಿ ಫ್ರಾನ್ಸ್ ಹೇಳಿದೆ.

'ಇರಾನ್: ಸುರಕ್ಷಿತ ಸ್ಥಳಗಳಿಗೆ ತೆರಳಿ'

ಇರಾನ್‌ಗೆ ಪ್ರವಾಸ ಮಾಡದಂತೆ ಭಾರತ ಸರ್ಕಾರ ಸೂಚನೆ

ಶ್ರೀನಗರ (ಪಿಟಿಐ): ಇರಾನ್‌ನಲ್ಲಿ ಶಾಂತಿ-ಸುವ್ಯವಸ್ಥೆ ಹದಗೆಟ್ಟಿದ್ದು, ಅಲ್ಲಿಗೆ ಭಾರತೀಯರು ಪ್ರವಾಸ ಮಾಡಬಾರದು ಎಂದು ವಿದೇಶಾಂಗ ಸಚಿವಾಲಯ ಎಚ್ಚರಿಕೆ ನೀಡಿದೆ.

'ಇರಾನ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಸೂಚನೆ ಬರುವವರೆಗೂ ಭಾರತೀಯ ಪ್ರಜೆಗಳು ಇಸ್ಲಾಮಿಕ್ ಗಣರಾಜ್ಯ ಇರಾನ್‌ಗೆ ಪ್ರಯಾಣಿಸುವುದನ್ನು ತಪ್ಪಿಸಬೇಕು. ಅಲ್ಲಿ ವಾಸಿಸುತ್ತಿರುವ ಭಾರತೀಯರು ಮತ್ತು ಪಿಐಒಗಳು (ಭಾರತೀಯ ಮೂಲದ ವ್ಯಕ್ತಿಗಳು) ಎಚ್ಚರಿಕೆ ವಹಿಸಬೇಕು. ಪ್ರತಿಭಟನಾ ಪ್ರದೇಶಗಳಿಗೆ ಭೇಟಿ ನೀಡಬಾರದು' ಎಂದು ಸಲಹೆ ನೀಡಿದೆ.

ವಿದ್ಯಾರ್ಥಿಗಳು, ಯಾತ್ರಿಕರು, ಉದ್ಯಮಿಗಳು ಮತ್ತು ಪ್ರವಾಸಿಗರು ಸೇರಿದಂತೆ ಎಲ್ಲ ಭಾರತೀಯರು ಲಭ್ಯವಿರುವ ಸಾರಿಗೆ ವ್ಯವಸ್ಥೆಯನ್ನು ಬಳಸಿಕೊಂಡು ಇರಾನ್‌ನಿಂದ ಹೊರಹೋಗಬೇಕು ಎಂದು ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸೂಚಿಸಿದೆ.


ಇರಾನ್‌ನ ಟೆಹರಾನ್ ನಗರದ ನೋಟ —ಎಎಫ್‌ಪಿ ಚಿತ್ರ

ಭಾರತೀಯ ಪ್ರಜೆಗಳು ತಮ್ಮ ಪಾಸ್‌ಪೋರ್ಟ್ ಸೇರಿದಂತೆ ಪ್ರಯಾಣ ಮತ್ತು ವಲಸೆ ದಾಖಲೆಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳಬೇಕು. ಇರಾನ್‌ನಲ್ಲಿ ನಿವಾಸಿ ವೀಸಾಗಳಲ್ಲಿ ವಾಸಿಸುವ ಭಾರತೀಯರು ಸಹ ರಾಯಭಾರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಸೂಚಿಸಿದೆ.

ವಿದ್ಯಾರ್ಥಿಗಳು ಸೇರಿದಂತೆ 10 ಸಾವಿರಕ್ಕೂ ಹೆಚ್ಚು ಭಾರತೀಯರು ಇರಾನ್‌ನಲ್ಲಿ ವಾಸಿಸುತ್ತಿದ್ದಾರೆ.

ಆಡಳಿತ ವಿರೋಧಿ ಪ್ರತಿಭಟನಕಾರರ ಮೇಲೆ ಇರಾನ್ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಹಾಗೂ ಹಿಂಸಾಚಾರದಿಂದ ಈವರೆಗೆ 2,500ಕ್ಕೂ ಹೆಚ್ಚಿನ ಜನರು ಮೃತಪಟ್ಟಿದ್ದಾರೆ.

ತಾಯ್ನಾಡಿಗೆ ಕರೆತನ್ನಿ: ಇರಾನ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಕಾಶ್ಮೀರಿ ವಿದ್ಯಾರ್ಥಿಗಳನ್ನು ತಾಯ್ನಾಡಿಗೆ ಕರೆತರುವಂತೆ ಒತ್ತಾಯಿಸಿ ಪೋಷಕರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಶ್ರೀನಗರದ ಪ್ರೆಸ್ ಎನ್‌ಕ್ಲೇವ್‌ನಲ್ಲಿ ಜಮಾಯಿಸಿದ ಪೋಷಕರು, ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಇರಾನ್‌ನಲ್ಲಿ ತಲೆದೋರಿರುವ ಪರಿಸ್ಥಿತಿಯ ಬಗ್ಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತನಾಡಿದ್ದೇನೆ. ಅಲ್ಲಿ ಸಿಲುಕಿರುವ ಜಮ್ಮು ಮತ್ತು ಕಾಶ್ಮೀರದ ವಿದ್ಯಾರ್ಥಿಗಳನ್ನು ರಕ್ಷಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಸಚಿವರು ಭರವಸೆ ನೀಡಿದ್ದಾರೆ' ಎಂದು ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು 'ಎಕ್ಸ್'ನಲ್ಲಿ ಗುರುವಾರ ಪೋಸ್ಟ್ ಮಾಡಿದ್ದಾರೆ.

ಅಮೆರಿಕಕ್ಕೆ ತೆರಳಬೇಕಿದ್ದ 3 ವಿಮಾನ ರದ್ದು

ನವದೆಹಲಿ (ಪಿಟಿಐ): ಇರಾನ್ ವಾಯುಪ್ರದೇಶ ಮುಚ್ಚಿರುವುದರಿಂದ ಅಮೆರಿಕಕ್ಕೆ ತೆರಳಬೇಕಿದ್ದ ಕನಿಷ್ಠ ಮೂರು ವಿಮಾನ ಸಂಚಾರಗಳನ್ನು ಏರ್ ಇಂಡಿಯಾ ಗುರುವಾರ ರದ್ದುಗೊಳಿಸಿದೆ. ಯುರೋಪ್‌ಗೆ ತೆರಳುವ ಕೆಲ ವಿಮಾನಗಳ ಸೇವೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ ಎಂದು ಸಂಸ್ಥೆ ಹೇಳಿದೆ.

ದೆಹಲಿಯಿಂದ ನ್ಯೂಯಾರ್ಕ್ ಮತ್ತು ನೇವಾರ್ಕ್‌ಗೆ ತೆರಳಬೇಕಿದ್ದ ಎರಡು ವಿಮಾನ ಹಾಗೂ ಮುಂಬೈನಿಂದ ನ್ಯೂಯಾರ್ಕ್‌ಗೆ ತೆರಳಬೇಕಿದ್ದ ಒಂದು ವಿಮಾನ ಸಂಚಾರ ರದ್ದುಗೊಳಿಸಲಾಗಿದೆ.

'ದೆಹಲಿಯಿಂದ ನ್ಯೂಯಾರ್ಕ್‌ಗೆ (ಜೆಎಫ್‌ಕೆ) ಹೊರಟ ವಿಮಾನ ಎಐ101 ಟೇಕ್ ಆಫ್ ಆದ ಸ್ವಲ್ಪ ಸಮಯದಲ್ಲೇ, ಇರಾನ್‌ನ ವಾಯುಪ್ರದೇಶ ಮುಚ್ಚಿರುವ ಸುದ್ದಿ ಬಂದಿದ್ದರಿಂದ ದೆಹಲಿಗೆ ಹಿಂತಿರುಗಬೇಕಾಯಿತು. ದಟ್ಟವಾದ ಮಂಜಿನ ನಡುವೆ ವಿಮಾನ ನಿಲ್ದಾಣದಲ್ಲಿ ಇಳಿದ ವಿಮಾನ ರನ್‌ವೇಯಲ್ಲಿ ಚಲಿಸುತ್ತಿದ್ದಾಗ ಯಾವುದೋ ವಸ್ತು ಬಡಿದ ಪರಿಣಾಮ ಬಲ ಇಂಜಿನ್‌ಗೆ ಹಾನಿಯಾಗಿದೆ' ಎಂದು ಏರ್ ಇಂಡಿಯಾ ಗುರುವಾರ ತಿಳಿಸಿದೆ.

'ಇರಾನ್‌ನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿದ್ದು, ಅಲ್ಲಿನ ವಾಯುಪ್ರದೇಶವನ್ನು ಮುಚ್ಚಲಾಗಿದೆ. ನಮ್ಮ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಆ ಪ್ರದೇಶದ ಮೇಲೆ ಹಾರುವ ವಿಮಾನಗಳು ಈಗ ಪರ್ಯಾಯ ಮಾರ್ಗದ ಮೂಲಕ ಸಂಚರಿಸುತ್ತಿವೆ. ಇದು ವಿಳಂಬಕ್ಕೆ ಕಾರಣವಾಗಿದೆ' ಎಂದು ಏರ್ ಇಂಡಿಯಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಪಾಕಿಸ್ತಾನದ ವಾಯುಪ್ರದೇಶ ಮುಚ್ಚಿರುವುದರಿಂದ, ಏರ್ ಇಂಡಿಯಾ ಈಗಾಗಲೇ ಪಶ್ಚಿಮಕ್ಕೆ ಹೋಗುವ ಹಲವು ವಿಮಾನಗಳಿಗೆ ದೀರ್ಘ ಮಾರ್ಗ ಬಳಸುತ್ತಿದೆ.

ಇಂಡಿಗೊ ಸೇವೆ ವ್ಯತ್ಯಯ: 'ಇರಾನ್ ವಾಯುಪ್ರದೇಶವನ್ನು ಮುಚ್ಚಿರುವುದರಿಂದ, ಕಾಮನ್‌ವೆಲ್ತ್ ಗಣರಾಜ್ಯ ದೇಶಗಳು ಯುರೋಪ್ ಮತ್ತು ಟರ್ಕಿಗೆ ಹೋಗುವ ವಿಮಾನಗಳ ಹಾರಾಟದ ಮೇಲೆ ಪರಿಣಾಮ ಬೀರಿದೆ. ಪರಿಸ್ಥಿತಿ ನಿಭಾಯಿಸಲು ಮತ್ತು ಬಾಧಿತ ಗ್ರಾಹಕರ ನೆರವಿಗೆ ಧಾವಿಸಲು ಸಂಸ್ಥೆಯ ಸಿಬ್ಬಂದಿ ಪ್ರಯತ್ನಿಸುತ್ತಿದ್ದಾರೆ' ಎಂದು ಇಂಡಿಗೊ ಸಂಸ್ಥೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಗಡಿ ಭಾಗದಲ್ಲಿ ಪಾಕ್ ಡ್ರೋನ್



ಪೂಂಛ್/ ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಮತ್ತು ಸಾಂಬಾ ಜಿಲ್ಲೆಯ ಗಡಿ ಭಾಗದಲ್ಲಿ ಗುರುವಾರ ರಾತ್ರಿ ಪಾಕಿಸ್ತಾನದ ಡ್ರೋನ್‌ಗಳು ಹಾರಾಟ ನಡೆಸಿವೆ.

ಪೂಂಛ್‌ನ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಮತ್ತು ಸಾಂಬಾ ಜಿಲ್ಲೆಯ ರಾಮಗಢ ವಲಯದಲ್ಲಿ ಡ್ರೋನ್‌ಗಳು ಕಂಡುಬಂದಿವೆ. ಭದ್ರತಾ ಪಡೆಗಳು ಮುನ್ನೆಚ್ಚರಿಕೆ ಕ್ರಮವಾಗಿ ತಕ್ಷಣ ವಾಯು ರಕ್ಷಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಿವೆ ಎಂದು ಮೂಲಗಳು ತಿಳಿಸಿವೆ.

ಮಂಗಳವಾರ ಕೂಡಾ ಭಾರತ–ಪಾಕ್ ಗಡಿಯಲ್ಲಿ ಕೆಲವು ಡ್ರೋನ್‌ಗಳು ಹಾರಾಟ ನಡೆಸಿದ್ದವು. ಭದ್ರತಾ ಸಿಬ್ಬಂದಿ ಅವುಗಳತ್ತ ಗುಂಡು ಹಾರಿಸಿದ್ದರು. ಈ ಬೆಳವಣಿಗೆಯ ಬೆನ್ನಲ್ಲೇ ಗಡಿಯುದ್ದಕ್ಕೂ ಭಾರತದ ಸೇನೆ ಕಟ್ಟೆಚ್ಚರ ವಹಿಸಿದೆ.

ಮರಣ ದಂಡನೆ ನಿರ್ಧಾರ ಕೈಬಿಟ್ಟ ಇರಾನ್

ಒಂದನೇ ಪುಟದಿಂದ...

ಇದರ ಬೆನ್ನಲ್ಲೇ, ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ನಡೆಸುವ ಬೆದರಿಕೆ ಒಡ್ಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕಾದು ನೋಡುವ ತಂತ್ರಕ್ಕೆ ಮೊರೆ ಹೋಗಿದ್ದಾರೆ.

'ಮೂಲವೊಂದರ ಪ್ರಕಾರ, ಪ್ರತಿಭಟನಕಾರರಿಗೆ ಗಲ್ಲು ಶಿಕ್ಷೆ ವಿಧಿಸಲಾಗುತ್ತಿಲ್ಲ ಎಂಬ ಭರವಸೆ ಸಿಕ್ಕಿದೆ. ಹಲವು ಜನರನ್ನು ಜ.15ರಂದು (ಗುರುವಾರ) ಗಲ್ಲು ಶಿಕ್ಷೆಗೆ ಗುರಿಪಡಿಸಲು ಇರಾನ್ ನಿರ್ಧರಿಸಿತ್ತು. ಈಗ ಅಂತಹ ಕ್ರಮ ಕೈಗೊಂಡಿಲ್ಲ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ನಾವು ಕೂಡ ಮಾಹಿತಿ ಕಲೆಹಾಕುತ್ತಿದ್ದೇವೆ' ಎಂದು ಟ್ರಂಪ್ ತಿಳಿಸಿದ್ದಾರೆ.

'ಇರಾನ್‌ನ ವಿರುದ್ಧ ಸೇನಾ ಕಾರ್ಯಾಚರಣೆ ನಡೆಸುವುದಿಲ್ಲವೇ' ಎಂಬ ಪತ್ರಕರ್ತರ ಪ್ರಶ್ನೆಗೆ, 'ಕಾದು ನೋಡೋಣ' ಎಂದು ಪ್ರತಿಕ್ರಿಯಿಸಿದ್ದಾರೆ.

ಇರಾನ್ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದ್ದವರ ಪೈಕಿ 3,428 ಮಂದಿಯನ್ನು ಹತ್ಯೆ ಮಾಡಲಾಗಿದೆ ಎಂದು ಮಾನವ ಹಕ್ಕು ಸಂಘಟನೆಗಳು ಕಳವಳ ವ್ಯಕ್ತಪಡಿಸಿದ್ದವು. ಪ್ರತಿಭಟನಕಾರರಿಗೆ ಅಗತ್ಯ ನೆರವು ನೀಡಲಾಗುವುದು ಎಂದು ಇತ್ತೀಚೆಗೆ ಟ್ರಂಪ್ ಕೂಡ ಎಚ್ಚರಿಸಿದ್ದರು.

'ಮರಣದಂಡನೆ ಇಲ್ಲ': 'ಜನವರಿ 15ರಂದು ಯಾರಿಗೂ ಗಲ್ಲು ಶಿಕ್ಷೆ ವಿಧಿಸಿಲ್ಲ, 16ರಂದೂ ಇಂತಹ ಕ್ರಮ ಕೈಗೊಳ್ಳುವುದಿಲ್ಲ' ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಅಮೆರಿಕದ 'ಫಾಕ್ಸ್‌ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಅಮೆರಿಕ ಮಿತ್ರರಾಷ್ಟ್ರ ಇಸ್ರೇಲ್, ಇರಾನ್‌ನಲ್ಲಿ ಹಿಂಸಾಚಾರಕ್ಕೆ ಪ್ರೋತ್ಸಾಹ ನೀಡುತ್ತಿದೆ ಎಂದು ಅವರು ಇದೇ ವೇಳೆ ಆರೋಪಿಸಿದ್ದಾರೆ.

'ಇರಾನ್‌ಗೆ ಒಂದು ಅವಕಾಶ ಕೊಡಿ': 'ಪ್ರತಿಭಟನಕಾರರ ಮೇಲೆ ಕ್ರಮ ಕೈಗೊಳ್ಳದಿರುವುದು ಸೇರಿ ಸದುದ್ದೇಶದ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಇರಾನ್‌ಗೆ ಒಂದು ಅವಕಾಶ ನೀಡುವಂತೆ ಸೌದಿ ಅರೇಬಿಯಾ, ಕತಾರ್ ಹಾಗೂ ಒಮಾನ್ ನಾಯಕರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮನವೊಲಿಸಿದರು' ಎಂದು ಸೌದಿ ಅರೇಬಿಯಾ ಅಧಿಕಾರಿಯೊಬ್ಬರು ರಿಯಾದ್‌ನಲ್ಲಿ ಗುರುವಾರ ಹೇಳಿದ್ದಾರೆ.

'ಇರಾನ್ ಮೇಲಿನ ಯಾವುದೇ ದಾಳಿಯು ಭೀಕರವಾಗಿರಲಿದೆ ಹಾಗೂ ಅದು ಪಶ್ಚಿಮ ಏಷ್ಯಾದ ಮೇಲೆ ಪರಿಣಾಮ ಬೀರಲಿದೆ ಎಂಬ ಆತಂಕವನ್ನು ವಿವರಿಸಲಾಯಿತು. ಸುದೀರ್ಘ ಮಾತುಕತೆ ಬಳಿಕ ಟ್ರಂಪ್ ಅವರಿಗೆ ಈ ಕುರಿತು ಮನವರಿಕೆ ಮಾಡಿಕೊಡಲಾಯಿತು. ಈ ಮೂರು ದೇಶಗಳು ಟ್ರಂಪ್ ಅವರೊಂದಿಗೆ ಮಾತುಕತೆ ಮುಂದುವರಿಸಿವೆ' ಎಂದು ತಿಳಿಸಿದ್ದಾರೆ.

'ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ಸೌಲಭ್ಯಗಳ ಮೇಲೆ ದಾಳಿ ನಡೆಸಿದರೆ ಆಗುವ ಪರಿಣಾಮಗಳ ಕುರಿತು ಇರಾನ್‌ಗೂ ತಿಳಿಸಲಾಯಿತು. ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ನಡೆಸುವ ದಾಳಿಗಳಿಂದ ಈ ಪ್ರದೇಶದಲ್ಲಿನ ರಾಷ್ಟ್ರಗಳ ನಡುವಿನ ಸಂಬಂಧದ ಮೇಲೂ ಪರಿಣಾಮ ಉಂಟಾಗಲಿದೆ ಎಂಬುದನ್ನು ಸಹ ಇರಾನ್‌ಗೆ ತಿಳಿಸಲಾಯಿತು' ಎಂದು ಸೌದಿ ಅರೇಬಿಯಾದ ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ.



ಇರಾನ್‌ನ ಪ್ರತಿಭಟನಕಾರರನ್ನು ಬೆಂಬಲಿಸಿ ಇಸ್ರೇಲ್‌ನ ಹೊಲೊನ್ ನಗರದಲ್ಲಿ ಗುರುವಾರ ನಾಗರಿಕರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

> **ಇಡೀ ದೇಶದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಮೂರು ದಿನ ನಡೆದ ಭಯೋತ್ಪಾದಕ ದಾಳಿಯ ಬಳಿಕ ವಾತಾವರಣವು ಶಾಂತವಾಗಿದೆ**
> **ಅಬ್ಬಾಸ್ ಅರಾಘ್ಚಿ,** ಇರಾನ್‌ನ ವಿದೇಶಾಂಗ ಸಚಿವ

ಗಲ್ಲಿನಿಂದ ಎರ್ಫಾನ್ ಪಾರು

ಇರಾನ್‌ನ ಇಸ್ಲಾಮಿಕ್ ಆಡಳಿತ ವ್ಯವಸ್ಥೆ ಹಾಗೂ ದೇಶದ ಭದ್ರತೆ ವಿರುದ್ಧ ಪ್ರಚಾರ ನಡೆಸಿ ದಂಗೆ ಸೃಷ್ಟಿಗೆ ಕಾರಣವಾದ ಆರೋಪದ ಮೇಲೆ ಟೆಹರಾನ್‌ನ ಹೊರವಲಯದಲ್ಲಿರುವ ಕರಾಜ್ ಜೈಲಿನಲ್ಲಿ ಬಂಧಿತನಾಗಿರುವ ಎರ್ಫಾನ್ ಸೊಲ್ತಾನಿಯನ್ನು (26) ಗುರುವಾರ ಗಲ್ಲಿಗೇರಿಸಲಾಗುತ್ತದೆ ಎಂದು ಹೇಳಲಾಗಿತ್ತು.

'ಎರ್ಫಾನ್‌ಗೆ ಮರಣದಂಡನೆ ವಿಧಿಸಲಾಗಿಲ್ಲ' ಎಂದು ಇರಾನ್‌ನ ನ್ಯಾಯಾಂಗ ಇಲಾಖೆಯು ಗುರುವಾರ ಸ್ಪಷ್ಟನೆ ನೀಡಿದೆ.

ಕಾನೂನಿನ ಪ್ರಕಾರ, ಅವರ ತಪ್ಪು ಮಾಡಿರುವುದು ಸಾಬೀತಾದರೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಅವರು ಅಪರಾಧ ಎಸಗಿರುವುದು ಸಾಬೀತಾದರೂ ಅದಕ್ಕಾಗಿ ಮರಣದಂಡನೆ ವಿಧಿಸಲು ಕಾನೂನಿನಲ್ಲಿ ಅವಕಾಶವಿಲ್ಲ' ಎಂದೂ ಸ್ಪಷ್ಟನೆ ನೀಡಿದೆ.

ಚಿಟಿಕೆ ಸುದ್ದಿ

ಛತ್ತೀಸಗಢ: 52 ನಕ್ಸಲರ ಶರಣಾಗತಿ

ಬಿಜಾಪುರ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಗುರುವಾರ 21 ಮಹಿಳಾ ನಕ್ಸಲರು ಸೇರಿದಂತೆ 52 ಮಂದಿ ಪೊಲೀಸರ ಎದುರು ಶರಣಾಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಶರಣಾದವರ ಪೈಕಿ 49 ನಕ್ಸಲರ ಸುಳಿವು ನೀಡಿದವರಿಗೆ ಒಟ್ಟು ₹1.41 ಕೋಟಿ ಬಹುಮಾನ ಘೋಷಿಸಲಾಗಿತ್ತು. ರಾಜ್ಯ ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ನೀತಿಯಿಂದ ಪ್ರಭಾವಿತಗೊಂಡ ಇವರು, ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ ಎಂದು ಬಿಜಾಪುರ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ಯಾದವ್ ಅವರು ತಿಳಿಸಿದ್ದಾರೆ.

ಇಬ್ಬರು ನಕ್ಸಲ ಶರಣಾಗತಿ

(ಹೈದರಾಬಾದ್ ವರದಿ): ತೆಲಂಗಾಣದ ಮುಲುಗು ಜಿಲ್ಲೆಯಲ್ಲಿ ಛತ್ತೀಸಗಢದ ನಿಷೇಧಿತ ಸಿಪಿಐನ (ಮಾವೋವಾದಿ) ಇಬ್ಬರು ಸದಸ್ಯರು ಗುರುವಾರ ಪೊಲೀಸರ ಎದುರು ಶರಣಾಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಮೂವರನ್ನು ಬಲಿಪಡೆದ ಗಾಳಿಪಟದ ದಾರ

ಸೂರತ್ (ಪಿಟಿಐ): ಗಾಳಿಪಟದ ಸೂತ್ರವು ದಿಢೀರನೆ ಕಂಡಿದ್ದರಿಂದ ಆತಂಕಗೊಂಡು ಸ್ಕೂಟರ್‌ಗೆ ಹಠಾತ್ ಬ್ರೇಕ್ ಹಾಕಿದ್ದರಿಂದ ಅಪಘಾತ ಉಂಟಾಗಿ, ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದಾರೆ. ಸೂರತ್‌ನ ಅದಾಜನ್ ಪ್ರದೇಶದಲ್ಲಿ ಘಟನೆ ನಡೆದಿದೆ.

ಪಶ್ಚಿಮ ಬಂಗಾಳದ ಶೇಖ್, ಸೂರತ್‌ನ ಚಿನ್ನಾಭರಣ ಮಳಿಗೆಯಲ್ಲಿ ಕಾರ್ಮಿಕರಾಗಿದ್ದರು. ಮಕರ ಸಂಕ್ರಾಂತಿ ಅಂಗವಾಗಿ ಪತ್ನಿ ಮತ್ತು 10 ವರ್ಷದ ಪುತ್ರಿಯೊಂದಿಗೆ ಸ್ಕೂಟರ್‌ನಲ್ಲಿ ರಜೆಯ ವಿಹಾರಕ್ಕಾಗಿ ಹೊರಟಿದ್ದರು. ಇಲ್ಲಿನ 40 ಅಡಿ ಎತ್ತರದ ಚಂದ್ರಶೇಖರ್ ಆಜಾದ್ ಮೇಲುಸೇತುವೆ ಮೇಲೆ ಸಾಗುವಾಗ ಅವಘಡ ಸಂಭವಿಸಿದೆ.

ಗಾಳಿಪಟದ ದಾರ ಕುತ್ತಿಗೆಗೆ ಸುತ್ತಿಕೊಳ್ಳುವುದನ್ನು ತಪ್ಪಿಸಲು ಸವಾರ ರೆಹಾನ್ ಶೇಖ್ (35) ತಕ್ಷಣ ಬ್ರೇಕ್ ಹಾಕಿದ್ದಾರೆ. ನಿಯಂತ್ರಣ ತಪ್ಪಿದ ಸ್ಕೂಟರ್ ಸಮೀಪದ ಗೋಡೆಗೆ ಅಪ್ಪಳಿಸಿ ಉರುಳಿದೆ. ಪತ್ನಿ ಮತ್ತು ಪುತ್ರಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರ ಗಾಯಗೊಳ್ಳೊಂದಿಗೆ ಆಸ್ಪತ್ರೆಯಲ್ಲಿದ್ದ ಶೇಖ್ ಗುರುವಾರ ಮೃತಪಟ್ಟಿದ್ದಾರೆ.

ವಿವಾದದಲ್ಲಿ 'ಮಹಾ' ಚುನಾವಣೆ

ಅಳಿಸಿಹೋಗುತ್ತಿದೆ ಶಾಯಿ, ಇವಿಎಂನಲ್ಲಿ ತಾಂತ್ರಿಕ ದೋಷ: ವಿಪಕ್ಷಗಳ ಕಿಡಿ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಲವು ಅವ್ಯವಹಾರಗಳು ನಡೆದಿವೆ ಎಂಬ ಆರೋಪ ಕೇಳಿಬಂದಿದೆ. ಇದಕ್ಕೆ ಪುಷ್ಟಿ ನೀಡುವಂತೆ ಮತದಾರರ ಬೆರಳಿಗೆ ಮಾರ್ಕರ್‌ನಲ್ಲಿ ಹಾಕಿರುವ ಶಾಯಿಯನ್ನು ಹಲವರು ಅಸಿಟೋನ್ ಬಳಸಿ ಅಳಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ಇದೀಗ ವಿವಾದಕ್ಕೆ ಕಾರಣವಾಗಿದೆ.

ಬೃಹನ್‌ಮುಂಬೈ ಮಹಾನಗರ ಪಾಲಿಕೆಯೂ (ಬಿಎಂಸಿ) ಸೇರಿದಂತೆ ರಾಜ್ಯದ 29 ನಗರ ಪಾಲಿಕೆಗಳಲ್ಲಿ ಗುರುವಾರ ಮತದಾನ ನಡೆದಿದ್ದು, ಶೇ 50ರಷ್ಟು ಮತಗಳು ಚಲಾವಣೆಯಾಗಿವೆ.

ಈ ನಡುವೆಯೇ ಹಲವು ವಾರ್ಡ್‌ಗಳಲ್ಲಿ ಮತದಾನದ ಬಳಿಕ ಬೆರಳಿಗೆ ಹಾಕಿರುವ ಶಾಯಿಯನ್ನು ಸಾಮಾನ್ಯ ಮತದಾರರು, ರಾಜಕಾರಣಿಗಳು ಹಾಗೂ ಕೆಲವು ಮಾಧ್ಯಮ ಪ್ರತಿನಿಧಿಗಳು ಅಸಿಟೋನ್‌ನಿಂದ ಅಳಿಸಬಹುದು ಎಂಬುದನ್ನು ತೋರಿಸಿದ್ದಾರೆ. ಈ ವಿಡಿಯೊ ಹರಿದಾಡುತ್ತಿದ್ದಂತೆಯೇ ಪ್ರತಿಪಕ್ಷಗಳಿಂದ ಚುನಾವಣಾ ಪ್ರಕ್ರಿಯೆಯ ಬಗ್ಗೆ ತೀವ್ರ ಆಕ್ಷೇಪಗಳು ವ್ಯಕ್ತವಾಗಿವೆ.

'ಶಾಯಿ ಅಳಿಸಬಹುದು ಎಂದು ನನ್ನ ಸಹೋದ್ಯೋಗಿಗಳೇ ನಿರೂಪಿಸಿದ್ದಾರೆ' ಎಂದು ನೇಲ್ ಪಾಲಿಶ್ ರಿಮೂವರ್ ಬಳಸಿ ಅಳಿಸಿ ಹಾಕುತ್ತಿರುವ ವಿಡಿಯೊವನ್ನು ಮುಂಬೈ ಕಾಂಗ್ರೆಸ್ ನಾಯಕಿ ವರ್ಷಾ ಗಾಯಕ್ವಾಡ್ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. ಇದು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿರುವುದು ಮಾತ್ರವಲ್ಲದೇ, ಬಿಎಂಸಿ, ರಾಜ್ಯ ಚುನಾವಣಾ ಆಯೋಗದ (ಎಸ್‌ಇಸಿ) ಹೊಣೆಗಾರಿಕೆಯ ಬಗ್ಗೆಯೂ ಪ್ರತಿಪಕ್ಷಗಳು ಕಿಡಿಕಾರಲು ಕಾರಣವಾಗಿದೆ.

ತಾಂತ್ರಿಕ ದೋಷ: ಪುಣೆ ಮಹಾನಗರ ಪಾಲಿಕೆಯ ವಿವಿಧ ವಾರ್ಡ್‌ಗಳಲ್ಲಿ ಮತದಾನ ಶುರುವಾಗುತ್ತಿದ್ದಂತೆಯೇ ಇವಿಎಂಗಳಲ್ಲಿ ತಾಂತ್ರಿಕ ದೋಷ ಕಂಡುಬಂದಿದೆ. 15ರಿಂದ 20 ಇವಿಎಂಗಳಲ್ಲಿ ಈ ಸಮಸ್ಯೆ ಎದುರಾಗಿದ್ದು, ಅವುಗಳನ್ನು ತಕ್ಷಣವೇ ಬದಲಿಸಲಾಗಿದೆ ಎಂದು ಚುನಾವಣಾ ಉಸ್ತುವಾರಿ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಇದರಲ್ಲಿಯೂ ಅಕ್ರಮ ಎಸಗಲಾಗಿದೆ ಎಂದು ಎನ್‌ಸಿಪಿ (ಎಸ್‌ಪಿ) ನಾಯಕ ರೋಹಿತ್ ಪವಾರ್ ಆರೋಪಿಸಿದ್ದಾರೆ.



ಪ್ರಿಂಟಿಂಗ್ ಆ್ಯಕ್ಸಲರಿ ಡಿಸ್‌ಪ್ಲೇ ಯೂನಿಟ್ ಬಳಕೆಗೆ ಸಂಬಂಧಿಸಿ ಎಸ್‌ಇಸಿ ಸ್ಪಷ್ಟನೆ ನೀಡಿಲ್ಲ. ಮತದಾರರಿಗೆ ಹಣ ಹಂಚಲು ಪ್ರಚಾರ ಸಮಯ ವಿಸ್ತರಿಸಲಾಗಿದೆ

ರಾಜ್ ಠಾಕ್ರೆ, ಎಂಎನ್‌ಎಸ್ ಮುಖ್ಯಸ್ಥ



ಅಕ್ರಮಗಳ ಮೂಲಕ ಪ್ರಜಾಪ್ರಭುತ್ವವನ್ನು ಹತ್ಯೆ ಮಾಡುವ ಪ್ರಯತ್ನ ನಡೆಯುತ್ತಿದೆ. ಸರ್ಕಾರ, ಎಸ್‌ಇಸಿ ಸೇರಿ ಈ ಪಿತೂರಿ ರೂಪಿಸಿವೆ. ಎಸ್‌ಇಸಿ ಸಂವಿಧಾನ ವಿರೋಧಿ ಸಂಸ್ಥೆ

ಉದ್ಧವ್ ಠಾಕ್ರೆ ಶಿವ ಸೇನಾ (ಯುಬಿಟಿ) ಮುಖ್ಯಸ್ಥ

'ತನಿಖೆ ನಡೆಸಲಾಗುತ್ತಿದೆ'

ಮತದಾರರ ಬೆರಳಿನ ಶಾಯಿ ಅಳಿಸಿಹಾಕಿರುವ ವಿಡಿಯೊ ಕುರಿತು ತನಿಖೆ ನಡೆಸಲಾಗುತ್ತಿದೆ. ಈ ಬಗ್ಗೆ ತಪ್ಪಾದ ಮಾಹಿತಿ ನೀಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್‌ಇಸಿ ಕಮಿಷನರ್ ದಿನೇಶ್ ವಾಘ್ಮರೆ ಹೇಳಿದ್ದಾರೆ. ಶಾಯಿ ಒಣಗಲು ಸ್ವಲ್ಪ ಸಮಯ ಬೇಕಾಗುತ್ತದೆ, ಅದನ್ನು ಅಳಿಸಿಹಾಕಬಾರದು. ಕೊರೆಸ್ ಕಂಪನಿಯ ಶಾಯಿಯನ್ನು 2011ರಿಂದಲೂ ಬಳಕೆ ಮಾಡಲಾಗುತ್ತಿದೆ ಎಂದೂ ಅವರು ಸ್ಪಷ್ಟನೆ ನೀಡಿದ್ದಾರೆ.

ಇದೇ ವೇಳೆ, 'ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಸಂರ್ಭದಲ್ಲಿ ಯಾವ ಮತಗಟ್ಟೆಗಳಲ್ಲಿ ಮತ ಚಲಾಯಿಸಿದ್ದೆವೋ ಅಲ್ಲಿ ಈ ಬಾರಿ ತಮ್ಮ ಹೆಸರು ಕಾಣಿಸುತ್ತಿಲ್ಲ' ಎಂದು ಹಲವರು ದೂರಿರುವ ಬಗ್ಗೆಯೂ ದಿನೇಶ್ ಪ್ರತಿಕ್ರಿಯಿಸಿದ್ದಾರೆ.

ಎರಡು ಗುಂಪುಗಳ ನಡುವೆ ಘರ್ಷಣೆ : ಇವಿಎಂ ಧ್ವಂಸ

ಮಹಾರಾಷ್ಟ್ರದ ಧುಲೆ ಎಂಬಲ್ಲಿ ಬಿಜೆಪಿ ಹಾಗೂ ಶಿವಸೇನಾ ಪಕ್ಷಗಳ ನಾಯಕರ ಬೆಂಬಲಿಗರ ನಡುವೆ ಮಾರಾಮಾರಿ ನಡೆದಿದೆ. ಈ ವೇಳೆ ವಾರ್ಡ್ 18ರ ಮತಗಟ್ಟೆಗೆ ನುಗ್ಗಿದ ಎರಡೂ ಗುಂಪುಗಳ ಬೆಂಬಲಿಗರು ಇವಿಎಂ ಧ್ವಂಸಗೊಳಿಸಿದ್ದಾರೆ. ಘಟನೆಯಿಂದಾಗಿ ಒಂದೂವರೆ ಗಂಟೆ ಮತದಾನ ಪ್ರಕ್ರಿಯೆ ಸ್ಥಗಿತಗೊಂಡಿದೆ. ಬಳಿಕ ಹೊಸ ಇವಿಎಂ ಅಳವಡಿಸಿ, ಪ್ರಕ್ರಿಯೆ ಮುಂದುವರಿಸಲಾಗಿದೆ. ಘಟನೆ ಸಂಬಂಧಿಸಿದಂತೆ ಪ್ರಕರಣಗಳ ದಾಖಲಿಸುವುದಾಗಿ ಪೊಲೀಸರು ತಿಳಿಸಿದ್ದಾರೆ.

ಉಮೇದುವಾರಿಕೆ ಹಿಂಪಡೆಯುವ ವಿಚಾರವಾಗಿ ಶಿವಸೇನಾ ನಾಯಕ ಮನೋಜ್ ಮೋರ್ ಹಾಗೂ ಬಿಜೆಪಿ ನಾಯಕ ವಿಲಾಸ್ ಶಿಂದೆ ಅವರ ಬೆಂಬಲಿಗರ ನಡುವೆ ಬುಧವಾರದಿಂದಲೂ ಗಲಾಟೆ ನಡೆಯುತ್ತಿತ್ತು. ಮನೋಜ್ ನಿವಾಸದ ಮೇಲೆ ಕಲ್ಲು ತೂರಾಟಕ್ಕೆ ಯತ್ನಿಸಲಾಗಿತ್ತು.

ಬಿಜೆಪಿ–ಶಿವಸೇನಾಗೆ ಗೆಲುವು: ಸಮೀಕ್ಷೆ

ಬಿಎಂಸಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನಾ ಮೈತ್ರಿಕೂಟವು ಗೆಲುವು ಸಾಧಿಸಲಿದೆ ಎಂದು ಹಲವು ಮತಗಟ್ಟೆ ಸಮೀಕ್ಷೆಗಳು ಹೇಳಿವೆ.

'ಮೈ ಆಕ್ಸಿಸ್ ಇಂಡಿಯಾ' ಸಂಸ್ಥೆಯ ಪ್ರಕಾರ, ಈ ಮೈತ್ರಿಕೂಟವು ಶೇ 42ರಷ್ಟು ಮತಗಳೊಂದಿಗೆ 131–151 ಸ್ಥಾನಗಳನ್ನು ಪಡೆದುಕೊಳ್ಳಲಿದೆ. ಶಿವಸೇನಾ (ಉದ್ಧವ್ ಬಣ) ಮತ್ತು ಎಂಎನ್‌ಎಸ್ ಮೈತ್ರಿಕೂಟವು ಶೇ 32ರಷ್ಟು ಮತಗಳನ್ನು ಪಡೆದು 58–68 ಸ್ಥಾನಗಳಲ್ಲಿ ಗೆಲುವು ಸಾಧಿಸಲಿವೆ. ಕಾಂಗ್ರೆಸ್, ವಂಚಿತ ಬಹುಜನ ಆಘಾಡಿ ಮತ್ತು ರಾಷ್ಟ್ರೀಯ ಸಮಾಜ್ ಪಕ್ಷದ ಮೈತ್ರಿಕೂಟವು 12–16 ಸ್ಥಾನಗಳನ್ನು ಪಡೆದುಕೊಳ್ಳಲಿದೆ ಎಂದು ಈ ಸಂಸ್ಥೆ ಅಂದಾಜಿಸಿದೆ.

ಉನ್ನಾವ್ ಪ್ರಕರಣ: ದೆಹಲಿ ಹೈಕೋರ್ಟ್‌ಗೆ ಸಂತ್ರಸ್ತೆ ಅರ್ಜಿ

ನವದೆಹಲಿ (ಪಿಟಿಐ): ಉನ್ನಾವ್ ಅತ್ಯಾಚಾರ ಪ್ರಕರಣದಲ್ಲಿ ವಿಧಿಸಿರುವ ಶಿಕ್ಷೆ ಪ್ರಶ್ನಿಸಿ ಕುಲದೀಪ್ ಸಿಂಗ್ ಸೆಂಗರ್ ಸಲ್ಲಿಸಿರುವ ಮೇಲ್ಮನವಿ ವಿರುದ್ಧವಾಗಿ ಹೆಚ್ಚಿನ ದಾಖಲೆಗಳನ್ನು ಗಮನಕ್ಕೆ ತರುವ ಸಂಬಂಧ ಸಂತ್ರಸ್ತೆ ಗುರುವಾರ ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದಾರೆ.

'ನನಗೆ ಹಾಗೂ ನನ್ನ ಕುಟುಂಬಕ್ಕೆ ಬೆದರಿಕೆ ಒಡ್ಡಿರುವುದು ಸೇರಿದಂತೆ ಇತ್ತೀಚಿನ ಬೆಳವಣಿಗೆಗಳ ಕುರಿತು ಕೆಲ ಸಂಗತಿಗಳು ಮತ್ತು ದಾಖಲೆಗಳನ್ನು ಕೋರ್ಟ್ ಗಮನಕ್ಕೆ ತರಬೇಕಿದೆ' ಎಂದು ಸಂತ್ರಸ್ತೆ ಅರ್ಜಿಯಲ್ಲಿ ತಿಳಿಸಿದ್ದಾರೆ.

'ಜನ್ಮದಿನಾಂಕ ದೃಢೀಕರಿಸುವ ಕುರಿತು ಉನ್ನಾವ್ ಶಾಲೆಯ ಇಬ್ಬರು ಅಧಿಕಾರಿಗಳ ಹೇಳಿಕೆ ದಾಖಲು ಮಾಡಿಕೊಳ್ಳಬೇಕು. ತನಿಖಾಧಿಕಾರಿಗಳ ಮೇಲೆ ಬಿಜೆಪಿ ಉಚ್ಚಾಟಿತ ಮುಖಂಡ ಸೆಂಗರ್ ಪ್ರಭಾವ ಬಳಸಿದ್ದಾರೆ. ನನ್ನ ವಯಸ್ಸಿಗೆ ಸಂಬಂಧಿಸಿ ವಿಚಾರಣೆ ವೇಳೆ ತಿದ್ದಿದ ಮತ್ತು ಸುಳ್ಳು ದಾಖಲೆ ಬಳಕೆಯಾಗಿವೆ. ಮೇಲ್ಮನವಿ ವಿಚಾರಣೆಯೂ ಇದರ ಮೇಲೆ ಅವಲಂಬಿತ ಆಗಿರಲಿದೆ' ಎಂದು ಸಂತ್ರಸ್ತೆ ಹೇಳಿದ್ದಾರೆ.

ವಿಚಾರಣೆ ಅಂತಿಮ ಹಂತದಲ್ಲಿದ್ದರೂ ಸಂತ್ರಸ್ತೆಯ ಮನವಿ ಪರಿಗಣಿಸಿದ ನ್ಯಾಯಮೂರ್ತಿಗಳಾದ ಪ್ರತಿಭಾ ಎಂ. ಸಿಂಗ್ ಮತ್ತು ಮಧು ಜೈನ್ ಅವರು ಇದ್ದ ಪೀಠವು, ಫೆಬ್ರುವರಿ 25ರಂದು ವಿಚಾರಣೆಗೆ ನಿಗದಿಪಡಿಸಿದೆ. ಜನವರಿ 31ರೊಳಗೆ ದಾಖಲೆ ಸಲ್ಲಿಸಲು ಸಂತ್ರಸ್ತೆ ಪರ ವಕೀಲರಿಗೆ ಸೂಚಿಸಿದೆ.

ವಿಚಾರಣಾ ನ್ಯಾಯಾಲಯ 2019ರಲ್ಲಿ ತನಗೆ ವಿಧಿಸಿರುವ ಶಿಕ್ಷೆ ಪ್ರಶ್ನಿಸಿ ಕುಲದೀಪ್ ಸೆಂಗರ್ ಹೈಕೋರ್ಟ್ ಮೊರೆಹೋಗಿದ್ದರು. ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ಅಮಾನತು ಮಾಡಿತ್ತು. ಹೈಕೋರ್ಟ್ ಆದೇಶಕ್ಕೆ 2025ರ ಡಿಸೆಂಬರ್ 29ರಂದು ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

'ಜನ ನಾಯಗನ್: ಹೈಕೋರ್ಟ್‌ಗೆ ಮರಳಿ'

ನಟ ವಿಜಯ್ ಅಭಿನಯದ 'ಜನ ನಾಯಗನ್' ಸಿನಿಮಾಗೆ ಸೆನ್ಸಾರ್ ಪ್ರಮಾಣಪತ್ರ ನಿರಾಕರಣೆ ಪ್ರಶ್ನಿಸಿದ ಅರ್ಜಿಯನ್ನು ವಜಾಗೊಳಿಸಿರುವ ಸುಪ್ರೀಂ ಕೋರ್ಟ್, ಮದ್ರಾಸ್ ಹೈಕೋರ್ಟ್‌ಗೇ ಮರಳುವಂತೆ ಚಿತ್ರದ ನಿರ್ಮಾಪಕರಿಗೆ ಸೂಚಿಸಿದೆ. ಇದರಿಂದ ಚಿತ್ರದ ಬಿಡುಗಡೆ ಮತ್ತಷ್ಟು ವಿಳಂಬವಾಗಲಿದೆ.

ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಕರಣದ ವಿಚಾರಣೆಯು ತ್ವರಿತಗತಿಯಲ್ಲಿ ನಡೆದಿರುವ ಬಗ್ಗೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು ಅಸಮಾಧಾನ ವ್ಯಕ್ತಪಡಿಸಿದೆ. ನಿರ್ಮಾಪಕರು ತಮ್ಮ ಸಮಸ್ಯೆಗೆ ಪರಿಹಾರ ಪಡೆಯಲು ಜನವರಿ 20ರಂದು ಹೈಕೋರ್ಟ್‌ನ ವಿಭಾಗೀಯ ಪೀಠದ ಎದುರು ಹೋಗುವಂತೆ ಸೂಚಿಸಿದೆ.

ಜಲ್ಲಿಕಟ್ಟು...

ಪಿಟಿಐ ಚಿತ್ರ



ಮದುರೆಯ ಅವನಿಯಪುರಂನಲ್ಲಿ ಪೊಂಗಲ್ ಅಂಗವಾಗಿ ಗುರುವಾರ ನಡೆದ 'ಜಲ್ಲಿಕಟ್ಟು' ಸ್ಪರ್ಧೆಯ ನೋಟ

ನ್ಯಾಯಾಂಗ ಸೇವೆಗಳ ಪರೀಕ್ಷೆ ಪ್ರವೇಶಕ್ಕೆ 3 ವರ್ಷ ವಕೀಲಿಕೆ ಕಡ್ಡಾಯ

ಅಭಿಪ್ರಾಯ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ನ್ಯಾಯಾಂಗ ಸೇವೆಗಳ ಪರೀಕ್ಷೆಗೆ ಪ್ರವೇಶ ಪಡೆಯಲು ಕನಿಷ್ಠ ಮೂರು ವರ್ಷಗಳ ಕಾನೂನು ಅಭ್ಯಾಸ (ವಕೀಲಿಕೆ) ಕಡ್ಡಾಯಗೊಳಿಸಿದ್ದ ಸುಪ್ರೀಂ ಕೋರ್ಟ್, ಇದೀಗ ಹೈಕೋರ್ಟ್‌ಗಳು, ರಾಷ್ಟ್ರೀಯ ಕಾನೂನು ವಿಶ್ವ ವಿದ್ಯಾಲಯಗಳು ಮತ್ತು ಇತರೆ ಕಾನೂನು ಶಾಲೆಗಳ (ಲಾ ಸ್ಕೂಲ್) ಅಭಿಪ್ರಾಯ ಬಯಸಿದೆ.

ನಾಲ್ಕು ವಾರಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತೆ ಮುಖ್ಯ ನ್ಯಾಯಮೂರ್ತಿ ಇದ್ದ ಪೀಠವು ಗುರುವಾರ ಸೂಚಿಸಿದೆ.

ಕಾನೂನು ಪದವಿ ಪಡೆದು ಹೊರಬಂದ ತಕ್ಷಣವೇ ನ್ಯಾಯಾಂಗ ಸೇವೆಗಳ ಪರೀಕ್ಷೆಗೆ ಪ್ರವೇಶ ಪಡೆಯುವುದನ್ನು ಕಳೆದ ವರ್ಷ ಮೇ 20ರಂದು ಮುಖ್ಯನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠವು ನಿರ್ಬಂಧಿಸಿತ್ತು. ಅಲ್ಲದೇ ಕನಿಷ್ಠ ಮೂರು ವರ್ಷಗಳ ವಕೀಲಿಕೆಯ ಮಾನದಂಡವನ್ನು ಕಡ್ಡಾಯಗೊಳಿಸಿತ್ತು.



ಹೊಸ ಮಾನದಂಡದಿಂದ ಅಂಗವಿಕಲ ಪದವೀಧರರಿಗೆ ವಿನಾಯಿತಿ ಕೋರಿ ಭೂಮಿಕಾ ಟ್ರಸ್ಟ್ ಅರ್ಜಿ ಸಲ್ಲಿಸಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯ ಬಾಗ್ಚಿ ಮತ್ತು ವಿಜಯ್ ಬಿಷ್ಣೋಯಿ ಅವರು ಇದ್ದ ಪೀಠವು ಅರ್ಜಿ ವಿಚಾರಣೆ ನಡೆಸಿತು.

ಅಂಗವಿಕಲ ಪದವೀಧರರನ್ನು ಕೆಲ ವಕೀಲರು ವಕೀಲಿಕೆ ಅಭ್ಯಾಸಕ್ಕೆ ಸೇರಿಸಿಕೊಳ್ಳುತ್ತಿಲ್ಲ. ಹೀಗಾಗಿ ವಿನಾಯಿತಿ ಅಗತ್ಯವಿದೆ ಎಂದು ಕೋರಿದ್ದ ಸಂಸ್ಥೆ, ಮಧ್ಯಪ್ರದೇಶದಲ್ಲಿ ಈ ವಿನಾಯಿತಿ ಇರುವುದನ್ನು ಗಮನಕ್ಕೆ ತಂದಿತ್ತು.

'ಈ ರೀತಿಯ ವಿನಾಯಿತಿ ಸೇವೆಗೆ ಸೇರಿದ ಸಂದರ್ಭದಲ್ಲಿ ಕೀಳರಿಮೆ ಭಾವನೆ ಉಂಟುಮಾಡಬಹುದು. ಎಲ್ಲ ರಾಜ್ಯಗಳಲ್ಲೂ ಸಮಾನ ಮಾನದಂಡ ಇರುವುದು ಒಳಿತು' ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಮೂರು ವರ್ಷಗಳ ವಕೀಲಿಕೆ ಕಡ್ಡಾಯ ವಿಚಾರದಲ್ಲಿ ಕೆಲ ಯುವ ವಿದ್ಯಾರ್ಥಿಗಳು ಬೇಸರಗೊಂಡಿದ್ದಾರೆ ಮತ್ತು ಸ್ಥೈರ್ಯ ಕಳೆದುಕೊಂಡಿದ್ದಾರೆ ಎಂಬುದು ಗಮನಕ್ಕೆ ಬಂದಿದೆ. ಹೀಗಾಗಿ ಕಾನೂನು ಶಾಲೆಗಳು ಮತ್ತು ಎಲ್ಲ ಹೈಕೋರ್ಟ್‌ಗಳಿಂದ ನಾಲ್ಕು ವಾರಗಳ ಒಳಗೆ ಅಭಿಪ್ರಾಯ ಬಯಸಿದ್ದೇವೆ. ಯಾವುದೇ ಮಾರ್ಪಾಡು ಮಾಡುವ ಅಗತ್ಯಬಿದ್ದರೆ, ಎಲ್ಲರಿಗೂ ಅನ್ವಯಿಸುತ್ತೇವೆ' ಎಂದು ಪೀಠ ತಿಳಿಸಿತು.

ಮಗನಿಗೆ ದಯಾಮರಣ ಕೋರಿದ್ದ ಅರ್ಜಿ ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ಕಳೆದ 13 ವರ್ಷಗಳಿಂದ ಕೋಮಾದಲ್ಲಿರುವ 31 ವರ್ಷದ ತನ್ನ ಮಗನಿಗೆ ದಯಾಮರಣಕ್ಕೆ ಕೋರಿ ತಂದೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಅಂತ್ಯಗೊಳಿಸಿರುವ ಸುಪ್ರೀಂ ಕೋರ್ಟ್ ಗುರುವಾರ ತನ್ನ ತೀರ್ಪು ಕಾಯ್ದಿರಿಸಿತು.

ವಸತಿ ಕಟ್ಟಡದ ನಾಲ್ಕನೇ ಮಹಡಿಯಿಂದ ಬಿದ್ದು ತಲೆಗೆ ಪೆಟ್ಟಾಗಿ ಹರೀಶ್ ರಾಣಾ ಅವರು ಕೋಮಾಗೆ ಹೋಗಿದ್ದರು. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸುತ್ತಿತ್ತು.

ಇದೇ ಜನವರಿ 13ರಂದು ನ್ಯಾಯಮೂರ್ತಿಗಳು ಖುದ್ದಾಗಿ ಯುವಕನ ಕುಟುಂಬವನ್ನು ಭೇಟಿ ಮಾಡಿತ್ತು. ಈ ವೇಳೆ 'ಅವನು ಅನುಭವಿಸಿದ್ದು ಸಾಕು. ಇನ್ನಷ್ಟು ಅನುಭವಿಸುವುದು ನಮಗೆ ಇಷ್ಟವಿಲ್ಲ' ಎಂದು ಕುಟುಂಬವು ತಿಳಿಸಿದ್ದರು. 'ಕುಟುಂಬದ ಸ್ಥಿರವಾದ ಮತ್ತು ಎಲ್ಲ ರೀತಿಯಿಂದಲೂ ಯೋಚಿಸಿ ತೆಗೆದುಕೊಳ್ಳುವ ನಿರ್ಧಾರವೇ ಬಹಳ ಮುಖ್ಯವಾಗುತ್ತದೆ' ಎಂದು ಪೀಠವು ವಿಚಾರಣೆ ವೇಳೆ ಹೇಳಿತು.

'ವಿದ್ಯಾರ್ಥಿ ಆತ್ಮಹತ್ಯೆ, ಅಸಹಜ ಸಾವು: ಪೊಲೀಸರಿಗೆ ವರದಿ ಮಾಡಿ'

ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಆತ್ಮಹತ್ಯೆ ಅಥವಾ ಅಸಹಜ ಸಾವುಗಳ ಬಗ್ಗೆ ಕೂಡಲೇ ಪೊಲೀಸರಿಗೆ ವರದಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಆವರಣದಲ್ಲಿ ಸಂಭವಿಸುವ ವಿದ್ಯಾರ್ಥಿಗಳ ಆತ್ಮಹತ್ಯೆ ಅಥವಾ ಅಸಹಜ ಸಾವುಗಳ ಬಗ್ಗೆ ವಾರ್ಷಿಕ ವರದಿಯನ್ನು ಯುಜಿಸಿ ಮತ್ತು ವೃತ್ತಿಪರ ಕೋರ್ಸ್‌ಗಳ ಮೇಲ್ವಿಚಾರಣೆ ನಡೆಸುವ ಸಂಸ್ಥೆಗಳಿಗೆ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲ ಮತ್ತು ಆರ್. ಮಹದೇವನ್ ಅವರನ್ನೊಳಗೊಂಡ ಪೀಠವು ಸೂಚಿಸಿದೆ. ಸುರಕ್ಷಿತ, ಸಮಾನ, ಒಳಗೊಳ್ಳುವ ಮತ್ತು ಕಲಿಕೆಗೆ ಪೂರಕವಾದ ಸ್ಥಳಗಳಾಗಿರುವು ದನ್ನು ಖಚಿತಪಡಿಸಿಕೊಳ್ಳುವ ಮೂಲಭೂತ ಕರ್ತವ್ಯದಿಂದ ಉನ್ನತ ಶಿಕ್ಷಣ ಸಂಸ್ಥೆಗಳು ನುಣುಚಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದೆ.

ಬಾನು ಮುಷ್ತಾಕ್ ಮಾತಿನ ಆಕರ್ಷಣೆ

ಜೈಪುರ ಸಾಹಿತ್ಯ ಉತ್ಸವಕ್ಕೆ ಚಾಲನೆ: ವೈವಿಧ್ಯಮಯ ಗೋಷ್ಠಿಗಳಲ್ಲಿ ಮಂಥನ

• ಬಿ.ವಿ.ಶ್ರೀನಾಥ್

ಜೈಪುರ: ಸಾಹಿತ್ಯಾಸಕ್ತರ ಬಹುನಿರೀಕ್ಷಿತ ಜೈಪುರ ಸಾಹಿತ್ಯ ಉತ್ಸವದ ಮೊದಲ ದಿನವು ವೈವಿಧ್ಯಮಯವಾದ ಗೋಷ್ಠಿಗಳಿಗೆ ಸಾಕ್ಷಿಯಾಯಿತು.

ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತ ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರು ದಿಕ್ಸೂಚಿ ಭಾಷಣ ಮಾಡುವುದರೊಂದಿಗೆ ಸಾಹಿತ್ಯ ಉತ್ಸವಕ್ಕೆ ಚಾಲನೆ ಸಿಕ್ಕಿತು. ತಾವು ಲೇಖಕಿಯಾಗಿ ಬೆಳೆದ ಪರಿಯನ್ನೂ ತಮ್ಮ ಸುತ್ತಲಿನ ಸಾಮಾಜಿಕ ಬದುಕಿನ ವಿಷಮತೆಯನ್ನೂ ಅವರು ವಿವರಿಸಿದರು.

ಬಾನು ಅವರ ಭಾಷಣದ ಬಳಿಕ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ, ಉಪಮುಖ್ಯಮಂತ್ರಿ ದಿಯಾ ಕುಮಾರಿ ಸೇರಿದಂತೆ ಹಲವು ಗಣ್ಯರು ದೀಪ ಬೆಳಗಿದರು.

'ಅರಬ್ಬರು ಮತ್ತು ಯಹೂದಿಗಳ ನಡುವಿನ ಸಹಬಾಳ್ವೆ' ಗೋಷ್ಠಿಯಲ್ಲಿ ಚರಿತ್ರೆಯಲ್ಲಿನ ಸಹಜೀವನ ಮತ್ತು ವರ್ತಮಾನದ ಭಿನ್ನಾಭಿಪ್ರಾಯಗಳ ಬಗ್ಗೆ ಸಂವಾದ ನಡೆಯಿತು.

'ಪವಿತ್ರ ನೆಲವನ್ನು ಜನರ ಧರ್ಮಗಳ ಆಧಾರದಲ್ಲಿ ಹಿಂದೆಂದೂ ಇಲ್ಲದ ರೀತಿಯಲ್ಲಿ ವಿಘಟನೆ ಮಾಡಲಾಗುತ್ತಿದೆ' ಎಂದ ಅರಬ್ ಇತಿಹಾಸಕಾರ ಉಸ್ಸಾಮಾ ಮಕ್ದೀಸಿ, 'ಪಶ್ಚಿಮದ ವಸಾಹತುಶಾಹಿಯೇ ಅರಬ್ ರಾಷ್ಟ್ರಗಳ ಬಿಕ್ಕಟ್ಟುಗಳಿಗೆ ಕಾರಣ' ಎಂದರು. ಸಹಬಾಳ್ವೆಯ ಚರಿತ್ರೆಯನ್ನು ಶೋಧಿಸಬೇಕು ಎನ್ನುವುದು ಅವರ ಅಭಿಪ್ರಾಯ.

'ಅರಬರು ಮತ್ತು ಯಹೂದಿಗಳ ಹುಸಿ ಧ್ರುವೀಕರಣದಲ್ಲಿ ನನಗೆ ನಂಬಿಕೆ ಇಲ್ಲ' ಎಂದು ಯಮನ್‌ನ ಪತ್ರಕರ್ತೆ ನೋವಾ ಅವಿಶಗ್ಯನಾಲ್ ಹೇಳಿದರು.

ಸ್ವಾತಂತ್ರ್ಯಪೂರ್ವದ ಸಂಸ್ಕೃತ ಪಂಡಿತರ ಕುರಿತ ಗೋಷ್ಠಿಯಲ್ಲಿ, ಸಂಸ್ಕೃತ ಪಂಡಿತರು ಬುದ್ಧಿಜೀವಿಗಳಾಗಿ ನಿರ್ವಹಿಸಿದ ಪಾತ್ರವನ್ನು ಆಚಾರ್ಯ ರಾಧಾವಲ್ಲಭ್ ತ್ರಿಪಾಠಿ ವಿವರಿಸಿದರು. ಕೃತಕ ಬುದ್ಧಿಮತ್ತೆ ಮತ್ತು ಓದುವಿಕೆ, ಪುಸ್ತಕಗಳ ಭವಿಷ್ಯದ ಬಗ್ಗೆ ನಡೆದ ಗೋಷ್ಠಿಯಲ್ಲಿ ಮಂಡನೆಯಾದ ವಿಚಾರಗಳು ಆಸಕ್ತಿಕರವಾಗಿದ್ದವು.

ಗೋಷ್ಠಿಯಲ್ಲಿ ಭಾಗವಹಿಸಿದ್ದ ಲೇಖಕ ಗುರುಚರಣ್ ದಾಸ್, 'ಎಐ ತಮ್ಮಲ್ಲಿ ಏಕಕಾಲಕ್ಕೆ ಕುತೂಹಲವನ್ನೂ, ಆತಂಕವನ್ನೂ ಉಂಟುಮಾಡುತ್ತದೆ. ಅದಕ್ಕೆ ಯಾವುದೇ ನೈತಿಕ ಬದ್ಧತೆಯಾಗಲಿ, ಉತ್ತರದಾಯಿತ್ವವಾಗಲಿ ಇಲ್ಲ' ಎಂದು ಅಭಿಪ್ರಾಯಪಟ್ಟರು.

'ಎಐ ಬಗ್ಗೆ ಭಯದ ಅಗತ್ಯವಿಲ್ಲ' ಎಂದವರು ಪತ್ರಕರ್ತ ಸಮೀರ್ ಪಾಟೀಲ್. ಆದರೆ, ಅದು ಉಳ್ಳವರು ಮತ್ತು ಇಲ್ಲದವರ ನಡುವಿನ ಅಸಮಾನತೆಯನ್ನು ಹೆಚ್ಚಿಸುವ ಅಪಾಯ ಇದೆ ಎಂದರು. ಪ್ರಕಾಶಕಿ ಮೇರು ಗೋಖಲೆ ಎಐನಿಂದ ಪ್ರಕಾಶಕರೂ ಸೇರಿದಂತೆ ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಹಲವು ಲಾಭಗಳಿವೆ ಎಂದು ಅಭಿಪ್ರಾಯಪಟ್ಟರು.



ಜೈಪುರ ಸಾಹಿತ್ಯ ಉತ್ಸವದಲ್ಲಿ ಕನ್ನಡದ ಲೇಖಕಿ ಬಾನು ಮುಷ್ತಾಕ್ ಮಾತು

'ಸಾಹಿತ್ಯ ಸೃಷ್ಟಿ ಪ್ರತಿರೋಧದ ಕ್ರಿಯೆ'

ಉತ್ಸವದ ಮೊದಲ ದಿನ ಆಕರ್ಷಿಸಿದ್ದು ಬಾನು ಮುಷ್ತಾಕ್ ಅವರ ಮಾತು.

'ಅಸಮಾನತೆ, ಹಿಂಸೆ, ಮೌನ ಇರುವ ಸಮಾಜಗಳಲ್ಲಿ ಸಾಹಿತ್ಯ ಸೃಷ್ಟಿಯ ಕೆಲಸವು ಅಸ್ತಿತ್ವದ ಮತ್ತು ಪ್ರತಿರೋಧದ ಕ್ರಿಯೆಯಾಗಿರುತ್ತದೆ. ಸುತ್ತಲಿನ ಮಹಿಳೆಯರ ಮೂಕವೇದನೆ ಕಂಡು ಮೌನವಾಗಿ ಉಳಿಯಲು ನನಗೆ ಸಾಧ್ಯವಾಗಲಿಲ್ಲ. ಬರವಣಿಗೆ ಆರಂಭವಾಗುವುದು ಕಾಗದದ ಮೇಲಲ್ಲ; ಅನುಭವ, ನೆನಪು, ನೋವು ಭರವಸೆಗಳು ದೇಹದ ಮೂಲಕ ಹರಿದು ಅಕ್ಷರಗಳಾಗುತ್ತವೆ. ಶೋಷಣೆ ಸಹಜ ಎನ್ನುವಂತಾದಾಗ ಬರವಣಿಗೆಗೆ ರಾಜಕೀಯ ಆಯಾಮ ದಕ್ಕುತ್ತದೆ. ಜಾತಿ, ಧರ್ಮ, ಲಿಂಗ, ನಂಬಿಕೆ ಆಧಾರಿತವಾದ ಅಸಮಾನತೆಗಳು ಸಂಕೀರ್ಣವಾಗಿ ಹೆಣೆದುಕೊಂಡಿರುವ ಸಮಾಜದಲ್ಲಿ ತಟಸ್ಥವಾಗಿ ಉಳಿಯುವುದು ಸಾಧ್ಯವಾಗುವುದಿಲ್ಲ. ಇಂಥ ಸಮಾಜವು ಲೇಖಕರನ್ನು ಕಟಕಟೆಯಲ್ಲಿ ನಿಲ್ಲಿಸುತ್ತದೆ' ಎಂದರು.

'ಚಳವಳಿಗಳ ಸಾಹಚರ್ಯವೇ ತಮ್ಮನ್ನು ಲೇಖಕಿಯಾಗಿ ರೂಪಿಸಿತು' ಎಂದು ವಿವರಿಸಿದರು.

ಮಾರ್ದನಿಸಿದ ನಗಾರಿ ಸದ್ದು

ಉತ್ಸವದ ಮೊದಲ ದಿನ ನೆರೆದಿದ್ದವರನ್ನು ಬೆರಗುಗೊಳಿಸಿದ್ದು ಜನಪದ ಕಲಾವಿದರಾದ ನಾತೂಲಾಲ್ ಸೋಲಂಕಿ ಅವರ ತಂಡ. ಕ್ಲಾರ್ಕ್ಸ್ ಆಮೇರ್ ಹೋಟೆಲ್‌ನ ಮೂಲೆಮೂಲೆಯಲ್ಲೂ ಅವರ ನಗಾರಿ ಸದ್ದು ಮಾರ್ದನಿಸಿತು. ಖಂಡಾಂತರಗಳಿಂದ ಬಂದ ವಿವಿಧ ವಿಷಯಗಳ ಪರಿಣತರಿಗಿಂತಲೂ ಒಂದು ಕೈ ಮಿಗಿಲು ಎನ್ನುವಂತೆ ಅವರ ಕಲಾವಂತಿಕೆಯು ಸಹೃದಯರ ಮನಸೂರೆಗೊಂಡಿತು.

'ಕಾಡು'ಗೋಡಿಯಲ್ಲಿ ಎಂಬೆಸಿ ಐ.ಟಿ ಪಾರ್ಕ್

ಒಂದನೇ ಪುಟದಿಂದ...

ನಂತರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೇಲ್ಮನವಿ ಸಲ್ಲಿಸುವಂತೆ ಸರ್ಕಾರವನ್ನು ಕೋರಿದ್ದರು.

ಏನಿದು ವಿವಾದ?: ಎರಡನೇ ಮಹಾಯುದ್ಧದ ಸಮಯದಲ್ಲಿ ಸೇನೆ 141 ಎಕರೆ ಭೂಮಿಯನ್ನು ಬಳಸಿಕೊಂಡಿತ್ತು. ಉಳಿದ 572 ಎಕರೆ ಭೂಮಿಯನ್ನು ಕೃಷಿ ಚಟುವಟಿಕೆಗಳಿಗಾಗಿ ಸಹಕಾರ ಸಂಘಕ್ಕೆ ಲೀಸ್‌ಗೆ ನೀಡಲಾಗಿತ್ತು. 1985ರಲ್ಲಿ ಕೆಐಎಡಿಬಿ ಸಹಕಾರ ಸಂಘದಿಂದ ಪ್ರತಿ ಎಕರೆಗೆ ₹30,000 ಪರಿಹಾರ ನೀಡಿ, 300 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತ್ತು. ಆದರೆ, ಆ ಸಹಕಾರ ಸಂಘಕ್ಕೆ ಭೂಮಿಯನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ. ಜೊತೆಗೆ, ಈ ಸ್ವಾಧೀನವು ಅರಣ್ಯ ಸಂರಕ್ಷಣಾ ಕಾಯ್ದೆ–1980ರ ಉಲ್ಲಂಘನೆಯಾಗಿತ್ತು. ಕಾಡುಗೋಡಿ ಭೂಮಿಯನ್ನು ಮರುಸ್ವಾಧೀನಪಡಿಸಿಕೊಳ್ಳಲು ಅರಣ್ಯ ಇಲಾಖೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್, ನಂತರ ಸುಪ್ರೀಂ ಕೋರ್ಟ್ ವಜಾಗೊಳಿಸಿದ್ದವು.

ಈ ಪ್ರದೇಶದ ಸ್ಥಿತಿಗತಿಯ ಬಗ್ಗೆ ಪ್ರಶ್ನೆ ಎತ್ತಿದ್ದ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ, 'ಸದರಿ ಪ್ರದೇಶ ಅರಣ್ಯದಂತೆ ಭಾಸವಾಗುತ್ತಿದ್ದು, ಭೂಮಿಯ ದಾಖಲೆಗಳು ಹಾಗೂ ಹೆಸರಿನ ಬದಲಾವಣೆ ಪ್ರಕ್ರಿಯೆಯ ಮಾಹಿತಿ ಸಲ್ಲಿಸಬೇಕು' ಎಂದು ಸೂಚಿಸಿತ್ತು.

₹7,726 ಕೋಟಿ ವೆಚ್ಚದ ಐಟಿ ಪಾರ್ಕ್

ಕೆಐಎಡಿಬಿ ವಿವಿಧ ಕಂಪನಿಗಳಿಗೆ 449.28 ಎಕರೆ ಜಮೀನನ್ನು ಹಂಚಿಕೆ ಮಾಡಿತ್ತು. 78.5 ಎಕರೆ ಕಾಂಕೋರ್ಡ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ಗೆ ಹಂಚಿಕೆಯಾಗಿತ್ತು. 2020ರಲ್ಲಿ ಅದು ಎಂಬೆಸಿ ಗ್ರೂಪ್‌ನ ಅಂಗ ಸಂಸ್ಥೆಯಾಗಿ ಪರಿವರ್ತನೆಯಾಯಿತು.

ರಾಜ್ಯಮಟ್ಟದ ತಜ್ಞರ ಮೌಲ್ಯಮಾಪನ ಸಮಿತಿ 2025ರ ಜೂನ್‌ನಲ್ಲಿ ಎಂಬೆಸಿ ಈಸ್ಟ್ ಬಿಸಿನೆಸ್ ಪಾರ್ಕ್ ಕಂಪನಿಗೆ ಮಿಶ್ರ ಬಳಕೆಯ ಟೌನ್‌ಶಿಪ್ ಯೋಜನೆ ಅಭಿವೃದ್ಧಿಪಡಿಸಲು ಷರತ್ತುಬದ್ಧ ಅನುಮತಿ ನೀಡಿತ್ತು. 2022ರಲ್ಲಿ ಪರಿಸರ ಅನುಮತಿ ಪಡೆದುಕೊಂಡಿದ್ದು, ಯೋಜನಾ ಪ್ರದೇಶದಲ್ಲಿ 253 ಮರಗಳನ್ನು ಕಡಿದು, 129 ಮರಗಳನ್ನು ಸ್ಥಳಾಂತರಿಸುವ ಪ್ರಸ್ತಾವನೆಯನ್ನು ಕಂಪನಿ ಸಲ್ಲಿಸಿತ್ತು. ಈ ಐಟಿ ಪಾರ್ಕ್ ಹಾಗೂ ಇತರೆ ಮಿಶ್ರ ಬಳಕೆ ಯೋಜನೆಯ ಒಟ್ಟು ವೆಚ್ಚವನ್ನು ₹7,726 ಕೋಟಿ ಎಂದು ಅಂದಾಜಿಸಲಾಗಿದೆ.

ಶಬರಿಮಲೆ ಮುಖ್ಯ ಅರ್ಚಕ ಬಂಧನ



ತಿರುವನಂತಪುರ (ಪಿಟಿಐ): ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದ ಚಿನ್ನ ಕಳವಿಗೆ ಸಂಬಂಧಿಸಿದ ಎರಡನೆಯ ಪ್ರಕರಣದಲ್ಲಿ, ಮುಖ್ಯ ಅರ್ಚಕ ಕಂಡರಾರು ರಾಜೀವರು ಅವರನ್ನು ಎಸ್‌ಐಟಿ ಗುರುವಾರ ಬಂಧಿಸಿದೆ.

ದೇವಸ್ಥಾನದ 'ಶ್ರೀಕೋವಿಲ್'ನ ಬಾಗಿಲ ಚೌಕಟ್ಟಿನ ಚಿನ್ನದ ತೂಕ ಕಡಿಮೆಯಾಗಿರುವ ಪ್ರಕರಣದಲ್ಲಿ ಕಂಡರಾರು ರಾಜೀವರು ಈಗಾಗಲೇ ಬಂಧನದಲ್ಲಿದ್ದು, ಸದ್ಯ ಅವರು ತಿರುವನಂತಪುರದ ವಿಶೇಷ ಉಪ ಕಾರಾಗೃಹದಲ್ಲಿದ್ದಾರೆ.

ಕೊಲ್ಲಂ ವಿಜಿಲೆನ್ಸ್ ಕೋರ್ಟ್‌ನಿಂದ ಅನುಮತಿ ಪಡೆದುಕೊಂಡ ಎಸ್‌ಐಟಿ ತಂಡವು ಗುರುವಾರ ಜೈಲಿಗೆ ತೆರಳಿ, ಎರಡನೆಯ ಪ್ರಕರಣವಾದ ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ತಾಮ್ರದ ಕವಚಕ್ಕೆ ಲೇಪಿಸಿದ್ದ ಚಿನ್ನ ಕಳವು ಪ್ರಕರಣದಲ್ಲಿ ಕಂಡರಾರು ಅವರ ಬಂಧನವನ್ನು ದಾಖಲಿಸಿತು. ತನಿಖಾ ತಂಡವು ರಾಜೀವರು ಅವರನ್ನು ಕಸ್ಟಡಿಗೆ ಪಡೆಯಲು ಶೀಘ್ರದಲ್ಲೇ ಕೋರ್ಟ್‌ಗೆ ಅರ್ಜಿ ಸಲ್ಲಿಸಲಿದೆ.

100ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ

ಚೆನ್ನೈ ಪುಸ್ತಕ ಮೇಳ ಇಂದಿನಿಂದ

• ಮಂಜುಶ್ರೀ ಎಂ. ಕಡಕೋಳ

ಚೆನ್ನೈ: ಚೆನ್ನೈ ಅಂತರರಾಷ್ಟ್ರೀಯ ಪುಸ್ತಕ ಮೇಳದ (ಸಿಐಬಿಎಫ್) ನಾಲ್ಕನೇ ಆವೃತ್ತಿಗೆ ನಗರ ಸಜ್ಜಾಗಿದ್ದು, ಜನವರಿ 16ರಿಂದ 18ರವರೆಗೆ ಮೂರು ದಿನಗಳ ಕಾಲ ನಡೆಯಲಿದೆ.

ಚೆನ್ನೈನ ಕಲೈವಾನರ್ ಅರಂಗಂ ಸಭಾಂಗಣದಲ್ಲಿ ನಡೆಯಲಿರುವ ಈ ಬೃಹತ್ ಪುಸ್ತಕ ಮೇಳದಲ್ಲಿ ಈ ಬಾರಿ ನೂರಕ್ಕೂ ಹೆಚ್ಚು ದೇಶಗಳ ಪ್ರಕಾಶಕರು, ಲಿಟರರಿ ಏಜೆಂಟರು ಮತ್ತು ಲೇಖಕರು ಭಾಗವಹಿಸುವ ನಿರೀಕ್ಷೆ ಇದೆ.

ತಮಿಳುನಾಡು ಸರ್ಕಾರವು 2023ರಿಂದ ಆರಂಭಿಸಿರುವ ಈ ಅಂತರರಾಷ್ಟ್ರೀಯ ಪುಸ್ತಕ ಮೇಳವು ಇದೀಗ ಜಾಗತಿಕ ಮಟ್ಟದಲ್ಲಿ ಪ್ರಕಾಶಕರ ಕೇಂದ್ರಬಿಂದುವಾಗಿದೆ. ತಮಿಳು ಸಾಹಿತ್ಯವನ್ನು ಜಾಗತಿಕಮಟ್ಟಕ್ಕೆ ಕೊಂಡೊಯ್ಯುವ ಹಾಗೂ ಜಾಗತಿಕ ಸಾಹಿತ್ಯವನ್ನು ತಮಿಳಿಗೆ ತರುವ ಉದ್ದೇಶವನ್ನು ಹೊಂದಿರುವ ಸಿಐಬಿಎಫ್‌ನ ಈ ವರ್ಷದ ಆವೃತ್ತಿಯು 'ನಾಗರಿಕತೆಗಳ ನಡುವಿನ ಸಂವಹನ' ಶೀರ್ಷಿಕೆಯಡಿ ಆಯೋಜಿತವಾಗಿದೆ.

ಜ. 16ರಂದು ಬೆಳಗ್ಗೆ 10ಕ್ಕೆ ಪುಸ್ತಕ ಮೇಳವನ್ನು ತಮಿಳುನಾಡಿನ ಶಾಲಾ ಶಿಕ್ಷಣ ಖಾತೆ ಸಚಿವ ಡಾ. ಅನ್ಬಿಲ್ ಮಹೇಶ್ ಪೊಯ್ಯಮೊಳಿ ಉದ್ಘಾಟಿಸಲಿದ್ದಾರೆ. ಕವಯಿತ್ರಿಯೂ ಆಗಿರುವ ಸಂಸದೆ ಕೆ. ಕನಿಮೊಳಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಕರ್ನಾಟಕದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ, ಕೇರಳದ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ವಿಶೇಷ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮೂರು ದಿನಗಳ ಕಾಲ ವಿವಿಧ ವಿಷಯಗಳ ಒಟ್ಟು 17 ಸಂವಾದ ಗೋಷ್ಠಿಗಳು ನಡೆಯಲಿದ್ದು, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಲೇಖಕರು ಮತ್ತು ಪ್ರಕಾಶಕರು ಪಾಲ್ಗೊಳ್ಳಲಿದ್ದಾರೆ. ಜ. 17ರ 'ಫೋರ್ ಲ್ಯಾಂಗ್ವೇಜಸ್– ಒನ್ ಥಂಡರ್' ಗೋಷ್ಠಿಯಲ್ಲಿ ಕನ್ನಡದ ಕವಯಿತ್ರಿ ಪ್ರತಿಭಾ ನಂದಕುಮಾರ್, ತೆಲುಗಿನ ಲೇಖಕ ರಾಜೇಂದ್ರ ಪ್ರಸಾದ್, ಮಲಯಾಳ ಲೇಖಕ ಎ.ಜೆ. ಥಾಮಸ್ ಪಾಲ್ಗೊಳ್ಳುವರು. ಕನ್ನಡದ ಲೇಖಕಿ ಡಾ.ಎಚ್.ಎಸ್. ಅನುಪಮಾ ಈ ಗೋಷ್ಠಿಯನ್ನು ನಿರ್ವಹಿಸುವರು. ಜ. 18ರ 'ದ ಇನ್‌ವಿಸಿಬಲ್ ಹ್ಯಾಂಡ್' ಗೋಷ್ಠಿಯಲ್ಲಿ ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತೆ, ಅನುವಾದಕಿ ದೀಪಾ ಭಾಸ್ತಿ ಪಾಲ್ಗೊಳ್ಳಲಿದ್ದಾರೆ. ತಮಿಳಿನಿಂದ ಕನ್ನಡ ಸೇರಿದಂತೆ ವಿವಿಧ ಭಾಷೆಗಳಿಗೆ ಅನುವಾದವಾಗಿರುವ ಕೃತಿಗಳೂ ಈ ಮೇಳದಲ್ಲಿ ಬಿಡುಗಡೆಯಾಗಲಿವೆ ಎಂದು ಸಿಐಬಿಎಫ್‌ನ ಆಯೋಜಕರು ತಿಳಿಸಿದ್ದಾರೆ.

ಸಿಐಬಿಎಫ್‌ಗೆ ಈ ಬಾರಿ ನೂರಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಆಗಮಿಸುತ್ತಿರುವುದು ದಕ್ಷಿಣ ಭಾರತದ ಅದರಲ್ಲೂ ತಮಿಳು ಸಾಹಿತ್ಯದ ಧ್ವನಿಯನ್ನು ಜಾಗತಿಕ ಸಾಹಿತ್ಯಲೋಕ ಆಲಿಸುತ್ತಿದೆ ಎಂಬುದರ ಪ್ರತೀಕವಾಗಿದೆ. ಈ ಪುಸ್ತಕ ಮೇಳವು ದಕ್ಷಿಣ ಏಷ್ಯಾದ ನೆಲೆಯಲ್ಲಿ ಜಗತ್ತನ್ನು ಅರಿಯುವ ಜಾಗತಿಕ ಪ್ರಕಾಶನ ಕೇಂದ್ರವಾಗಿ ಬದಲಾಗಿದೆ

ಡಾ. ಬಿ. ಚಂದ್ರಮೋಹನ್ ಹೆಚ್ಚುವರಿ ಮುಖ್ಯ ಆಯುಕ್ತ, ತಮಿಳುನಾಡು ಶಾಲಾ ಶಿಕ್ಷಣ ಇಲಾಖೆ

ಅನುವಾದ–ಅನುದಾನ ಯೋಜನೆ

ತಮಿಳು ಸಾಹಿತ್ಯವನ್ನು ಜಾಗತಿಕಮಟ್ಟಕ್ಕೆ ಕೊಂಡೊಯ್ಯುವ ಉದ್ದೇಶದಿಂದ ತಮಿಳುನಾಡು ಸರ್ಕಾರವು 'ತಮಿಳುನಾಡು ಅನುವಾದ ಅನುದಾನ ಯೋಜನೆ'ಯನ್ನು ಆರಂಭಿಸಿದ್ದು, ಅನುವಾದಕ್ಕಾಗಿ ಅನುದಾನದ ಜತೆಗೆ ಫೆಲೋಶಿಪ್ ಅನ್ನೂ ನೀಡುತ್ತಾ ಬಂದಿದೆ. ಈ ಯೋಜನೆಗಾಗಿಯೇ ₹3 ಕೋಟಿ ಮೊತ್ತದ ಅನುದಾನವನ್ನು ತಮಿಳುನಾಡು ಸರ್ಕಾರ ಮೀಸಲಿಟ್ಟಿದೆ.

ತಮಿಳಿನ ಸಾಹಿತ್ಯಕ ಕೃತಿಗಳನ್ನು ಭಾರತದ ಇತರ ಭಾಷೆಗಳು ಹಾಗೂ ವಿದೇಶಿ ಭಾಷೆಗಳಿಗೆ ಅನುವಾದಿಸುವ ಯೋಜನೆ ಇದಾಗಿದೆ. ಭಾರತದ ಪ್ರಕಾಶಕರು ಹಾಗೂ ಹೊರ ದೇಶಗಳ ಪ್ರಕಾಶಕರೂ ಅನುದಾನ ಪಡೆಯಲು ಅರ್ಹರು.

ಬಿಷ್ಣೋಯಿ ಸಹಚರರ ಬಂಧನ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಇತ್ತೀಚೆಗೆ ನಡೆದ ಎರಡು ಗುಂಡಿನ ದಾಳಿಗಳಲ್ಲಿ ಭಾಗಿಯಾಗಿದ್ದ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಇಬ್ಬರು ಶೂಟರ್‌ಗಳನ್ನು ಬಂಧಿಸಿರುವುದಾಗಿ ದೆಹಲಿ ಪೊಲೀಸರು ಗುರುವಾರ ತಿಳಿಸಿದ್ದಾರೆ.

ಆರೋಪಿಗಳು ದೆಹಲಿಯ ಎರಡು ಸ್ಥಳಗಳಲ್ಲಿ ಸೋಮವಾರ ಮತ್ತು ಮಂಗಳವಾರ ಮಧ್ಯರಾತ್ರಿ ಗುಂಡು ಹಾರಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿಗಳೆಂದು ಗುರುತಿಸಲಾದ ದೀಪಕ್ ಮತ್ತು ಬಾಲಕನೊಬ್ಬನನ್ನು ಉತ್ತರ ದೆಹಲಿಯಲ್ಲಿ ಬಂಧಿಸಲಾಗಿದೆ. ಈ ವೇಳೆ ಆರೋಪಿಗಳು ಪೊಲೀಸರತ್ತ ಗುಂಡಿನ ದಾಳಿ ನಡೆಸಿದ್ದು, ಹಾಗಾಗಿ ಪೊಲೀಸರ ಕಡೆಯಿಂದ ಸಣ್ಣ ಎನ್‌ಕೌಂಟರ್ ನಡೆದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳಿಂದ ಎರಡು ಪಿಸ್ತೂಲ್‌ಗಳು ಮತ್ತು ಸಜೀವ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಗುಂಡಿನ ಚಕಮಕಿಯ ವೇಳೆ ಕಾನ್‌ಸ್ಟೆಬಲ್ ಒಬ್ಬರು ಗುಂಡು ನಿರೋಧಕ ಜಾಕೆಟ್ ಧರಿಸಿದ್ದರಿಂದ ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ.

ರಾಹುಲ್ ಮಂದಿರ ಭೇಟಿಗೆ ಆಕ್ಷೇಪ

ಒಂದನೇ ಪುಟದಿಂದ...

ಜ್ಯೋತಿರ್ ಮಠದ ಶಂಕರಾಚಾರ್ಯ ಸ್ವಾಮಿ ಅವಿಮುಕ್ತೇಶ್ವರಾನಂದ ಅವರು ಈ ಬಗ್ಗೆ ಮಾತನಾಡಿ, 'ರಾಹುಲ್ ಹಿಂದೂ ವ್ಯಕ್ತಿ ಅಲ್ಲ. ಹಾಗಾಗಿ ಅವರನ್ನು ಮಂದಿರ ಪ್ರವೇಶಿಸಲು ಅನುಮತಿಸಬಾರದು' ಎಂದಿದ್ದಾರೆ. ಜತೆಗೆ 'ಹಿಂದೂಗಳನ್ನು ಟೀಕಿಸಿದ ವ್ಯಕ್ತಿ ಮಂದಿರ ಪ್ರವೇಶಿಸಲು ಅನುಮತಿ ನೀಡದಂತೆ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ನಾನು ಮನವಿ ಮಾಡುತ್ತೇನೆ' ಎಂದೂ ಅವರು ಹೇಳಿದ್ದಾರೆ.

ಅಯೋಧ್ಯೆಯ ಕೆಲವು ಸನ್ಯಾಸಿಗಳು ಕೂಡ ಅವಿಮುಕ್ತೇಶ್ವರಾನಂದರ ಆಗ್ರಹವನ್ನು ಬೆಂಬಲಿಸಿದ್ದಾರೆ.

ಮುಂಬರಲಿರುವ ವಿಧಾನಸಭೆ ಚುನಾವಣೆಗಾಗಿ ಫೋಟೊ ಮತ್ತು ಗಿಮಿಕ್‌ಗಾಗಿ ರಾಹುಲ್ ಮಂದಿರಕ್ಕೆ ಭೇಟಿ ನೀಡಲು ಯೋಜಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಮಯಂಕ್ ಬಳಗದ ಕಮರಿದ ಕನಸು

ಅಮನ್ ಶತಕ • ವಿದರ್ಭ ಫೈನಲ್‌ಗೆ
ಫಲ ನೀಡದ ಕರುಣ್, ಶ್ರೀಜಿತ್ ಅರ್ಧಶತಕ

• ಗಿರೀಶ ದೊಡ್ಡಮನಿ



ಆರ್. ಸಮರ್ಥ್



ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರು: ಸತತ ಎರಡನೇ ವರ್ಷವೂ ವಿಜಯ್ ಹಜಾರೆ ಟ್ರೋಫಿ ಜಯಿಸುವ ಕರ್ನಾಟಕ ತಂಡದ ಕನಸು ಕಮರಿತು. ವಿದರ್ಭ ತಂಡವು 'ಮುಯ್ಯಿ' ತೀರಿಸಿಕೊಂಡು 'ಸಂಕ್ರಾಂತಿ'ಯ ಸಿಹಿಯುಂಡಿತು.

ನಗರದ ಹೊರವಲಯದಲ್ಲಿರುವ ಸಿಂಗಹಳ್ಳಿಯ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 6 ವಿಕೆಟ್‌ಗಳಿಂದ ವಿದರ್ಭ ಜಯಿಸಿತು. ಹೋದ ವರ್ಷದ ಟೂರ್ನಿಯ ಫೈನಲ್‌ನಲ್ಲಿ ಕರ್ನಾಟಕದ ಎದುರು ಸೋತಿದ್ದ ಸೇಡನ್ನೂ ತೀರಿಸಿಕೊಂಡಿತು.

281 ರನ್ ಗುರಿ ಬೆನ್ನಟ್ಟಿದ ವಿದರ್ಭ ತಂಡವು ಅಮನ್ ಮೊಖಡೆ (138; 122ಎ, 4X12, 6X2) ಹಾಗೂ ಆರ್. ಸಮರ್ಥ್ (ಅಜೇಯ 76; 69ಎ, 4X7) ಅವರ ಆಟದ ಬಲದಿಂದ ಜಯಭೇರಿ ಬಾರಿಸಿತು. 46.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 284 ರನ್ ಗಳಿಸಿತು. ಭಾನುವಾರ ಇಲ್ಲಿಯೇ ನಡೆಯಲಿರುವ ಫೈನಲ್‌ಗೆ ರಹದಾರಿ ಪಡೆಯಿತು. ಇಡೀ ದಿನ ಕ್ರೀಡಾಂಗಣದ ಕಾಂಪೌಂಡ್ ಹೊರಗೆ ನಿಂತು ಹುರಿದುಂಬಿಸಿದ ಕರ್ನಾಟಕದ ಅಭಿಮಾನಿಗಳು ನಿರಾಶೆಗೊಂಡರು.

ದೇವದತ್ತ ಹಿಂದಿಕ್ಕಿದ ಮೊಖಡೆ: ಈ ಪಂದ್ಯವು ಟೂರ್ನಿಯಲ್ಲಿ ಅತ್ಯಧಿಕ ರನ್ ಗಳಿಸಿದ್ದ ಇಬ್ಬರು ಬ್ಯಾಟರ್‌ಗಳಾದ ಕರ್ನಾಟಕದ ದೇವದತ್ತ ಪಡಿಕ್ಕಲ್ ಮತ್ತು ಅಮನ್ ಮೊಖಡೆ ಅವರಿಬ್ಬರ ನಡುವಿನ ಪೈಪೋಟಿಯೂ ಆಗಿತ್ತು. ಇದರಲ್ಲಿ ಅಮನ್ ಗೆದ್ದರು. ದೇವದತ್ತ (725 ರನ್) ಅವರನ್ನು ಹಿಂದಿಕ್ಕಿದ ಅಮನ್, ಒಟ್ಟು 781 ರನ್ ಕಲೆಹಾಕಿದರು. ಟೂರ್ನಿಯಲ್ಲಿ ಐದನೇ ಶತಕ ದಾಖಲಿಸಿದರು. ದೇವದತ್ತ ನಾಲ್ಕು ಶತಕ ಹೊಡೆದಿದ್ದಾರೆ. ಅಮನ್ ಅವರಿಗೆ ಕನ್ನಡಿಗ ಆರ್. ಸಮರ್ಥ್ ಕೂಡ ಜೊತೆಯಾದರು. ಎರಡು ವರ್ಷಗಳ ಹಿಂದೆ ಸಮರ್ಥ್ ಅವರು ಕರ್ನಾಟಕವನ್ನು ತೊರೆದು ಉತ್ತರಾಖಂಡ ತಂಡ ಸೇರಿದ್ದರು. ಈ ಋತುವಿನಲ್ಲಿ ವಿದರ್ಭ ಬಳಗದಲ್ಲಿದ್ದಾರೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಕರ್ನಾಟಕ ತಂಡಕ್ಕೆ ಉತ್ತಮ ಆರಂಭ ನೀಡುವಲ್ಲಿ ದೇವದತ್ತ ಯಶಸ್ವಿಯಾಗಲಿಲ್ಲ. ಅವರು ತಮ್ಮ ಖಾತೆಯನ್ನು ತೆರೆಯಲು 15 ಎಸೆತ ತೆಗೆದುಕೊಂಡರು. ಒಂದು ಬೌಂಡರಿ ಮಾತ್ರ ಗಳಿಸಿದರು. ಅವರಿಗಿಂತ ಮುನ್ನ ಮಯಂಕ್ ಕೂಡ 9 ರನ್ ಗಳಿಸಿ ಔಟಾಗಿದ್ದರು. ಈ ಹಂತದಲ್ಲಿ ಅನುಭವಿ ಕರುಣ್ ನಾಯರ್ (76; 90ಎ, 4X8, 6X1) ಅವರು ತಾಳ್ಮೆಯ ಇನಿಂಗ್ಸ್ ಆಡಿದರು. ಭುಜದ ನೋವಿನಿಂದ ವಿಶ್ರಾಂತಿ ಪಡೆದ ಆರ್. ಸ್ಮರಣ್ ಬದಲಿಗೆ ಸ್ಥಾನ ಪಡೆದ ಧ್ರುವ ಪ್ರಭಾಕರ್ (28; 33ಎ, 4X5) ಮೂರನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು.

ಇನಿಂಗ್ಸ್‌ನ ಮಧ್ಯದಲ್ಲಿ ಪರಿಣಾಮಕಾರಿ ದಾಳಿ ನಡೆಸಿದ ಮಧ್ಯಮವೇಗಿ ದರ್ಶನ್ ನಾಲ್ಕಂಡೆ (48ಕ್ಕೆ5) ಧ್ರುವ ಪ್ರಭಾಕರ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಇದರ ನಡುವೆಯೂ ದಿಟ್ಟ ಆಟವಾಡಿದ ಕೆ.ಎಲ್. ಶ್ರೀಜಿತ್ (54; 53ಎ, 4X7) ಅವರು ಕರುಣ್ ಜೊತೆಗೆ 113 ರನ್ ಸೇರಿಸಿದರು. ಹೋದ ಸಲ ವಿದರ್ಭದಲ್ಲಿ ಆಡಿದ್ದ ಕರುಣ್ ಈ ಋತುವಿನಲ್ಲಿ ತವರಿನ ತಂಡಕ್ಕೆ ಮರಳಿದ್ದಾರೆ.

ಆದರೆ ಎಡಗೈ ವೇಗಿ ಅಭಿಲಾಷ್ ಶೆಟ್ಟಿ (48ಕ್ಕೆ3) ಅವರನ್ನು ಬಿಟ್ಟರೆ ಬೇರೆ ಬೌಲರ್‌ಗಳು ಪರಿಣಾಮಕಾರಿಯಾಗಲಿಲ್ಲ. ಇದರ ಲಾಭ ಪಡೆದ ಅಮನ್ ಮಿಂಚಿದರು. ಅವರು ಅವರು ಪಾಯಿಂಟ್ ಪೊಸಿಷನ್‌ನಲ್ಲಿಯೇ ಹೆಚ್ಚು ರನ್‌ಗಳನ್ನು ಗಳಿಸಿದರು. ಒಟ್ಟಾರೆ ಶಾಂತಚಿತ್ತ ಮತ್ತು ಯೋಜನಾಬದ್ಧ ಬ್ಯಾಟಿಂಗ್ ಅವರದ್ದಾಗಿತ್ತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 49.4 ಓವರ್‌ಗಳಲ್ಲಿ 280 (ಕರುಣ್ ನಾಯರ್ 76, ಧ್ರುವ್ ಪ್ರಭಾಕರ್ 28, ಕೃಷ್ಣನ್ ಶ್ರೀಜಿತ್ 54, ಶ್ರೇಯಸ್ ಗೋಪಾಲ್ 36, ಅಭಿನವ್ ಮನೋಹರ್ 26, ವೈಶಾಖ ವಿಜಯ ಕುಮಾರ್ 17, ಯಶ್ ಠಾಕೂರ್ 64ಕ್ಕೆ2, ದರ್ಶನ್ ನಾಲ್ಕಂಡೆ 48ಕ್ಕೆ5) ವಿದರ್ಭ: 46.2 ಓವರ್‌ಗಳಲ್ಲಿ 4ಕ್ಕೆ284 (ಅಮನ್ ಮೊಖಡೆ 138, ಧ್ರುವ ಶೋರೆ 47, ಆರ್. ಸಮರ್ಥ್ ಔಟಾಗದೇ 76, ಅಭಿಲಾಷ್ ಶೆಟ್ಟಿ 48ಕ್ಕೆ3) **ಫಲಿತಾಂಶ:** ವಿದರ್ಭ ತಂಡಕ್ಕೆ 6 ವಿಕೆಟ್ ಜಯ. **ಪಂದ್ಯಶ್ರೇಷ್ಠ:** ಅಮನ್ ಮೊಖಡೆ

ವೈಶಾಖಿಗೆ ಕಂಕಷನ್

ಕರ್ನಾಟಕದ ವೈಶಾಖ ವಿಜಯಕುಮಾರ್ ಅವರು ಬ್ಯಾಟಿಂಗ್ ಮಾಡುವಾಗ ಚೆಂಡು ಹೆಲ್ಮೆಟ್‌ಗೆ ಅಪ್ಪಳಿಸಿತು. ಪ್ರಥಮ ಚಿಕಿತ್ಸೆ ಪಡೆದ ನಂತರ ಆಟ ಮುಂದುವರಿಸಿದರು. 17 ರನ್ ಗಳಿಸಿದರು.

ನಂತರ ಬೌಲಿಂಗ್‌ಗೂ ಇಳಿದರು. ಆದರೆ ನಾಲ್ಕು ಓವರ್‌ಗಳನ್ನು ಮುಗಿಸಿದ ನಂತರ ತಲೆನೋವಿನಿಂದಾಗಿ ಡಗ್‌ಔಟ್‌ಗೆ ಮರಳಿದರು. ಬಳಿಕ ಅವರನ್ನು ಸಿ.ಟಿ. ಸ್ಕ್ಯಾನಿಂಗ್‌ಗೆ ಕರೆದೊಯ್ಯಲಾಯಿತು. ಇದರಿಂದಾಗಿ ಕಂಕಷನ್ ಸಬ್‌ಸ್ಟಿಟ್ಯೂಟ್ ಆಗಿ ಎಲ್ ಮನ್ವಂತಕುಮಾರ್ ಆಡಿದರು.

ಪಂಜಾಬ್ ಪಡೆಗೆ ಸೌರಾಷ್ಟ್ರ ಸವಾಲು

ಬೆಂಗಳೂರು: ಪ್ರಭಸಿಮ್ರನ್ ಸಿಂಗ್ ನಾಯಕತ್ವದ ಪಂಜಾಬ್ ಮತ್ತು ಹರ್ವಿಕ್ ದೇಸಾಯಿ ಮುನ್ನಡೆಸುತ್ತಿರುವ ಸೌರಾಷ್ಟ್ರ ತಂಡಗಳು ಶುಕ್ರವಾರ ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ ಕೇವಲ 1 ರನ್ ಅಂತರದಿಂದ ಮುಂಬೈ ವಿರುದ್ಧ ಗೆದ್ದು, ಕ್ವಾರ್ಟರ್‌ಫೈನಲ್‌ನಲ್ಲಿ ಮಧ್ಯಪ್ರದೇಶದ ಸವಾಲನ್ನು ಮೆಟ್ಟಿ ನಿಂತಿದ್ದ ಪಂಜಾಬ್ ತಂಡವು ಭರ್ತಿ ಆತ್ಮವಿಶ್ವಾಸದಲ್ಲಿದೆ.

ಸೌರಾಷ್ಟ್ರ ತಂಡವು ಎಂಟರ ಘಟ್ಟದಲ್ಲಿ ಉತ್ತರ ಪ್ರದೇಶದ ವಿರುದ್ಧ ಜಯಗಳಿಸಿತ್ತು. ಆ ಪಂದ್ಯದಲ್ಲಿ ನಾಯಕ ದೇಸಾಯಿ ಶತಕ ಬಾರಿಸಿದ್ದರು.

ಪಂದ್ಯ ಆರಂಭ: **ಮಧ್ಯಾಹ್ನ 1.30**, ನೇರಪ್ರಸಾರ: **ಜಿಯೊಹಾಟ್‌ಸ್ಟಾರ್ ಆ್ಯಪ್**
ಸ್ಥಳ: **ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣ**

19 ವರ್ಷದೊಳಗಿನವರ ವಿಶ್ವಕಪ್: ಅಮೆರಿಕಕ್ಕೆ ಸೋಲು

ಹೆನಿಲ್ ಮಿಂಚು; ಭಾರತ ಶುಭಾರಂಭ



ಹೆನಿಲ್ ಪಟೇಲ್ ಎಕ್ಸ್ ಚಿತ್ರ

ಬುಲಾವಯೊ (ಜಿಂಬಾಬ್ವೆ), (ಪಿಟಿಐ): ಮಧ್ಯಮ ವೇಗದ ಬೌಲರ್ ಹೆನಿಲ್ ಪಟೇಲ್ ಅವರ ಅಮೋಘ ದಾಳಿಯ ನೆರವಿನಿಂದ ಭಾರತ ತಂಡ, ಐಸಿಸಿ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಗುರುವಾರ ಅಮೆರಿಕ ತಂಡದ ಮೇಲೆ ಡಿಎಲ್‌ಎಸ್ ಆಧಾರದಲ್ಲಿ ಆರು ವಿಕೆಟ್‌ಗಳ ಜಯಪಡೆಯಿತು.

ಒಂದು ಮೇಡನ್ ಇದ್ದ ಏಳು ಓವರುಗಳಲ್ಲಿ 16 ರನ್‌ಗಳಿಗೆ ಐದು ವಿಕೆಟ್ ಪಡೆದ ಹೆನಿಲ್ ಅಮೆರಿಕದ ಕುಸಿತಕ್ಕೆ ಪ್ರಮುಖ ಕಾರಣರಾದರು. ಅಮೆರಿಕ 35.2 ಓವರುಗಳಲ್ಲಿ ಕೇವಲ 107 ರನ್‌ಗಳಿಗೆ ಉರುಳಿತು. ಎರಡು ಬಾರಿ ಮಳೆಯ ವಿರಾಮ ಕಂಡ 'ಬಿ' ಗುಂಪಿನ ಈ ಪಂದ್ಯದಲ್ಲಿ ಭಾರತದ ಗೆಲುವಿನ ಗುರಿಯನ್ನು 37 ಓವರುಗಳಲ್ಲಿ 96 ರನ್‌ಗಳಿಗೆ ಪರಿಷ್ಕರಿಸಲಾಯಿತು.

ಭಾರತ ತಂಡ 4 ಓವರುಗಳಲ್ಲಿ 1 ವಿಕೆಟ್‌ಗೆ 21 ರನ್ ಗಳಿಸಿದ್ದಾಗ ಮಳೆ ಶುರುವಾಯಿತು. ಪಂದ್ಯ ಪುನರಾರಂಭದ ನಂತರ ಅಭಿಜ್ಞಾನ್ ಕುಂಡು ಅವರ ಅಜೇಯ 42 ರನ್‌ಗಳ (41 ಎಸೆತ) ನೆರವಿನಿಂದ ಭಾರತ 4 ವಿಕೆಟ್‌ಗೆ 99 ರನ್ ಬಾರಿಸಿ ಗೆಲುವು ಪೂರೈಸಿತು. ಆಗ ಇನ್ನೂ 118 ಎಸೆತಗಳು ಉಳಿದಿದ್ದವು.

ಮಳೆಯಾದ ಕಾರಣ ಭಾರತದ ಇನಿಂಗ್ಸ್ ತಡವಾಗಿ ಶುರುವಾಯಿತು. ಮೂರನೇ ಓವರಿನಲ್ಲೇ ತಂಡವು ವೈಭವ್ ಸೂರ್ಯವಂಶಿ (2) ಅವರನ್ನು ಕಳೆದುಕೊಂಡಿತು. ರಿತ್ವಿಕ್ ಅಪ್ಪಿಡಿ (24ಕ್ಕೆ2) ಬೌಲಿಂಗ್‌ನಲ್ಲಿ ಮುನ್ನುಗ್ಗಿ ಹೊಡೆಯಲು ಹೋದಾಗ ಬ್ಯಾಟಿಗೆ ಚುಂಬಿಸಿದ ಚೆಂಡು ಸ್ಟಂಪ್‌ಗಳನ್ನು ಚದುರಿಸಿತು.

ನಾಯಕ ಆಯುಷ್ ಮ್ಹಾತ್ರೆ ಎರಡು ಬೌಂಡರಿಗಳನ್ನು ಬಾರಿಸಿ ವಿಶ್ವಾಸದಿಂದ ಇನಿಂಗ್ಸ್ ಆರಂಭಿಸಿದರು. ಈ ಹಂತದಲ್ಲಿ ಮತ್ತೆ ಮಳೆಯಾಯಿತು. ಭಾರತಕ್ಕೆ ಆ ವೇಳೆ 46 ಓವರುಗಳಲ್ಲಿ 87 ರನ್ ಗಳಿಸಬೇಕಿತ್ತು. ಆಟ ಮತ್ತೆ ಆರಂಭವಾದಾಗ ಗುರಿ ಪರಿಷ್ಕರಿಸಲಾಯಿತು. ಆದರೆ ತಂಡವು ಆಯುಷ್ (19) ಮತ್ತು ವೇದಾಂತ್ ತ್ರಿವೇದಿ (2) ಅವರನ್ನು ಅಲ್ಪ ಅವಧಿಯಲ್ಲಿ ಕಳೆದುಕೊಂಡಿತು. ಉಪನಾಯಕ ವಿಹಾನ್ ಮಲ್ಹೋತ್ರಾ (18) ಮತ್ತು ಅಭಿಜ್ಞಾನ್ ನಾಲ್ಕನೇ ವಿಕೆಟ್‌ಗೆ 45 ರನ್ ಸೇರಿಸಿ ಅಪಾಯ ತಪ್ಪಿಸಿದರು.

ಇದಕ್ಕೆ ಮೊದಲು ಹೆನಿಲ್ ತಮ್ಮ ಮೊದಲ ಓವರಿನಲ್ಲೇ ಅಮರಿಂದರ್ ಗಿಲ್ (1) ಅವರ ವಿಕೆಟ್ ಪಡೆದಿದ್ದರು. ನೀಳಕಾಯದ ವೇಗಿ ದೀಪೇಶ್ ದೇವೇಂದ್ರನ್ ಬೌಲಿಂಗ್‌ನಲ್ಲಿ ಇನ್ನೊಬ್ಬ ಆರಂಭ ಆಟಗಾರ ಸಾಹಿಲ್ ಗಾರ್ಗ್ (16) ಅವರು ಥರ್ಡ್‌ಮ್ಯಾನ್‌ನಲ್ಲಿದ್ದ ಹೆನಿಲ್‌ಗೆ ಕ್ಯಾಚಿತ್ತರು.

ನಾಯಕ ಉತ್ಕರ್ಷ್ ಶ್ರೀವಾಸ್ತವ (0) ಮತ್ತು ವಿಕೆಟ್ ಕೀಪರ್ ಅರ್ಜುನ್ ಮಹೇಶ್ (16) ಅವರ ವಿಕೆಟ್‌ಗಳೂ ಹೆನಿಲ್ ಪಾಲಾದವು. ಲೆಗ್ ಸ್ಪಿನ್ನರ್ ಖಿಲಾನ್ ಪಟೇಲ್ ಕೂಡ ದಾಳಿಗಿಳಿದ ಹಾಗೆಯೇ ಅಮೋಘ್ ಅರೇಪಳ್ಳಿ (3) ವಿಕೆಟ್ ಪಡೆದಾಗ ಅಮೆರಿಕದ ಮೊತ್ತ 16 ಓವರುಗಳಲ್ಲಿ 39ಕ್ಕೆ 5. ನಿತೀಶ್ ಸುದಿನಿ 52 ಎಸೆತಗಳಲ್ಲಿ 36 ರನ್ ಹೊಡೆದು ಪ್ರತಿರೋಧ ತೋರಿದರು.

ಸಂಕ್ಷಿಪ್ತ ಸ್ಕೋರು: ಅಮೆರಿಕ: 35.2 ಓವರುಗಳಲ್ಲಿ 107 (ನಿತೀಶ್ ಸುದಿನಿ 36; ಹೆನಿಲ್ ಪಟೇಲ್ 16ಕ್ಕೆ5); ಭಾರತ: 17.2 ಓವರುಗಳಲ್ಲಿ 4 ವಿಕೆಟ್‌ಗೆ 99 (ಅಭಿಜ್ಞಾನ್ ಕುಂಡು ಔಟಾಗದೇ 42; ರಿತ್ವಿಕ್ ಅಪ್ಪಿಡಿ 24ಕ್ಕೆ2). ಪಂದ್ಯದ ಆಟಗಾರ: ಹೆನಿಲ್ ಪಟೇಲ್.

ಮುಖ್ಯಾಂಶಗಳು

- ಭಾರತ ತಂಡಕ್ಕೆ ನಾಳೆ ಬಾಂಗ್ಲಾದೇಶ ಎದುರಾಳಿ
- ಅಭಿಜ್ಞಾನ್ ಕುಂಡು ಔಟಾಗದೇ 42 ರನ್



ಪ್ರಾಂಜಲಾಗೆ ಕಂಚು

ಬೆಂಗಳೂರು: ಕರ್ನಾಟಕದ ಪ್ರಾಂಜಲಾ ಶೆಟ್ಟಿ ಅವರು ಮಧ್ಯ ಪ್ರದೇಶದ ಮಾಹೇಶ್ವರ್‌ನಲ್ಲಿ ಗುರುವಾರ ಮುಕ್ತಾಯಗೊಂಡ 12ನೇ ಜೂನಿಯರ್ ರಾಷ್ಟ್ರೀಯ ಜೂನಿಯರ್ ಕಯಾಕ್ ಸ್ಲಲೋಂ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.


ಮಹಿಳಾ ಫುಟ್‌ಬಾಲ್ ತಂಡಕ್ಕೆ ಮೆಂಟರ್ ಆಗಿ ಅಮೇಲಿಯಾ

ಕೋಲ್ಕತ್ತ (ಪಿಟಿಐ): ಕೋಸ್ಟರಿಕಾ ಮಹಿಳಾ ತಂಡದ ಮಾಜಿ ಕೋಚ್ ಅಮೇಲಿಯಾ ವಲ್ವೆರ್ಡೆ ಅವರು ಮುಂಬರುವ ಎಎಫ್‌ಸಿ ಮಹಿಳಾ ಏಷ್ಯನ್ ಕಪ್‌ನಲ್ಲಿ ಆಡುವ ಭಾರತ ತಂಡಕ್ಕೆ ಮೆಂಟರ್ ಆಗಿ ಸೇರ್ಪಡೆಯಾಗಲಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಮೂಲಗಳು ತಿಳಿಸಿವೆ.

39 ವರ್ಷದ ಅಮೇಲಿಯಾ ಅವರ ಜೊತೆಗೆ ಒಪ್ಪಂದದ ಪ್ರಕ್ರಿಯೆ ಅಂತಿಮಗೊಳ್ಳುತ್ತಿದೆ. ಅವರು ಮುಂಬರುವ ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ವೇಳೆ ತಂಡ ಸೇರಿಕೊಳ್ಳಲಿದ್ದಾರೆ. ಅಮೇಲಿಯಾ ಅವರು 2015 ಮತ್ತು 2025ರ ಫಿಫಾ ಮಹಿಳಾ ವಿಶ್ವಕಪ್‌ನಲ್ಲಿ ಆಡಿದ್ದ ಕೋಸ್ಟರಿಕಾ ತಂಡಕ್ಕೆ ಮುಖ್ಯ ಕೋಚ್ ಆಗಿದ್ದರು.

ವಲ್ವೆರ್ಡೆ ಅವರು ತಮ್ಮ ಜೊತೆ ಗೋಲ್‌ಕೀಪಿಂಗ್ ಕೋಚ್ ಮತ್ತು ಸ್ಟ್ರೆಂಥ್ ಅಂಡ್ ಕಂಡಿಷನಿಂಗ್ ಕೋಚ್ ಅವರನ್ನೂ ಕರೆತರುವ ನಿರೀಕ್ಷೆಯಿದೆ. ಭಾರತ ತಂಡವು ಇದೇ 18ರಿಂದ 24ರವರೆಗೆ ಯುರೋಪಿನ ಕ್ಲಬ್‌ಗಳ ಜೊತೆ 3 ಅಭ್ಯಾಸ ಪಂದ್ಯಗಳನ್ನು ಆಡಲಿದೆ.

ಆಕ್ಷೇಪಾರ್ಹ ಹೇಳಿಕೆ ನಜ್ಮುಲ್ ವಜಾ



ಢಾಕಾ (ಪಿಟಿಐ): ರಾಷ್ಟ್ರೀಯ ತಂಡದ ಸೀನಿಯರ್ ಆಟಗಾರರ ಬಂಡಾಯಕ್ಕೆ ಮಣಿದ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು (ಬಿಸಿಬಿ) ತನ್ನ ನಿರ್ದೇಶಕ ಎಂ.ನಜ್ಮುಲ್ ಇಸ್ಲಾಂ ಅವರನ್ನು ಹಣಕಾಸು ಸಮಿತಿ ಅಧ್ಯಕ್ಷ ಸ್ಥಾನದಿಂದ ಗುರುವಾರ ವಜಾ ಮಾಡಿದೆ. ನಜ್ಮುಲ್ ಅವರು ಆಟಗಾರರ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದರು.

ನಜ್ಮುಲ್ ಅವರನ್ನು ವಜಾ ಮಾಡಬೇಕೆಂದು ಆಟಗಾರರು ಪಟ್ಟುಹಿಡಿದಿದ್ದು, ಗುರುವಾರ ನೌಖಾಲಿ ಎಕ್ಸ್‌ಪ್ರೆಸ್– ಛಟ್ಟೊಗ್ರಾಂ ರಾಯಲ್ಸ್ ತಂಡಗಳ ನಡುವಣ ಬಾಂಗ್ಲಾದೇಶ ಪ್ರೀಮಿಯರ್ ಲೀಗ್ ಪಂದ್ಯ ಆಡಲು ಆಟಗಾರರು ನಿರಾಕರಿಸಿದ್ದರು. ಗುರುವಾರ ನಿಗದಿಯಾಗಿದ್ದ ಎರಡೂ ಪಂದ್ಯಗಳನ್ನು ಮುಂದೂಡಲಾಗಿದೆ.

ರಾಜ್ಯ ಒಲಿಂಪಿಕ್ಸ್‌ಗೆ ತುಮಕೂರು ಸಜ್ಜು

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯದ ವಿವಿಧ ಕಡೆಯ ಸ್ಪರ್ಧಿಗಳು, ನಗರದಲ್ಲಿ ಶುಕ್ರವಾರ ಆರಂಭವಾಗುವ ಕರ್ನಾಟಕ ಒಲಿಂಪಿಕ್ಸ್‌ನಲ್ಲಿ ಸಾಮರ್ಥ್ಯ ತೋರಲು ಸಜ್ಜಾಗಿದ್ದಾರೆ. ಈ ಕೂಟವು ಇದೇ 22ರವರೆಗೆ ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣ ಹಾಗೂ ಇತರ ಕಡೆಗಳಲ್ಲಿ ನಡೆಯಲಿದೆ.

ಪುರುಷರ ವಿಭಾಗದಲ್ಲಿ 1,900 ಮಂದಿ, ಮಹಿಳಾ ವಿಭಾಗದಲ್ಲಿ 1,700 ಸ್ಪರ್ಧಿಗಳು, 500 ಮಂದಿ ಕ್ರೀಡಾ ತಾಂತ್ರಿಕ ಸಿಬ್ಬಂದಿ ಸೇರಿದಂತೆ ಸುಮಾರು 4 ಸಾವಿರ ಮಂದಿ ಭಾಗವಹಿಸಲಿದ್ದಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ, ಜಿಲ್ಲಾಡಳಿತದ ವತಿಯಿಂದ ಈ ಕೂಟ ಹಮ್ಮಿಕೊಳ್ಳಲಾಗಿದೆ. ಒಟ್ಟು 27 ಕ್ರೀಡೆಗಳ ಪೈಕಿ ಐದು ಕ್ರೀಡೆಗಳು ಬೆಂಗಳೂರಿನಲ್ಲಿ, ಉಳಿದ 22 ಕ್ರೀಡೆಗಳು ತುಮಕೂರಲ್ಲಿ ನಡೆಯಲಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಧ್ಯಾಹ್ನ 3.30ಕ್ಕೆ ಕೂಟಕ್ಕೆ ಚಾಲನೆ ನೀಡಲಿದ್ದಾರೆ.

ಅಥ್ಲೆಟಿಕ್ಸ್: ನಾಲ್ವರ 'ಎತ್ತರ'ದ ಸಾಧನೆ; ಟ್ರ್ಯಾಕ್‌ನಲ್ಲಿ ಮದ್ರಾಸ್ ವಿವಿ ಮೇಲುಗೈ

ರೋಚಕ ಟೈಬ್ರೇಕರ್, ಫೋಟೊ ಫಿನಿಶ್

ಪ್ರಜಾವಾಣಿ ವಾರ್ತೆ



ಪೋಲ್‌ವಾಲ್ಟ್‌ನಲ್ಲಿ ದಾಖಲೆ ಬರೆದ ಕುಲದೀಪ್ ಯಾದವ್ ಸಂಭ್ರಮ

ಮೂಡುಬಿದಿರೆ (ದಕ್ಷಿಣ ಕನ್ನಡ): ನಾಲ್ವರ ದಾಖಲೆಗೆ ಸಾಕ್ಷಿಯಾದ ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ಸ್‌ನ ಪೋಲ್‌ವಾಲ್ಟ್‌ನಲ್ಲಿ ಗ್ವಾಲಿಯರ್‌ನ ಐಟಿಎಂ ವಿವಿಯ ಕುಲದೀಪ್ ಯಾದವ್ ಚಿನ್ನದ ನಗೆ ಬೀರಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಮತ್ತು ಭಾರತೀಯ ವಿವಿಗಳ ಸಂಘ ಇಲ್ಲಿನ ಸ್ವರಾಜ್ಯ ಮೈದಾನದಲ್ಲಿ ಆಯೋಜಿಸಿರುವ ಕೂಟದಲ್ಲಿ ಕುಲದೀಪ್ ಯಾದವ್ 5.10 ಮೀ ಎತ್ತರದ ಸಾಧನೆ ಮಾಡಿದರು. ಮದ್ರಾಸ್ ವಿಶ್ವವಿದ್ಯಾಲಯದ ಗೌತಮ್ ಅವರ ದಾಖಲೆಯನ್ನು ಕುಲದೀಪ್ ಮುರಿದರು.

ಪೆರಿಯಾರ್ ವಿವಿಯ ಕವಿನ್‌ರಾಜ ಮತ್ತು ಗುರುಕಾಶಿ ವಿವಿಯ ರಾಮ್ ರತನ್ ಅವರೂ 5.10 ಮೀ ಸಾಧನೆ ಮಾಡಿದರು. ಹೀಗಾಗಿ ಪದಕಗಳನ್ನು ನಿರ್ಣಯಿಸಲು ಟೈ ಬ್ರೇಕರ್ ಮೊರೆ ಹೋಗಲಾಯಿತು. ಬಾರ್ 5.10 ಮೀ ಎತ್ತರಕ್ಕೇರಿಸುವ ಮೊದಲು ಕುಲದೀಪ್, ಕವಿನ್, ರಾಮ್‌ರತನ್ ಮತ್ತು ಗುರುನಾನಕ್ ದೇವ್ ವಿವಿಯ ದೇವ್‌ಕುಮಾರ್ ಮೀನಾ 5.1 ಮೀ ಸಾಧನೆ ದಾಖಲಿಸಿದ್ದರು. ಕೊನೆಯ ಪ್ರಯತ್ನದ ನಂತರ ಕೂಟ ದಾಖಲೆ ಕುಲದೀಪ್ ಯಾದವ್ ಪಾಲಾದರೆ ಉಳಿದ ಮೂವರು ಗೌತಮ್ ದಾಖಲೆಯನ್ನು ಮೀರಿದ ಗೌರವಕ್ಕೆ ಪಾತ್ರರಾದರು.

ಮಹಿಳಾ ವಿಭಾಗದಲ್ಲೂ ಟೈಬ್ರೇಕರ್: ಮಹಿಳೆಯರ ಪೋಲ್‌ವಾಲ್ಟ್‌ನಲ್ಲಿ ಚಂಡೀಗಢ ವಿವಿಯ ವಂಶಿಕಾ ಗಂಗಸ್, ಮದ್ರಾಸ್ ವಿವಿಯ ಕಾರ್ತಿಕಾ ಮತ್ತು ಕ್ಯಾಲಿಕಟ್ ವಿವಿಯ ನೇಖಾ ಎಲ್ದೊ 3.70 ಮೀ ಎತ್ತರಕ್ಕೆ ಜಿಗಿದಿದ್ದರು. ಟೈ ಬ್ರೇಕರ್‌ನಲ್ಲಿ ವಂಶಿಕಾಗೆ ಚಿನ್ನ, ಕಾರ್ತಿಕಾಗೆ ಬೆಳ್ಳಿ ಮತ್ತು ನೇಖಾಗೆ ಕಂಚಿನ ಪದಕ ಲಭಿಸಿತು.

ಹರ್ಡಲ್ಸ್‌ನಲ್ಲಿ ಮದ್ರಾಸ್ ವಿವಿ ಮಿಂಚು: ಪುರುಷರ 110 ಮೀ ಹರ್ಡಲ್ಸ್‌ನಲ್ಲಿ ಮದ್ರಾಸ್ ವಿವಿಯ ಅರವಿಂದ್‌ಗೆ 2 ಸೆಮಿಸೆಕೆಂಡುಗಳಲ್ಲಿ ಕೂಟ ದಾಖಲೆ ಕೈತಪ್ಪಿತು. ಮಹಿಳೆಯರ 100 ಮೀ ಹರ್ಡಲ್ಸ್‌ನಲ್ಲಿ ಫೋಟೊ ಫಿನಿಶ್ ಮೂಲಕ ಚಿನ್ನದ ಪದಕ ವಿಜೇತೆಯನ್ನು ನಿರ್ಧರಿಸಲಾಯಿತು. ಮದ್ರಾಸ್ ವಿವಿಯ ಶ್ರೀರೇಷ್ಮಾ ಮತ್ತು ತಮಿಳುನಾಡಿನ ಅಣ್ಣಾ ವಿವಿಯ ಅಕ್ಷಿತಾ 13.75 ಸೆಕೆಂಡುಗಳಲ್ಲಿ ಗುರಿಮುಟ್ಟಿದ್ದರು. ಫೋಟೊ ಫಿನಿಶ್‌ನಲ್ಲಿ ಅಕ್ಷಿತಾಗೆ (13.741 ಸೆ) ಚಿನ್ನ ಒಲಿಯಿತು. ಶ್ರೀರೇಷ್ಮಾ (13.744) ಬೆಳ್ಳಿಗೆ ಸಮಾಧಾನಪಟ್ಟುಕೊಂಡರು. ಕಂಚಿನ ಪದಕವೂ ಮದ್ರಾಸ್ ವಿವಿ ಪಾಲಾಯಿತು.

4ನೇ ದಿನದ ಫಲಿತಾಂಶಗಳು: ಪುರುಷರು: 110 ಮೀ ಹರ್ಡಲ್ಸ್: ಅರವಿಂದ ಎ (ಮದ್ರಾಸ್)–1.ಕಾಲ:14.10ಸೆ, ಸಾಹುಲ್ (ಕ್ಯಾಲಿಕಟ್)–2, ಪಾರಿ ಕೆ (ಮದ್ರಾಸ್)–3; 1500 ಮೀ ಓಟ: ವಿಕಾಸ್ (ಚಂಡೀಗಢ)–1.ಕಾಲ: 3ನಿ 44.83ಸೆ, ಆಕಾಶ್ ಭಾಟಿ (ಎಂ.ಡಿ ರೋಹ್ಟಕ್)–2, ಯೋಗೇಶ್ ಕುಮಾರ್ (ಮದ್ರಾಸ್)–3; ಪೋಲ್‌ವಾಲ್ಟ್: ಕುಲದೀಪ್ ಯಾದವ್ (ಐಟಿಎಂ ಗ್ವಾಲಿಯರ್)–1. ಎತ್ತರ: 5.10 ಮೀ; ಕೂಟ ದಾಖಲೆ (ಹಿಂದಿನ ದಾಖಲೆ: ಮದ್ರಾಸ್ ವಿವಿಯ ಗೌತಮ್: 5 ಮೀ, 2024), ಕವಿನ್ ರಾಜ (ಪೆರಿಯಾರ್)–2, ರಾಮ್ ರತನ್ (ಗುರು ಕಾಶಿ)–3; ಜಾವೆಲಿನ್ ಥ್ರೋ: ಆದಿತ್ಯ (ಎಸ್‌ಆರ್‌ಎಂ)–1. ದೂರ: 74.43 ಮೀ, ಮೋಹಿತ್ (ಎಂ.ಡಿ ರೋಹ್ಟಕ್)–2, ಮೊಹಮ್ಮದ್ ಜುನೈದ್ (ಮದ್ರಾಸ್)–3. ಮಹಿಳೆಯರು: 100ಮೀ ಹರ್ಡಲ್ಸ್: ಅಕ್ಷಿತಾ (ಅಣ್ಣಾ)–1. ಕಾಲ:13.75ಸೆ, ಶ್ರೀರೇಷ್ಮಾ (ಮದ್ರಾಸ್)–2, ಯಾಮಿನಿ (ಮದ್ರಾಸ್)–3; 1500 ಮೀ ಓಟ: ಅನಿಷಾ ಪಟೇಲ್ (ಡಾ.ರಾಮಮನೋಹರ ಲೋಹಿಯಾ)–1. ಕಾಲ: 4ನಿ 22.80ಸೆ, ಮಿಲಾಲಿ ದೀಪಕ್ (ನಾಗಪುರ)–2, ಅಂಜು (ವಿಜಯವಾಡ)–3; ಲಾಂಗ್‌ಜಂಪ್: ಮುಬಾಸಿನ ಮೊಹಮ್ಮದ್ (ಎಸ್‌ಆರ್‌ಎಂ)–1. ಅಂತರ: 6.15ಮೀ, ಶ್ರೇದೇವಿಕಾ (ಮಂಗಳೂರು)–2, ಪಮಿಳಾ ವರ್ಷಿಣಿ (ಮದ್ರಾಸ್)–3; ಪೋಲ್‌ವಾಲ್ಟ್: ವಂಶಿಕಾ ಗಂಗಸ್ (ಚಂಡೀಗಢ)–1. ಎತ್ತರ: 3.70ಮೀ, ಕಾರ್ತಿಕಾ (ಮದ್ರಾಸ್)–2, ನೇಖಾ ಎಲ್ದೊ (ಕ್ಯಾಲಿಕಟ್)–3; ಹೆಪ್ಟಾಥ್ಲಾನ್: ಅನಾಮಿಕ (ಎಸ್‌ಆರ್‌ಎಂ)–1. ಅಂಕ: 5158, ಕೀರ್ತಿ ಈಶ್ವರ್‌ಲಾಲ್ (ಲವ್ಲಿ ಪ್ರೊಫೆಷನಲ್)–2, ಇಶಾ ನೇಗಿ (ಕಳಿಂಗ)–3.

ಅಗ್ರಸ್ಥಾನದಲ್ಲಿ ಮದ್ರಾಸ್ ವಿವಿ

ಕೊನೆಯ ದಿನವಾದ ಶುಕ್ರವಾರ 13 ಫೈನಲ್‌ಗಳು ಉಳಿದಿರುವಂತೆ ಚಾಂಪಿಯನ್‌ಷಿಪ್‌ನಲ್ಲಿ ಮದ್ರಾಸ್ ವಿವಿ 102 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಮಂಗಳೂರು ವಿವಿ (79) ಎರಡನೇ ಸ್ಥಾನದಲ್ಲಿದ್ದು ಚಂಡೀಗಢ (66), ಕ್ಯಾಲಿಕಟ್ (41) ಮತ್ತು ರೋಹ್ಟಕ್‌ನ ಎಂಡಿ ವಿವಿ (34) ಕ್ರಮವಾಗಿ 3, 4 ಮತ್ತು 5ನೇ ಸ್ಥಾನದಲ್ಲಿವೆ

ಕ್ವಾರ್ಟರ್ ಫೈನಲ್‌ಗೆ ಲಕ್ಷ್ಯ ಸೇನ್



ಭಾರತದ ಲಕ್ಷ್ಯ ಸೇನ್ ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಮಾಜಿ ಚಾಂಪಿಯನ್ ಲಕ್ಷ್ಯ ಸೇನ್ ಅವರು ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಜಪಾನ್‌ನ ಕೆಂಟಾ ನಿಶಿಮೊಟಾ ಅವರಿಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು ಟೂರ್ನಿಯಲ್ಲಿ ಉಳಿದಿರುವ ತವರಿನ ಏಕೈಕ ಭರವಸೆಯಾಗಿದ್ದಾರೆ.

ಭಾರತದ ಸಿಂಗಲ್ಸ್ ಆಟಗಾರರಾದ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್ ಅವರು ಎರಡನೇ ಸುತ್ತಿನಲ್ಲೇ ಅಭಿಯಾನ ಮುಗಿಸಿದರು. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ, ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ ಅವರೂ ನಿರಾಸೆ ಅನುಭವಿಸಿದರು.

ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೇನ್ 21-19, 21-11 ನೇರ ಗೇಮ್‌ಗಳಿಂದ ನಿಶಿಮೊಟೊ ಅವರನ್ನು ಸೋಲಿಸಿದರು.

ಫ್ರಾನ್ಸ್‌ನ ಕ್ರಿಸ್ಟೊ ಪೋಪೊವ್ 21-14, 17-21, 21-17ರಿಂದ ಶ್ರೀಕಾಂತ್ ಅವರನ್ನು ಹಿಮ್ಮೆಟ್ಟಿಸಿದರು. ಸಿಂಗಪುರ ಲೋಹ್ ಕೀನ್ ಯೆವ್ 21-18, 19-21, 14-21ರಿಂದ ಪ್ರಣಯ್ ಅವರನ್ನು ಮಣಿಸಿದರು.

ಮಾಳವಿಕಾ ಬನ್ಸೋಡ್ ಸೋಲುವುದರೊಂದಿಗೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಅಭಿಯಾನಕ್ಕೆ ತೆರೆಬಿತ್ತು. ಎರಡನೇ ಸುತ್ತಿನ ಪಂದ್ಯದಲ್ಲಿ ಮಾಳವಿಕಾ 18-21, 15-21ರಿಂದ ಐದನೇ ಶ್ರೇಯಾಂಕಿತೆ ಹ್ಯಾನ್ ಯುವೆ (ಚೀನಾ) ಎದುರು ಮಂಡಿಯೂರಿದರು.

ಸಾತ್ವಿಕ್ ಮತ್ತು ಚಿರಾಗ್, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 27-25, 21-23, 19-21ರಲ್ಲಿ ಮೂರು ಗೇಮ್‌ಗಳ ರೋಚಕ ಹಣಾಹಣಿಯಲ್ಲಿ ಜಪಾನ್‌ನ ಹಿರೋಕಿ ಮಿಡೋರಿಕಾವಾ ಮತ್ತು ಕ್ಯೋಹೆ ಯಮಶಿತಾ ವಿರುದ್ಧ ಸೋತರು. ಟ್ರೀಸಾ ಮತ್ತು ಗಾಯತ್ರಿ ಜೋಡಿ 22-20, 22-24, 21-23ರಿಂದ ಚೀನಾದ ಲಿ ಯಿಜಿಂಗ್ ಮತ್ತು ಲುವೊ ಕ್ಸುಮಿನ್ ವಿರುದ್ಧ ಮುಗ್ಗರಿಸಿದರು.

ಐಎಸ್‌ಎಲ್‌ಗೆ ಎಎಫ್‌ಸಿ ಮಾನ್ಯತೆ

ನವದೆಹಲಿ (ಪಿಟಿಐ): ಮೊಟಕುಗೊಂಡಿರುವ ಇಂಡಿಯನ್ ಸೂಪರ್ ಲೀಗ್‌ಗೆ ಏಷ್ಯನ್ ಫುಟ್‌ಬಾಲ್ ಒಕ್ಕೂಟವು ಮಾನ್ಯತೆ ನೀಡಿದೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಗುರುವಾರ ತಿಳಿಸಿದೆ.

ಈ ಲೀಗ್‌ನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು, ಏಷ್ಯನ್ ಚಾಂಪಿಯನ್ಸ್ ಲೀಗ್‌ಗೆ ನೇರ ಪ್ರವೇಶದ ಬದಲು ವಲಯ ಕ್ವಾಲಿಫೈರ್‌ಗಳ ಮೂಲಕ (ಅಪರೋಕ್ಷ) ಪ್ರವೇಶ ಪಡೆಯಲಿವೆ.

ಫೆಡರೇಷನ್‌ಗೆ ವಾಣಿಜ್ಯ ಪಾಲುದಾರ ಸಿಗದೇ ಈ ಬಾರಿಯ ಐಎಸ್‌ಎಲ್ ವಿಳಂಬ ವಾಗಿದೆ. ಹೀಗಾಗಿ ಕ್ಲಬ್‌ಗಳು ಈ ಋತುವಿನಲ್ಲಿ ಕಡ್ಡಾಯ 24 ಪಂದ್ಯಗಳನ್ನು ಆಡಲು ಸಾಧ್ಯ ವಾಗುತ್ತಿಲ್ಲ. ಎಎಫ್‌ಸಿ ಚಾಂಪಿಯನ್ಸ್ ಲೀಗ್ 2 ಹಂತದಲ್ಲಿ ಆಡುವ ಅರ್ಹತೆ ಪಡೆಯ ಬೇಕಾದರೆ ತಂಡಗಳು ಒಂದು ಋತುವಿನಲ್ಲಿ 24 ಪಂದ್ಯಗಳನ್ನು ಆಡುವುದು ಕಡ್ಡಾಯ.

ಮಹಿಳಾ ಪ್ರೀಮಿಯರ್ ಲೀಗ್: ಮುಂಬೈಗೆ ನಿರಾಸೆ

ವಾರಿಯರ್ಸ್‌ಗೆ ಮೊದಲ ಗೆಲುವು



ಅಜೇಯ ಅರ್ಧಶತಕ ದಾಖಲಿಸಿದ ಹರ್ಲೀನ್ ಡಿಯೋಲ್ ಪಿಟಿಐ ಚಿತ್ರ

ನವಿ ಮುಂಬೈ (ಪಿಟಿಐ): ಹರ್ಲೀನ್ ಡಿಯೋಲ್ (ಔಟಾಗದೇ 64;39ಎ, 4x12) ಅವರ ಅರ್ಧಶತಕದ ಬಲದಿಂದ ಯು.ಪಿ ವಾರಿಯರ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಹಾಲಿ ಆವೃತ್ತಿಯಲ್ಲಿ ಮೊದಲ ಗೆಲುವು ದಾಖಲಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ವಾರಿಯರ್ಸ್ ತಂಡವು ಏಳು ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು. ಸತತ ಮೂರು ಪಂದ್ಯಗಳನ್ನು ಸೋತಿದ್ದ ಮೆಗ್ ಲ್ಯಾನಿಂಗ್ ಪಡೆ ಕೊನೆಗೂ ಗೆಲುವಿನ ಹಳಿಗೆ ಮರಳಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಮುಂಬೈ ತಂಡವು ಅನುಭವಿ ಬ್ಯಾಟರ್ ನ್ಯಾಟ್ ಶಿವರ್ ಬ್ರಂಟ್ (65, 43 ಎಸೆತ) ಅವರ ಬಿರುಸಿನ ಅರ್ಧಶತಕದ ನೆರವಿನಿಂದ 5 ವಿಕೆಟ್‌ಗೆ 161 ರನ್‌ಗಳ ಸವಾಲಿನ ಮೊತ್ತ ಗಳಿಸಿತ್ತು. ಗುರಿಯನ್ನು ಬೆನ್ನಟ್ಟಿದ ವಾರಿಯರ್ಸ್ 11 ಎಸೆತಗಳು ಬಾಕಿ ಇರುವಂತೆ 3 ವಿಕೆಟ್‌ಗೆ 162 ರನ್ ಗಳಿಸಿ ಸಂಭ್ರಮಿಸಿತು.

ಲ್ಯಾನಿಂಗ್ (25; 26ಎ) ಮತ್ತು ಕಿರಣ್ ನವಗಿರೆ (10) ಮೊದಲ ವಿಕೆಟ್‌ಗೆ 42 ರನ್ ಸೇರಿಸಿದರು. ನಂತರದ ಮೂರು ರನ್‌ಗಳ ಅಂತರದಲ್ಲಿ ಅವರಿಬ್ಬರ ವಿಕೆಟ್‌ಗಳು ಶಿವರ್ ಬ್ರಂಟ್ ಪಾಲಾದವು. ಫೋಬಿ ಲಿಚ್‌ಫೀಲ್ಡ್ (25;22ಎ) ಮತ್ತು ಹರ್ಲೀನ್ ಅವರು ಮೂರನೇ ವಿಕೆಟ್‌ಗೆ 73 (49ಎ) ರನ್ ಸೇರಿಸುವ ಮೂಲಕ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಲಿಚ್‌ಫೀಲ್ಡ್ ನಿರ್ಗಮನದ ಬಳಿಕ ಹರ್ಲೀನ್ ಅವರನ್ನು ಸೇರಿಕೊಂಡ ಕ್ಲೊಯೆ ಟ್ರಯಾನ್ (ಔಟಾಗದೇ 27;11ಎ) ಅವರು ಗೆಲುವಿನ ಔಪಚಾರ ಪೂರೈಸಿದರು.

ಇದಕ್ಕೂ ಮುನ್ನ ಮುಂಬೈ ಆರಂಭ ಆಟಗಾರ್ತಿಯರಾದ ಅಮನ್ಜೋತ್ ಕೌರ್ (36, 33 ಎಸೆತ) ಮತ್ತು ಜಿ. ಕಮಲಿನಿ (5, 12ಎ) ಅವರು ಉತ್ತಮ ಆರಂಭ ನೀಡಲು ವಿಫಲರಾದರು. ತಂಡ 10 ಓವರುಗಳಲ್ಲಿ 2 ವಿಕೆಟ್‌ಗೆ 54 ರನ್ ಗಳಿಸಿ ಪರದಾಡುತ್ತಿದ್ದ ಹಂತದಲ್ಲಿ ಶಿವರ್ ಬ್ರಂಟ್ ನೆರವಿಗೆ ಬಂದರು. ಕೊನೆಯ 10 ಓವರುಗಳಲ್ಲಿ ತಂಡ 107 ರನ್ ಬಾಚಿಕೊಂಡಿತು.

ಶಿವರ್ ಬ್ರಂಟ್ ಅವರಿಗೆ ನಿಕೋಲಾ ಕ್ಯಾರಿ (ಔಟಾಗದೇ 32, 20ಎ, 4x5) ಉತ್ತಮ ಬೆಂಬಲ ನೀಡಿದರು. ನಾಲ್ಕನೇ ವಿಕೆಟ್‌ಗೆ ಅಮೂಲ್ಯ 85 ರನ್ (45 ಎಸೆತ) ಸೇರಿಸಿ ಸವಾಲಿನ ಮೊತ್ತ ಕಲೆಹಾಕಲು ನೆರವಾದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರುಗಳಲ್ಲಿ 5ಕ್ಕೆ 161 (ಅಮನ್ಜೋತ್ ಕೌರ್ 38, ನ್ಯಾಟ್ ಶಿವರ್-ಬ್ರಂಟ್ 65, ನಿಕೋಲಾ ಕ್ಯಾರಿ ಔಟಾಗದೇ 32; ಶಿಖಾ ಪಾಂಡೆ 25ಕ್ಕೆ1, ಸೋಫಿ ಎಕ್ಲೆಸ್ಟೋನ್ 26ಕ್ಕೆ1). ಯುಪಿ ವಾರಿಯರ್ಸ್: 18.1 ಓವರ್‌ಗಳಲ್ಲಿ 3 ವಿಕೆಟ್‌ಗೆ 162 (ಮೆಗ್ ಲ್ಯಾನಿಂಗ್ 25, ಫೋಬಿ ಲಿಚ್‌ಫೀಲ್ಡ್ 25, ಹರ್ಲೀನ್ ಡಿಯೋಲ್ ಔಟಾಗದೇ 64, ಕ್ರೊಯೆ ಟ್ರಯಾನ್ ಔಟಾಗದೇ 27; ನ್ಯಾಟ್ ಶಿವರ್ ಬ್ರಂಟ್ 28ಕ್ಕೆ 2). ಪಂದ್ಯದ ಆಟಗಾರ್ತಿ: ಹರ್ಲೀನ್ ಡಿಯೋಲ್

ಹ್ಯಾಟ್ರಿಕ್ ಗೆಲುವಿನ ಛಲದಲ್ಲಿ ಮಂದಾನ ಪಡೆ



ಸ್ಮೃತಿ ಮಂದಾನ

ನವಿ ಮುಂಬೈ (ಪಿಟಿಐ): ಸತತ ಎರಡು ಗೆಲುವಿನೊಂದಿಗೆ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶುಕ್ರವಾರ ಮಹಿಳಾ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಐದು ತಂಡಗಳನ್ನು ಒಳಗೊಂಡ ಟೂರ್ನಿಯ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಜೈಂಟ್ಸ್ ತಂಡವು ಮಂಗಳವಾರ ಮುಂಬೈ ಇಂಡಿಯನ್ಸ್ ವಿರುದ್ಧ ಪರಾಭವಗೊಂಡು ಮೂರನೇ ಸ್ಥಾನಕ್ಕೆ ಕುಸಿದಿದೆ. ಆರ್‌ಸಿಬಿ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಇದೀಗ ಹ್ಯಾಟ್ರಿಕ್ ಗೆಲುವಿನತ್ತ ಗಮನ ಹರಿಸಿದೆ.

ಸ್ಮೃತಿ ಮಂದಾನ ನಾಯಕತ್ವದ ಬೆಂಗಳೂರು ತಂಡವು ಹಾಲಿ ಆವೃತ್ತಿಯಲ್ಲಿ ಆಡಿದ ಎರಡೂ ಪಂದ್ಯಗಳಲ್ಲೂ ಉತ್ತಮ ಪ್ರದರ್ಶನ ನೀಡಿದೆ. ಹಾಲಿ ಚಾಂಪಿಯನ್ ಇಂಡಿಯನ್ಸ್ ತಂಡಕ್ಕೆ ಆಘಾತ ನೀಡಿ ಅಭಿಯಾನ ಆರಂಭಿಸಿದ್ದ ಆರ್‌ಸಿಬಿ ತಂಡವು ತನ್ನ ಎರಡನೇ ಪಂದ್ಯದಲ್ಲಿ ಯು.ಪಿ. ವಾರಿಯರ್ಸ್ ತಂಡವನ್ನು ಮಣಿಸಿತ್ತು.

ಆ್ಯಷ್ಲೆ ಗಾರ್ಡನರ್ ನಾಯಕತ್ವದ ಜೈಂಟ್ಸ್ ತಂಡವು ಗೆಲುವಿನ ಹಳಿಗೆ ಮರಳುವ ಛಲದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್